# ಶ್ರೀಮಾತೆಯವರ ಆಧ್ಯಾತ್ಮಿಕ ಜೀವನ ಯಾತ್ರೆ

## ಭಾಗ–1


**ಅಖಿಲ ಭಾರತ ಪತ್ರಿಕೆ**

**ಫೆಬ್ರವರಿ – 2015**

ಬೆಲೆ : 15/–



*"I have a sweet little Mother*
*who lives in my heart,*
*we are so happy together,*
*we shall never part.'*

- The Mother

## ಅಖಿಲ ಭಾರತ ಪತ್ರಿಕೆ

**ಸಂಪಾದಕರು**
ಡಾ॥ ಕೆ.ಎಸ್. ಆಮೂರ
ಎಂ.ಎಸ್‌ಸಿ, ಪಿಎಚ್‌ಡಿ,
ಶಿವಗಿರಿ, ಧಾರವಾಡ – 580 007.
ಫೋನ್ : 0836 – 2774044

**ಪರಿಶೀಲನಾ ಸಮಿತಿ, ಧಾರವಾಡ**
ಡಾ॥ ಗುರುಲಿಂಗ ಕಾಪಸೆ
ಡಾ॥ ಪಾರ್ವತಿ ನಾರಾಯಣರಾವ್
ಡಾ॥ ಸುಶೀಲಾ ಬಳುಂಡಗಿ

**ಡಿ.ಟಿ.ಪಿ**
ಗಣಕಯಂತ್ರ ಕೇಂದ್ರ
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ)
ಜೆ.ಪಿ. ನಗರ, ಮೊದಲನೇ ಹಂತ,
ಬೆಂಗಳೂರು – 560 078.

**ಆಫ್‌ಸೆಟ್ ಮುದ್ರಣ :**
ಶೇಷ ಸಾಯಿ ಇ ಫಾರ್ಮ್ಸ್ ಪ್ರೈ.ಲಿ.
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ)
ಜೆ.ಪಿ. ನಗರ, ಮೊದಲನೇ ಹಂತ,
ಬೆಂಗಳೂರು – 560 078.

**ಪ್ರಕಾಶಕರು :**
ಶ್ರೀ ಅಜಿತ್ ಸಬ್ನೀಸ್,
ಕಾರ್ಯಾಧ್ಯಕ್ಷರು, ಶ್ರೀ ಅರವಿಂದೋ
ಸೊಸೈಟಿ ರಾಜ್ಯ ಸಮಿತಿ, ಕರ್ನಾಟಕ,
"ಶ್ರೀ ಅರವಿಂದ ಮಾರ್ಗ"
ಜೆ.ಪಿ. ನಗರ, ಮೊದಲನೇ ಹಂತ,
ಬೆಂಗಳೂರು – 560 078.

**ಪ್ರಾಯೋಜಕರು :**
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ)
ಜೆ.ಪಿ. ನಗರ, ಮೊದಲನೇ ಹಂತ,
ಬೆಂಗಳೂರು–560078.
ಫೋನ್ : 080 – 2244 9882
http://abp.sirinudi.org


## ಪರಿವಿಡಿ

### "ಶ್ರೀಮಾತೆಯವರ ಆಧ್ಯಾತ್ಮಿಕ ಜೀವನ ಯಾತ್ರೆ"

**ಭಾಗ–1: ಶ್ರೀ ಅರವಿಂದರನ್ನು ಶ್ರೀಮಾತೆಯವರು ಭೇಟಿ ಮಾಡುವುದಕ್ಕಿಂತ ಮೊದಲಿನ ಅವರ ಆಧ್ಯಾತ್ಮಿಕ ಜೀವನ ಯಾತ್ರೆಯ ಇಣುಕು ನೋಟಗಳು.**

**ಈ ನೋಟಗಳನ್ನು ಶ್ರೀಮಾತೆಯವರ "ಪ್ರಾರ್ಥನೆಗಳು ಹಾಗೂ ಧ್ಯಾನಗಳು" ಗ್ರಂಥದಿಂದ ಆಯ್ದುಕೊಳ್ಳಲಾಗಿದೆ.**


**ಅನು : ಡಾ. ಕೆ.ಎಸ್. ಆಮೂರ**

ಶ್ರೀಮಾತೆಯವರ ಆಧ್ಯಾತ್ಮಿಕ ಜೀವನ ಯಾತ್ರೆಯ ಹಿನ್ನೆಲೆ 3

**ಅನು : ದಿ. ಪ್ರಹ್ಲಾದ ನರೇಗಲ್ಲ***

ಮನುಕುಲಕ್ಕಾಗಿ ಭಗವಂತನ ಪ್ರಾರ್ಥನೆ 7

**ಅನು : ಶ್ರೀ ಪುರುಷೋತ್ತಮ ಗಲಗಲಿ**

ಮಹತ್ವಪೂರ್ಣವಾದ ಭೇಟಿ 40

**ಅನು : ಶ್ರೀ ವೀರೇಂದ್ರ ಸಿಂಪಿ**

ಐಕ್ಯೈಕರಾದ ನಾವಿಬ್ಬರು 48

**ವಾರ್ತಾಪತ್ರ** 58


**(ಸಂಪಾದಕರ ಟಿಪ್ಪಣಿ:** "ಪ್ರಾರ್ಥನೆಗಳು ಹಾಗೂ ಧ್ಯಾನಗಳು" ಗ್ರಂಥದಲ್ಲಿ ದಾಖಲಿಸಲಾದ ಶ್ರೀಮಾತೆಯವರ ಪ್ರಾರ್ಥನೆಗಳಲ್ಲಿ ಕೆಲವನ್ನು ಆಯ್ದುಕೊಂಡು ಈ ಸಂಕಲನದಲ್ಲಿ ಸೇರಿಸಲಾಗಿದೆ. ಮಾರ್ಚ್ 30, 1914ರಂದು ಶ್ರೀಮಾತೆಯವರು ಶ್ರೀ ಅರವಿಂದರನ್ನು ಭೇಟಿ ಮಾಡುವ ಮೊದಲು ದಾಖಲಿಸಿದ್ದ ಪ್ರಾರ್ಥನೆಗಳಲ್ಲಿ ಕೆಲವನ್ನು ಮಾತ್ರ ಇಲ್ಲಿ ಕೈಗೆತ್ತಿಕೊಂಡಿದ್ದೇವೆ. ಎಪ್ರಿಲ್ 2015ರ ಸಂಚಿಕೆಯಲ್ಲಿ ಇದರ ಇನ್ನೊಂದು ಭಾಗವನ್ನು ಭಾಗ–2 ಎಂದು ಹೊರತರುವ ಯೋಜನೆಯಿದೆ, ಅದರಲ್ಲಿ ಶ್ರೀಮಾತೆಯವರು ಶ್ರೀ ಅರವಿಂದರನ್ನು ಭೇಟಿ ಮಾಡಿದ ಮಹತ್ವಪೂರ್ಣ ಘಟನೆಯ ನಂತರ ದಾಖಲಿಸಿದ ಪ್ರಾರ್ಥನೆಗಳಿರುತ್ತವೆ. ಈ ಸಂಚಿಕೆಯಲ್ಲಿ ಇನ್ನೂ ಹೆಚ್ಚಿನ ಮಾಹಿತಿಯನ್ನು ಸೇರಿಸಲಾಗಿದೆ. ಶ್ರೀಮಾತೆಯವರು ಪಾಂಡಿಚೇರಿಗೆ ಬರುವುದಕ್ಕಿಂತ ಮೊದಲು ಅವರ ಯೋಗ ಹೇಗೆ ಆಕಾರ ಪಡೆಯುತ್ತಿತ್ತು ಎಂಬುದರ ಬಗ್ಗೆ ಹೆಚ್ಚು ಒಳ್ಳೆಯ ಚಿತ್ರಣವನ್ನು ಆ ಮಾಹಿತಿ ಕೊಡುತ್ತದೆ. ಆದಾಗ್ಯೂ ಶ್ರೀ ಅರವಿಂದರ ಹಾಗೂ ಶ್ರೀಮಾತೆಯವರ ಅನುಭವಗಳು ಹಾಗೂ ಸಿದ್ಧಿಗಳ ಆಳ, ಅಗಲಗಳ ಪೂರ್ತಿ ನೋಟವನ್ನು ಕುರಿತು ಯಾವ ಸಂಕಲನವೂ ಎಂದಿಗೂ ಕೊಡಲಾರದು ಎಂಬುದನ್ನು ಗಮನಿಸಬೇಕಾಗುತ್ತದೆ, ಏಕೆಂದರೆ ಅವರ ಜೀವನ ಜನರ ಮೇಲ್ನೋಟಕ್ಕೆ ಸಿಗುವಂತಹದಿರಲಿಲ್ಲ.)

* ದಿ. ಪ್ರಹ್ಲಾದ ನರೇಗಲ್ಲ ಅವರು ಶ್ರೀಮಾತೆಯವರ ಗ್ರಂಥದ ಕನ್ನಡ ಅನುವಾದ ಮಾಡಿದ್ದರು. ಅದನ್ನು ಶ್ರೀ ಅರವಿಂದೋ ಸೋಸೈಟಿ, ಗುಲಬರ್ಗಾ 1998ರಲ್ಲಿ ಪ್ರಕಟಿಸಿತ್ತು. ಈ ಸಂಚಿಕೆಗೆ ಅವಶ್ಯವಿದ್ದ ಅನುವಾದದ ಭಾಗವನ್ನು ಆಯ್ದುಕೊಂಡು ಪರಿಷ್ಕರಿಸಿ ಇಲ್ಲಿ ಕೊಡಲಾಗಿದೆ. (ಸಂಪಾದಕರು)



ಆತ್ಮವೊಂದು ತನ್ನ ಸ್ವರ್ಗೀಯ ಮೂಲದ ಬಗ್ಗೆ ಅರಿವುಳ್ಳದ್ದಾಗಿ
ಸ್ವರ್ಗವನು ಮಾನವ ಆಕಾರಕ್ಕೆ ಪರಿವರ್ತನೆಗೊಳಿಸುತ್ತ
ಪೃಥ್ವಿಯ ಅಪರಿಪೂರ್ಣ ಎರಕದಲಿ ಅವರೋಹಣ ಮಾಡಿಹುದು
ಮರ್ತ್ಯತ್ವಕ್ಕೆ ಇಳಿದ ಅದು ರೋದಿಸಲಿಲ್ಲ, ಆದರೆ
ಎಲ್ಲರನು ಭವ್ಯ ಹಾಗೂ ಪ್ರಶಾಂತ ಕಣ್ಣುಗಳಿಂದ ದೃಷ್ಟಿಸಿ ನೋಡಿಹುದು.

**(ಸಾವಿತ್ರಿ, ಪು. 353)**

*

## ಶ್ರೀಮಾತೆಯವರ ಆಧ್ಯಾತ್ಮಿಕ ಜೀವನ ಯಾತ್ರೆಯ ಹಿನ್ನೆಲೆ

ನನ್ನ ಸಾಧನೆಯನ್ನು ಜನ್ಮತಾಳಿದಂದಿನಿಂದಲೇ ಪ್ರಾರಂಭಿಸಿದೆ, ಆದರೆ ಆಗ ನಾನು ಅದನ್ನು ಕೈಕೊಳ್ಳುತ್ತಿದ್ದೇನೆ ಎಂಬ ಅರಿವು ನನಗಿರಲಿಲ್ಲ. ನಾನು ಅದನ್ನು ಜೀವನದುದ್ದಕ್ಕೂ ಮುಂದುವರಿಸಿಕೊಂಡು ಬಂದಿದ್ದೇನೆ, ಎಂದರೆ ಎಂಬತ್ತು ವರ್ಷಗಳ ಕಾಲದವರೆಗೆ ಅದು ಮುಂದುವರಿದುಕೊಂಡು ಬಂದಿದೆ. ಇಪ್ಪತ್ತೆರಡು ಇಲ್ಲವೆ ಇಪ್ಪತ್ಮೂರನೆಯ ವಯಸ್ಸಿನಿಂದ ನಾನು ಉದ್ದೇಶಪೂರ್ವಕವಾದ ಹಾಗೂ ಪ್ರಜ್ಞಾಪೂರ್ಣ ಸಾಧನೆಯನ್ನು ಸಿದ್ಧಗೊಳಿಸಿದ ತಳಹದಿಯ ಮೇಲೆ ಪ್ರಾರಂಭಿಸಿದೆ. ನನ್ನ ವಯಸ್ಸು ಈಗ ಎಂಬತ್ತಕ್ಕಿಂತ ಹೆಚ್ಚಾಗಿದೆ: ನಾನು ಅದನ್ನಲ್ಲದೆ ಬೇರೆ ಯಾವುದನ್ನೂ ಕುರಿತು ಯೋಚಿಸುತ್ತಿರಲಿಲ್ಲ, ಅದನ್ನಲ್ಲದೆ ಬೇರೆ ಯಾವುದನ್ನೂ ಬಯಸಿರಲಿಲ್ಲ, ಬೇರೆ ಯಾವುದರಲ್ಲಿಯೂ ಸ್ವಾರಸ್ಯ ಕಂಡುಕೊಳ್ಳಲಿಲ್ಲ. ಮತ್ತು ನನ್ನ ಜೀವನದಲ್ಲಿ ಕ್ಷಣಕಾಲ ಕೂಡ ನನಗೆ ಆ 'ತತ್' ಬೇಕಾಗಿದೆ ಎಂಬುದನ್ನು ಮರೆತಿರಲಿಲ್ಲ. ನೆನಪಿಟ್ಟುಕೊಂಡಿರುವ ಅವಧಿಗಳು ಮತ್ತು ಮರೆತು ಬಿಟ್ಟಿರುವ ಅವಧಿಗಳು ಎಂಬುವಿರಲಿಲ್ಲ; ಇಪ್ಪತ್ನಾಲ್ಕನೆಯ ವಯಸ್ಸಿನಿಂದ ಅದು ಹಗಲು, ರಾತ್ರಿ ಸತತ ಮುಂದುವರಿದುಕೊಂಡು ಹೋಗುವಂತಹದು, ನಿಂತುಹೋಗದಂತಹದು ಆಗಿತ್ತು. ವಾಸ್ತವದಲ್ಲಿ ನನ್ನ ಯೋಗ ಅನುಸರಿಸಿದ ಕ್ರಮಬದ್ಧತೆಯನ್ನು ನೋಡಿದಾಗ ಹಾಗೆನಿಸುತ್ತದೆ. ನಾನು ಐದು ವರ್ಷದವಳಾಗಿದ್ದಾಗ (ಅದನ್ನು ನಾನು ಅದಕ್ಕೂ ಮೊದಲು ಪ್ರಾರಂಭಿಸಿರಬಹುದು, ಆದರೆ ಅದರ ನೆನಪು ಸ್ವಲ್ಪ ಅಸ್ಪಷ್ಟ ಹಾಗೂ ನಿಖರವಲ್ಲದ್ದಾಗಿದೆ) . . . ಆದರೆ ಐದು ವರ್ಷದವಳಾದ ನಂತರ, ನನ್ನ ಪ್ರಜ್ಞೆಯಲ್ಲಿ (ಮಾನಸಿಕ ನೆನಪಲ್ಲ, ಆದರೆ–ಅದನ್ನು ಹೇಳುವುದು ಹೇಗೆ?–ಅದನ್ನು ಗಮನಿಸಲಾಗಿತ್ತು, ಅದು ನನ್ನ ಪ್ರಜ್ಞೆಯಲ್ಲಿ ಒಂದು ಸಂಕೇತದ ರೂಪದಲ್ಲಿದೆ)... ಸರಿ, ನಾನು ಪ್ರಜ್ಞೆಯೊಂದಿಗೆ ಪ್ರಾರಂಭಿಸಿದೆ. ಸಹಜವಾಗಿ ಅದೇನಿತ್ತು ಎಂಬುದರ ವಿಚಾರ ನನಗೆ ತಿಳಿದಿರಲಿಲ್ಲ. ಆದರೆ ಆ ಪ್ರಜ್ಞೆಯಿರುವುದರ ಮೊದಲ ಅನುಭವ ಇಲ್ಲಿ (ಶಿರದ ಮೇಲಿರುವ ಸಂಕೇತ), ಅದು ದೈವೀ ಪ್ರಕಾಶ ಹಾಗೂ ದೈವೀ ಶಕ್ತಿಯಾಗಿರುವುದರ ಭಾವನೆ ನನಗೆ ಬಂದಿತು, ಅದನ್ನು ನಾನು ಇಲ್ಲಿ (ಅದೇ ಸಂಕೇತ) ರುವುದರ ಭಾವನೆಯನ್ನು ನನ್ನ ಐದನೆಯ ವರ್ಷದಲ್ಲಿ ತಂದುಕೊಂಡೆ. ಅದು ಬಹಳ ಸಂತೋಷಕರ ಸಂವೇದನೆಯಾಗಿರುತ್ತಿತ್ತು. ನನಗಾಗಿ ತಯಾರಿಸಿದ್ದ ಆರಾಮ ಕುರ್ಚಿಯ ಮೇಲೆ ನನ್ನ ಕೋಣೆಯಲ್ಲಿ ಏಕಾಕಿಯಾಗಿ ಕುಳಿತುಕೊಳ್ಳುತ್ತಿದ್ದೆ ಮತ್ತು (ಅದೇನಿತ್ತೆಂಬುದು ನನಗೆ ತಿಳಿದಿರಲಿಲ್ಲ, ಸ್ವಲ್ಪವೂ ತಿಳಿದಿರಲಿಲ್ಲ,



ಮಾನಸಿಕವಾಗಿ ಶೂನ್ಯದ ಹಾಗಿರುತ್ತಿತ್ತು) ನನಗೆ ಬಹಳ ಬಲವತ್ತರವಾಗಿರುವ ಹಾಗೂ ಪ್ರಕಾಶಮಾನವಾಗಿರುವ ಏನೋ ಒಂದಿರುವುದರ ಭಾವನೆ ಬರುತ್ತಿತ್ತು, ಮತ್ತು ಅದು ಇಲ್ಲಿ (ಶಿರದ ಮೇಲೆ) ಇರುತ್ತಿತ್ತು. ದೈವೀ ಪ್ರಜ್ಞೆ, "ಅದನ್ನು ನಾನು ಜೀವಿಸಬೇಕಾಗಿದೆ, ಅದು ನಾನಾಗಬೇಕಾಗಿದೆ" ಎಂಬ ಭಾವನೆ ಬರುತ್ತಿತ್ತು. ಸ್ವಾಭಾವಿಕವಾಗಿ ಅದು ಅವೆಲ್ಲ ಶಬ್ದಗಳಿಂದ ಕೂಡಿಕೊಂಡಿರುತ್ತಿದ್ದಿಲ್ಲ, ಆದರೆ . . . (ಶ್ರೀಮಾತೆಯವರು ಮೇಲ್ಮುಖವಾಗಿರುವ ಅಭೀಪ್ಸೆಯ ಸಂಕೇತ ಮಾಡಿ ತೋರಿಸುತ್ತಾರೆ). ನಂತರ ನಾನದನ್ನು ಕೆಳಗೆಳೆದು ತರುತ್ತಿದ್ದೆ, ಏಕೆಂದರೆ ಅದು ನಿಜವಾಗಿ ನನ್ನ ಅಸ್ತಿತ್ವದ ಮೂಲಕಾರಣವಾಗಿತ್ತು.

(Reference: The Mother: The Birth and Growth of a Flame: Anurag Banerjee: Publisher: Overman Foundation Kolkata, pp.13-14)

*

### ಶ್ರೀಮಾತೆಯವರ ಪ್ರಾರ್ಥನೆಗಳನ್ನು ಕುರಿತು ಶ್ರೀ ಅರವಿಂದರ ಕೆಲವು ಪತ್ರಗಳು

**ಪ್ರಶ್ನೆ :** *ಶ್ರೀಮಾತೆಯವರು 1914ರಲ್ಲಿ ಬರೆದ ಕೆಲವು ಪ್ರಾರ್ಥನೆಗಳಲ್ಲಿ ಅವರು ಪರಿವರ್ತನೆ ಹಾಗೂ ಪ್ರಕಟಣೆ ಕುರಿತು ಮಾತನಾಡುತ್ತಾರೆ, ಆಗ ಅವರು ಇಲ್ಲಿರಲಿಲ್ಲ, ಹಾಗಾಗಿ ಅದರರ್ಥ ಅವರಲ್ಲಿ ಈ ವಿಚಾರಗಳು ದೀರ್ಘಕಾಲದಿಂದ ಇದ್ದವು ಎಂದಾಗುವುದಿಲ್ಲವೆ?*

**ಶ್ರೀ ಅ :** ಶ್ರೀಮಾತೆಯವರು ತಮ್ಮ ತಾರುಣ್ಯಕಾಲದಿಂದ ಅಷ್ಟೇ ಅಲ್ಲ, ಆದರೆ ಅವರ ಬಾಲ್ಯ ಕಾಲದಿಂದಲೂ ಕೂಡ ಆಧ್ಯಾತ್ಮಿಕವಾಗಿ, ಮೇಲ್ಗಡೆಗಿರುವ ಪ್ರಜ್ಞೆಯ ಬಗ್ಗೆ, ಪ್ರಜ್ಞೆಯುಳ್ಳವರಾಗಿದ್ದರು ಮತ್ತು ಸಾಧನೆಯನ್ನು ಕೈಕೊಂಡಿದ್ದರು, ಮತ್ತು ಈ ಜ್ಞಾನವನ್ನು ಭಾರತಕ್ಕೆ ಬರುವುದಕ್ಕಿಂತಲೂ ಮೊದಲೇ ಅಭಿವೃದ್ಧಿಪಡಿಸಿ ಕೊಂಡಿದ್ದರು.

**ಡಿಸೆಂಬರ 23, 1933**

ಭಗವಂತ ಮನುಕುಲದ ತೋರಿಕೆಯನ್ನು ಧಾರಣ ಮಾಡಿರುತ್ತಾನೆ, ಮಾರ್ಗದಲ್ಲಿ ಸಾಗಿ ಹೋಗುವುದಕ್ಕಾಗಿ ಹಾಗೂ ಮಾನವ ಸತ್ತೆಗಳಿಗೆ ತೋರಿಸಿ–ಕೊಡುವುದಕ್ಕಾಗಿ ಬಾಹ್ಯ ಮಾನವ ಸ್ವಭಾವವನ್ನು ಹೊಂದಿರುತ್ತಾನೆ, ಆದರೆ ಅವನು ಭಗವಂತನಾಗಿರುವುದು ನಿಂತು ಹೋಗುವುದಿಲ್ಲ. ಸಂಭವಿಸುತ್ತಿರುವುದು ದೈವೀ

ಪ್ರಕಟಣೆಯಾಗಿರುತ್ತದೆ, ಅದು ಅಭಿವೃದ್ಧಿಗೊಳ್ಳುತ್ತಿರುವ ದೈವೀ ಪ್ರಜ್ಞೆ, ಮಾನವ ಪ್ರಜ್ಞೆ ದೈವಿಕವಾಗುವುದು ಆಗಿರುವುದಿಲ್ಲ. ಶ್ರೀಮಾತೆಯವರು ತಮ್ಮ ಬಾಲ್ಯದಲ್ಲಿಯೇ ಆಂತರಿಕವಾಗಿ ಮಾನವ ಸ್ವಭಾವದ ಮೇಲ್ಗಡೆಗಿದ್ದರು, ಹಾಗಾಗಿ ಬಹಳ ಜನರು ನೋಡುವ ದೃಷ್ಟಿ ತಪ್ಪಾದದ್ದಾಗಿರುತ್ತದೆ.

**ಪ್ರಶ್ನೆ :** *ಶ್ರೀಮಾತೆಯವರ "ಪ್ರಾರ್ಥನೆಗಳು" ಅಭೀಪ್ಸೆ ಪಡುತ್ತಿರುವ ಚೈತ್ಯವಿರುವ ನಮಗೆ ಭಗವಂತನನ್ನು ಕುರಿತು ಹೇಗೆ ಪ್ರಾರ್ಥನೆ ಮಾಡಬೇಕು ಎಂಬುದನ್ನು ತೋರಿಸಿಕೊಡುವುದಕ್ಕಾಗಿ ಇವೆ ಎಂದು ನಾನು ಕಲ್ಪನೆ ಮಾಡಿಕೊಳ್ಳುತ್ತೇನೆ.*

**ಶ್ರೀ ಅ :** ಹೌದು.

**ಅಗಸ್ಟ 17, 1938**

ಜಗತ್ತಿಗಾಗಿ ಭಗವಂತ ಮೊದಲು ಸಾಧನೆ ಕೈಕೊಳ್ಳುತ್ತಾನೆ, ನಂತರ ಮೇಲ್ಗಡೆ–ಯಿಂದ ಕೆಳಗಿಳಿಸಿದ್ದನ್ನು ಇತರರಿಗೆ ಕೊಡುತ್ತಾನೆ. ಸಿದ್ಧಿಗಳು ಹಾಗೂ ಅನುಭವ–ಗಳು ಇಲ್ಲದ ಸಾಧನೆ ಇರುವುದಿಲ್ಲ. ಪ್ರಾರ್ಥನೆಗಳು ಶ್ರೀಮಾತೆಯವರ ಅನುಭವ–ಗಳನ್ನು ದಾಖಲಿಸುತ್ತವೆ.

ಪ್ರಾರ್ಥನೆಗಳು, ಹೆಚ್ಚಿನ ಮಟ್ಟಿಗೆ, ಪೃಥ್ವಿ–ಪ್ರಜ್ಞೆಯೊಂದಿಗೆ ಗುರುತಿಸಿಕೊಂಡು ಬರೆದವುಗಳಾಗಿವೆ. ನಿಮ್ನ ಪ್ರಕೃತಿಯಲ್ಲಿ ಶ್ರೀಮಾತೆಯವರು ಇದ್ದುಕೊಂಡು ಉಚ್ಚ ಪ್ರಕೃತಿಯಲ್ಲಿರುವ ಶ್ರೀಮಾತೆಯವರನ್ನು ಕುರಿತು ಕೈಕೊಂಡದ್ದಾಗಿದೆ. ಶ್ರೀಮಾತೆ ಯವರೇ ಸ್ವತಃ ಪೃಥ್ವಿ–ಪ್ರಜ್ಞೆಯ ಸಾಧನೆಯನ್ನು ಪರಿವರ್ತನೆಗಾಗಿ ಕೈಕೊಳ್ಳುತ್ತ, ಮೇಲ್ಗಡೆಗಿರುವ ತಮಗೇ ಪ್ರಾರ್ಥಿಸಿಕೊಳ್ಳುತ್ತಿರುತ್ತಾರೆ, ಅಲ್ಲಿದ್ದವರಿಂದ ಪರಿವರ್ತನೆಗಾಗಿ ಶಕ್ತಿಗಳು ಬರುತ್ತವೆ. ಇದು ಪೃಥ್ವಿ–ಪ್ರಜ್ಞೆ ಹಾಗೂ ಉಚ್ಚತರ ಪ್ರಜ್ಞೆ ಇವು ಒಂದರೊಡನೆ ಇನ್ನೊಂದು ತಾದಾತ್ಮ್ಯ ಪಡೆಯುವವರೆಗೆ ನಡೆಯುತ್ತ ಹೋಗುತ್ತದೆ. ಭಗವಂತನಿಂದ ಭಗವಂತನಿಗೆ ಕೈಕೊಂಡ ಈ ಬಗೆಯ ಪ್ರಾರ್ಥನೆ–ಯನ್ನು ನೀವು ರಾಮಾಯಣ ಹಾಗೂ ಮಹಾಭಾರತ ಇವುಗಳಲ್ಲಿ ಕಂಡುಕೊಳ್ಳ–ಬಹುದು.

**ಅಗಸ್ಟ 21, 1936, CWM 1, 383**

*



**ತಮ್ಮ ಪ್ರಾರ್ಥನೆಗಳನ್ನು ಕುರಿತು ಶ್ರೀಮಾತೆಯವರು**

'ಪ್ರಾರ್ಥನೆಗಳು ಹಾಗೂ ಧ್ಯಾನಗಳು' ಇರುವ ಈ ವಿಷಯ ತನಗೆ ತಾನೇ ಬಂದಿತು. ಅದನ್ನು ಬರೆಯುವಾಗ ಪ್ರತಿಸಲ ನನಗೆ ಹೇಳಿಕೊಡಲಾಗುತ್ತಿತ್ತು. ನಾನು ಏಕಾಗ್ರತೆ ಕೈಕೊಂಡ ನಂತರ ಕೊನೆಗೆ ಬರೆದಿಡುತ್ತಿದ್ದೆ ಮತ್ತು ಅದು ನನ್ನ ಮನಸ್ಸಿನ ಮೂಲಕ ಹಾದು ಹೋಗುತ್ತಿರಲಿಲ್ಲ, ಅದು ಹಾಗೇ ಬರುತ್ತಿತ್ತು–ಸ್ಪಷ್ಟವಾಗಿ ಅದು ಸುಂದರ ರೂಪವನ್ನು ಇಷ್ಟಪಡುವ ಯಾರೋ ಒಬ್ಬರಿಂದ ಬರುತ್ತಿತ್ತು. ಅದನ್ನು ಬೇರೆ ಯಾರೂ ನೋಡದಿರಲೆಂದು ಪೆಟ್ಟಿಗೆಯಲ್ಲಿ ಭದ್ರವಾಗಿರಿಸಿ ಅದಕ್ಕೆ ಕೀಲಿ ಹಾಕಿರುತ್ತಿದ್ದೆ. ಆದರೆ ನಾನಿಲ್ಲಿಗೆ ಬಂದಾಗ ಶ್ರೀ ಅರವಿಂದರು ಅದರ ಬಗ್ಗೆ ವಿಚಾರಿಸಿದರು. ಹಾಗಾಗಿ ನಾನು ಅವರಿಗೆ ಕೆಲವು ಪುಟಗಳನ್ನು ನೋಡಲು ಕೊಟ್ಟೆ ಮತ್ತು ನಂತರ ಅವರು ಉಳಿದೆಲ್ಲವನ್ನೂ ನೋಡಲು ಬಯಸಿದರು. ಹಾಗಿರದೆ ಹೋಗಿದ್ದರೆ ಅವುಗಳನ್ನು ಯಾವಾಗಲೂ ಕೀಲಿ ಹಾಕಿದ ಪೆಟ್ಟಿಗೆಯಲ್ಲಿ ಇಟ್ಟುಬಿಡುತ್ತಿದ್ದೆ. ಉಳಿದದ್ದನ್ನು ನಾನು ನಾಶಮಾಡಿದೆ–ಅವುಗಳಿದ್ದ ಐದು ದಪ್ಪ ಗ್ರಂಥಗಳಿದ್ದವು, ಅವುಗಳಲ್ಲಿ ದಿನಾಲು ಬರೆದಿಟ್ಟದ್ದು ಇತ್ತು, (ಸ್ವಾಭಾವಿಕವಾಗಿ ಅವುಗಳಲ್ಲಿ ಕೆಲವು ಪುನರಾವರ್ತನೆಗೊಂಡವುಗಳು ಇದ್ದವು); ಅದೆಲ್ಲ ನಾನು ಏಕಾಗ್ರತೆ ವಹಿಸುತ್ತಿದ್ದುದರಿಂದ ಬಂದ ಪರಿಣಾಮ ಸ್ವರೂಪದ್ದಾಗಿತ್ತು. ಹಾಗಾಗಿ ಯಾವುದನ್ನು ಪ್ರಕಟಿಸಬೇಕು ಎಂಬುದನ್ನು ಆಯ್ದುಕೊಂಡವುಗಳನ್ನು ನಕಲು ಮಾಡಿಕೊಟ್ಟೆ, ನಂತರ ಆ ಪುಟಗಳನ್ನು ಒಟ್ಟುಗೂಡಿಸಿದೆ ಮತ್ತು ಇನ್ನುಳಿದ ಎಲ್ಲವನ್ನು ಅಗ್ನಿಗೆ ಅರ್ಪಣ ಮಾಡಿದೆ . . .

ಅನುಯಾಯಿಯೊಬ್ಬನೊಂದಿಗೆ ನಡೆಸಿದ ಮಾತುಕತೆಯಿಂದ:

**ಸಪ್ಟಂಬರ 15, 1962**

*



ತಮ್ಮಾತ್ಮಗಳಿಂದ ಕೆಲವರು ಭಾವನೆ ತಂದುಕೊಂಡಿಹರು, ಅವಳೊಡನೆ
ರೋಮಾಂಚನಗೊಂಡಿಹರು,
ಶ್ರೇಷ್ಠತೆಯೊಂದು ಹತ್ತಿರವಿರುವ ಭಾವನೆ ಬಂದಿಹುದು, ಆದಾಗ್ಯೂ
ಮನಸ್ಸಿನ ಗ್ರಹಿಕೆಯಾಚೆಗಿಹುದು,
ಅವಳನ್ನು ನೋಡುವುದು ಆರಾಧಿಸುವುದಕ್ಕಾಗಿ ಕರೆ ನೀಡಿದಂತಿಹುದು,
ಅವಳ ಹತ್ತಿರವಿರುವಿಕೆ ಉಚ್ಚ ಆಧ್ಯಾತ್ಮಿಕ ಸಂಸರ್ಗಕ್ಕೆ ಹತ್ತಿರ ಎಳೆದು
ತಂದಂತಿಹುದು.

**(ಸಾವಿತ್ರಿ, ಪು. 363–64)**

*

## ಮನುಕುಲಕ್ಕಾಗಿ ಭಗವಂತನ ಪ್ರಾರ್ಥನೆ

### ಭಗವಂತನೊಡನೆ ಏಕತೆ

ಇಷ್ಟೊಂದು ನಿಷ್ಕಪಟ ಬಯಕೆಯಿಂದ ನಿನ್ನನ್ನು ಅರಸುತ್ತಿರುವ ಆ ಆಂಗ್ಲ ತರುಣನಿಗೆ ನಿನ್ನೆ ಹೇಳಿದೆ: "ನಾನು ನಿಶ್ಚಿತವಾಗಿ (ಭಗವಂತನನ್ನು) ನಿನ್ನನ್ನು ಕಂಡುಕೊಂಡಿದ್ದೇನೆ ಹಾಗೂ ನಿನ್ನೊಡನಿರುವ ಏಕತೆ ಸತತ ಇರುತ್ತದೆ." ನಿಜವಾಗಿ ಇಂತಹ ಈ ಸ್ಥಿತಿಯ ಬಗ್ಗೆ ನಾನು ಅರಿವುಳ್ಳವಳಾಗಿದ್ದೇನೆ. ನನ್ನ ಎಲ್ಲ ಯೋಚನೆಗಳು ನಿನ್ನತ್ತ ಹೋಗುತ್ತವೆ, ನನ್ನ ಎಲ್ಲ ಕ್ರಿಯೆಗಳು ನಿನಗಾಗಿ ಮುಡಿಪಾಗಿರಿಸಿದವು ಆಗಿರುತ್ತವೆ; ನಿನ್ನ ದೈವೀ ಸಾನ್ನಿಧ್ಯ ನನಗೆ ಯಾವಾಗಲೂ ಪರಿಪೂರ್ಣವಾಗಿರುತ್ತದೆ, ಬದಲಾಗದಂತಹ ಹಾಗೂ ಸ್ಥಿರವಾದ ವಾಸ್ತವತೆಯಾಗಿರುತ್ತದೆ, ಹಾಗೂ



ನಿನ್ನ ದೈವೀ ಶಾಂತಿ ಸತತ ನನ್ನ ಹೃದಯದಲ್ಲಿ ವಾಸಿಸುತ್ತದೆ. ಆದಾಗ್ಯೂ ಏಕತೆಯ ಈ ಸ್ಥಿತಿಯನ್ನು ನಾಳೆ ನನಗೆ ಸಾಧ್ಯವಾಗಲಿರುವ ಸ್ಥಿತಿಗೆ ಹೋಲಿಸಿದರೆ ಅದು ಬಡವಾಗಿದೆ ಮತ್ತು ಅಭದ್ರವಾಗಿದೆ ಎಂಬುದನ್ನು ನಾನು ತಿಳಿದುಕೊಂಡಿದ್ದೇನೆ. "ನಾನು" ಎಂಬ ವಿಚಾರವನ್ನು ಇಡಿಯಾಗಿ ಕಳೆದುಕೊಳ್ಳುವ ಆ ತಾದಾತ್ಮ್ಯದಿಂದ ನಾನಿನ್ನೂ ಬಹಳ ದೂರ, ನಿಶ್ಚಿತವಾಗಿ ಬಹಳ ದೂರದಲ್ಲಿದ್ದೇನೆ, ಆ 'ನಾನು' ಶಬ್ದವನ್ನು ನನ್ನನ್ನು ಅಭಿವ್ಯಕ್ತಪಡಿಸುವುದಕ್ಕಾಗಿ ಇನ್ನೂ ಉಪಯೋಗಿಸುತ್ತಿದ್ದೇನೆ, ಆದರೆ ಅಭಿವ್ಯಕ್ತಪಡಿಸುವುದಕ್ಕಾಗಿ ಅರಸುತ್ತಿರುವ ಶಬ್ದ ಯೋಗ್ಯವಾಗಿಲ್ಲ ಎಂಬ ಭಾವನೆಯನ್ನು ತಂದುಕೊಡುವ ರೀತಿಯಲ್ಲಿ ಪ್ರತಿಸಲ ಅದು ಸಂಕೋಚವನ್ನುಂಟು ಮಾಡುತ್ತದೆ: ಮಾನವ ರೀತಿಯಲ್ಲಿ ತಿಳಿಯಪಡಿಸುವುದಕ್ಕೆ ಅದು ಅನಿವಾರ್ಯವಾದದ್ದೆಂದು ನನಗೆ ತೋರಿಬರುತ್ತದೆ, ಆದರೆ ಎಲ್ಲವೂ ಈ 'ನಾನು' ಪ್ರಕಟಪಡಿಸುವುದರ ಮೇಲೆ ಅವಲಂಬಿಸಿರುತ್ತದೆ. ಈಗಾಗಲೆ ಅದೆಷ್ಟೋ ಸಲ ನಾನದನ್ನು ಉಚ್ಚರಿಸಿದಾಗ, ಭಗವಂತ, ನೀನೇ ನನ್ನಲ್ಲಿ ಮಾತನಾಡುತ್ತಿರುತ್ತೀ, ಏಕೆಂದರೆ ನಾನು ಪ್ರತ್ಯೇಕತೆಯ ಭಾವನೆಯನ್ನು ಕಳೆದುಕೊಂಡಿದ್ದೇನೆ.

ಆದರೆ ಅದೆಲ್ಲ ಇನ್ನೂ ಮೂಲರೂಪದಲ್ಲಿದೆ ಮತ್ತು ಅದು ಪರಿಪೂರ್ಣತೆಯತ್ತ ಬೆಳೆಯುವುದು. ನಿನ್ನ ಸರ್ವಶಕ್ತಿಯಲ್ಲಿರುವ ಈ ಪ್ರಶಾಂತ ಗಾಢನಂಬಿಕೆಯಲ್ಲಿ ಅದೆಂತಹ ಸಮಾಧಾನಗೊಳಿಸುವ ಆಶ್ವಾಸನವಿದೆ.

ನೀನು ಎಲ್ಲವೂ ಆಗಿರುವಿ, ಎಲ್ಲೆಡೆಯಲ್ಲಿ ಹಾಗೂ ಎಲ್ಲರಲ್ಲಿ ಇರುವಿ. ಗೋಚರ ವಿಶ್ವ ಸಮಗ್ರತೆಯಲ್ಲಿ ನಿನ್ನದೇ ಆಗಿರುವಂತೆ ಕಾರ್ಯಕೈಕೊಳ್ಳುವ ಈ ದೇಹ ನಿನ್ನದೇ ಆಗಿದೆ, ನಿನ್ನದೇ ದ್ರವ್ಯವಾಗಿರುವ ಈ ದೇಹದಲ್ಲಿ ಉಸಿರಾಡಿಸುವವನು, ಯೋಚಿಸುವವನು ಮತ್ತು ಪ್ರೀತಿಸುವವನು ನೀನೇ ಆಗಿರುವುದರಿಂದ ಅದು ನಿನ್ನ ಸೇವಕನಾಗುವುದನ್ನು ಇಷ್ಟಪಡುತ್ತದೆ.

**ನವ್ಹೆಂಬರ 19, 1912**

*

### ಕ್ರಿಯೆಯ ಆವಶ್ಯಕತೆ ಹಾಗೂ ಉಪಯುಕ್ತತೆ

ಬಾಹ್ಯ ಜೀವನ, ಪ್ರತಿದಿನದ ಹಾಗೂ ಪ್ರತಿಕ್ಷಣದ ಚಟುವಟಿಕೆ ಇದೆಲ್ಲವೂ ನಾವು ಗಂಟೆಗಳ ಕಾಲ ಕೈಕೊಳ್ಳುವ ಧ್ಯಾನ ಹಾಗೂ ಚಿಂತನಗಳಿಗೆ ಪೂರಕವಾಗಿರುವುದಿಲ್ಲವೆ? ಇವುಗಳಲ್ಲಿ ಪ್ರತಿಯೊಂದಕ್ಕೆ ನೀಡುವ ಕಾಲಾವಧಿಯ ಪ್ರಮಾಣವು

ಪೂರ್ವ ಸಿದ್ಧತೆ ಹಾಗೂ ಸಿದ್ಧಿಗಾಗಿ ಕೈಕೊಳ್ಳಬೇಕಾದ ಪ್ರಯತ್ನ ಇವುಗಳ ನಡುವೆ ಅಸ್ತಿತ್ವದಲ್ಲಿರುವ ಪ್ರಮಾಣದ ನಿಖರವಾದ ಪ್ರತೀಕವಾಗಿರುವುದಿಲ್ಲವೆ? ಧ್ಯಾನ ಹಾಗೂ ಚಿಂತನಗಳಿಗೆ ದೊರಕುವ ಪರಿಣಾಮ ಏಕತೆಯಾಗಿರುತ್ತದೆ–ಅದು ಅರಳಿಕೊಳ್ಳುವ ಪುಷ್ಪದ ಹಾಗಿರುತ್ತದೆ. ದೈನಂದಿನ ಚಟುವಟಿಕೆ ಬಡಿಗಲ್ಲು ಇದ್ದ ಹಾಗೆ, ಅದರ ಮೇಲೆ ಎಲ್ಲ ಅಂಶಗಳು ಮತ್ತೆ ಮತ್ತೆ ಹಾದು ಹೋಗಬೇಕು, ಅದರಿಂದಾಗಿ ಅವು ಪರಿಶುದ್ಧವಾಗುತ್ತವೆ, ಸಂಸ್ಕರಣಕ್ಕೆ ಒಳಪಡುತ್ತವೆ, ಮೃದುವಾಗುತ್ತವೆ, ಮತ್ತು ಚಿಂತನ ಅವುಗಳಿಗೆ ಕೊಡುವ ಜ್ಞಾನೋದಯಕ್ಕಾಗಿ ಪಕ್ವವಾಗುತ್ತವೆ. ಈ ಎಲ್ಲ ಅಂಶಗಳು ಮೂಸೆ (crucible) ಯಲ್ಲಿ ಒಂದರ ನಂತರ ಒಂದರಂತೆ ಹಾದು ಹೋಗುವಂತೆ ಮಾಡಬೇಕಾಗುತ್ತದೆ, ನಂತರವಷ್ಟೆ ಸಮಗ್ರ ಅಭಿವೃದ್ಧಿಗಾಗಿ ಬಾಹ್ಯ ಚಟುವಟಿಕೆಯ ಆವಶ್ಯಕತೆ ಇಲ್ಲದಂತಾಗುತ್ತದೆ. ಆಗ ಈ ಚಟುವಟಿಕೆ ನಿನ್ನನ್ನು ಪ್ರಕಟಗೊಳಿಸುವ ಸಾಧನವಾಗಿ ಪರಿವರ್ತನೆಗೊಳ್ಳುತ್ತದೆ, ಅದರಿಂದಾಗಿ ಆಕಾರ ಕೊಡುವ ಹಾಗೂ ಜ್ಞಾನೋದಯವನ್ನುಂಟು ಮಾಡುವ ಅದೇ ಎರಡು ಬಗೆಯ ಕಾರ್ಯಗಳಿಗಾಗಿ ಪ್ರಜ್ಞೆಯ ಇತರ ಕೇಂದ್ರಗಳು ಜಾಗ್ರತ–ವಾಗುತ್ತವೆ. ಹಾಗಾಗಿ ಸ್ವ–ಪ್ರತಿಷ್ಠೆ ಹಾಗೂ ಸ್ವ–ಸಂತೃಪ್ತಿಗಳು ಅತ್ಯಂತ ಕೆಟ್ಟ ವಿಷಯಗಳಾಗಿವೆ. ನಮಗೆ ಕೊಡಲಾದ ಎಲ್ಲ ಚಿಕ್ಕ ಪುಟ್ಟ ಅವಕಾಶಗಳ ಪ್ರಯೋಜನವನ್ನು ಅತ್ಯಂತ ನಮ್ರತೆಯಿಂದ ಪಡೆದುಕೊಂಡು ಅನೇಕ ಅಂಶ–ಗಳಲ್ಲಿಯ ಕೆಲವೊಂದನ್ನು ನಾದುತ್ತ ಪರಿಶುದ್ಧಗೊಳಿಸಬೇಕು, ಅವುಗಳನ್ನು ನಮ್ಯ–ವಾದವುಗಳು, ಅವ್ಯೆಯಕ್ತಿಕವಾದವುಗಳು ಆಗುವಂತೆ ಮಾಡಬೇಕು, ಅವುಗಳಿಗೆ ನಮ್ಮನ್ನು ಮರೆಯುವುದನ್ನು, ತ್ಯಾಗ, ಭಕ್ತಿ, ಕರುಣೆ ಮತ್ತು ಸಭ್ಯತೆ ಇವುಗಳನ್ನು ಕಲಿಸಬೇಕು ಮತ್ತು ಈ ಎಲ್ಲ ರೀತಿಗಳು ಆ ಅಂಶಗಳಿಗೆ ರೂಢಿಗತವಾದಾಗ ಅವು ಚಿಂತನದಲ್ಲಿ ಭಾಗವಹಿಸಲು, ಪರಮೋಚ್ಚ ಏಕಾಗ್ರತೆಯಲ್ಲಿ ನಿನ್ನೊಡನೆ ತಾದಾತ್ಮ್ಯ–ದಿಂದಿರಲು ತಯಾರಾಗುವವು, ಆ ಕಾರಣದಿಂದಾಗಿಯೇ ಶ್ರೇಷ್ಠರಾದವರಿಗೂ ಕೂಡ ಆ ಕಾರ್ಯ ದೀರ್ಘಕಾಲದ್ದು ಹಾಗೂ ನಿಧಾನಗತಿಯದು ಆಗುವುದೆಂದು ನನಗೆ ತೋರಿಬರುತ್ತದೆ, ಚಮತ್ಕಾರಿಕವಾದ ಪರಿವರ್ತನೆಗಳು ಸಮಗ್ರವಾಗಲಾರವು. ಅವು ಸತ್ತೆಯ ನೆಲೆ ನಿರ್ದೇಶನ (orientation)ವನ್ನು ಬದಲಿಸುತ್ತವೆ ಮತ್ತು ಸತ್ತೆಯನ್ನು ನೇರ ಮಾರ್ಗದಲ್ಲಿರಿಸುತ್ತವೆ; ಆದರೆ ಗುರಿಯನ್ನು ನಿಜವಾಗಿ ಸಿದ್ಧಿಸಿ–ಕೊಳ್ಳುವುದಕ್ಕಾಗಿ ಎಲ್ಲ ಬಗೆಯ, ಪ್ರತಿಕ್ಷಣದ ಅಸಂಖ್ಯಾತ ಅನುಭವಗಳ ಆವಶ್ಯಕತೆ–ಯಿಂದ ತಪ್ಪಿಸಿಕೊಳ್ಳುವುದು ಯಾರಿಗೂ ಸಾಧ್ಯವಾಗುವುದಿಲ್ಲ.



ನನ್ನ ಸತ್ತೆಯಲ್ಲಿ ಹಾಗೂ ಪ್ರತಿಯೊಂದು ವಸ್ತು–ವಿಷಯದಲ್ಲಿ ಪ್ರಕಾಶಿಸುವ ಪರಮೋಚ್ಚ ಪ್ರಭುವೆ, ನಿನ್ನ ದೈವೀ ಪ್ರಕಾಶ ಪ್ರಕಟವಾಗಲಿ ಮತ್ತು ನಿನ್ನ ದೈವೀ ಶಾಂತಿಯ ಆಳಿಕೆ ಎಲ್ಲರಿಗಾಗಿ ಬರಲಿ.

**ನವ್ಹೆಂಬರ 28, 1912**

*

**ದೈವೀ ಶಾಂತಿ ಹಾಗೂ ನಿಶ್ಚಲನೀರವತೆಯಲ್ಲಿ ಸನಾತನನು ಪ್ರಕಟನಾಗುತ್ತಾನೆ**

ದೈವೀ ಶಾಂತಿ ಹಾಗೂ ನಿಶ್ಚಲನೀರವತೆಯಲ್ಲಿ ಸನಾತನನು ಪ್ರಕಟನಾಗುತ್ತಾನೆ. ನಿಮ್ಮನ್ನು ಕ್ಷೋಭೆಗೊಳಪಡಿಸಲು ಯಾವುದಕ್ಕೂ ಅನುವು ಮಾಡಿಕೊಡದೆ ಇದ್ದಾಗ ಸನಾತನನು ಪ್ರಕಟನಾಗುವನು; ಎಲ್ಲದರ ಎದುರಿನಲ್ಲಿ ಪರಿಪೂರ್ಣ ಸಮತೆಯನ್ನು ಹೊಂದಿದಾಗ ಸನಾತನನು ಅಲ್ಲಿರುತ್ತಾನೆ. ಹೌದು, ದೈವೀ ಪ್ರಭುವೆ, ನಿನ್ನನ್ನು ಅರಸುವುದರಲ್ಲಿ ನಾವು ಅತಿ ಹೆಚ್ಚಿನ ಪ್ರಯತ್ನವನ್ನು ಮಾಡಬಾರದು, ಅತಿ ಹೆಚ್ಚಿನ ಗಾಢತೆಯನ್ನು ಇರಿಸಬಾರದು, ಆ ಪ್ರಯತ್ನ ಹಾಗೂ ಗಾಢತೆ ನಿನ್ನ ಮುಂದೆ ಒಂದು ಪರದೆ ಇದ್ದಂತಾಗುವವು. ನಾವು ನಿನ್ನನ್ನು ನೋಡಲು ಬಯಸಬಾರದು, ಏಕೆಂದರೆ ಅದು ಇನ್ನೂ ಮಾನಸಿಕ ತಳಮಳವಾಗಿದ್ದು ನಿನ್ನ ಸನಾತನ ಸಾನ್ನಿಧ್ಯವನ್ನು ಮಬ್ಬಾಗಿಸುತ್ತದೆ. ಎಲ್ಲವೂ ನೀನೇ ಆಗಿರುವ ಹಾಗೆ ಸಂಪೂರ್ಣ ಶಾಂತಿ, ಪ್ರಶಾಂತತೆ ಮತ್ತು ಸಮತೆ ಇವು ಹೆಚ್ಚಾಗಿರುವಲ್ಲಿ ನೀನೇ ಇರುವಿ, ಮತ್ತು ಈ ಪರಿಪೂರ್ಣವಾಗಿರುವ ಪರಿಶುದ್ಧ ಹಾಗೂ ಸ್ಥಿರ ವಾತಾವರಣದಲ್ಲಿ ಕನಿಷ್ಠಮಟ್ಟದ ಕಂಪನ ನಿನ್ನ ಪ್ರಕಟಣೆಗೆ ಅಡೆತಡೆಯನ್ನುಂಟು ಮಾಡುವುದು. ಅವಸರ ಮಾಡುವುದು ಬೇಡ, ಕಳವಳ ಬೇಡ, ಉದ್ವೇಗ ಬೇಡ, ನೀನಲ್ಲದೆ ಬೇರಾವುದೂ ಬೇಡ, ಅದಕ್ಕೆ ವಿಶ್ಲೇಷಣೆ ಮಾಡುವುದು ಬೇಡ, ಇಂದ್ರಿಯಕ್ಕೆ ಗೋಚರಿಸುವಂತೆ ಮಾಡುವುದು ಬೇಡ. ಸಾಧ್ಯವಾಗಬಹುದಾದ ಯಾವ ಸಂಶಯವೂ ಇಲ್ಲದೆ ನೀನಲ್ಲಿರುವೆ, ಏಕೆಂದರೆ ಎಲ್ಲವೂ ಪಾವನ ಶಾಂತಿ ಮತ್ತು ಪವಿತ್ರ ನಿಶ್ಚಲನೀರವತೆ ಯಾಗುತ್ತದೆ.

ಮತ್ತು ಅದು ಜಗತ್ತಿನಲ್ಲಿ ಕೈಕೊಳ್ಳಬಹುದಾದ ಯಾವುದೇ ಧ್ಯಾನಕ್ಕಿಂತ ಹೆಚ್ಚು ಒಳ್ಳೆಯದು.

**ಡಿಸೆಂಬರ 5, 1912**

*

## ಭಗವಂತ, ಕೈಕೊಳ್ಳುತ್ತಿರುವವನು ನೀನು ಮಾತ್ರ ಎಂಬುದರ ಅರಿವು ಪಡೆಯುವುದು

ಓ ಪರಮೋಚ್ಚ ದೈವೀ ಪ್ರಭುವೆ, ಸನಾತನ ಗುರುವೆ, ನಿನ್ನ ಮಾರ್ಗದರ್ಶನ–ದಲ್ಲಿ ಪೂರ್ಣ ಗಾಢ ನಂಬಿಕೆಯಿರಿಸುವುದರ ಅಸಮಾನ ಪರಿಣಾಮಕಾರಿತ್ವದ ಬಗ್ಗೆ ನನಗೆ ಮತ್ತೊಮ್ಮೆ ಖಚಿತ ಭಾವನೆ ಬರುವಂತೆ ಅನುಗ್ರಹಿಸಿರುವಿ. ನಿನ್ನೆ ನಿನ್ನ ದೈವೀ ಪ್ರಕಾಶ ನನ್ನ ಮುಖದ ಮೂಲಕ ಪ್ರಕಟವಾಯಿತು, ಮತ್ತು ಅದು ನನ್ನಲ್ಲಿ ವಿರೋಧವನ್ನು ಕಂಡುಕೊಳ್ಳಲಿಲ್ಲ, ಉಪಕರಣ ಇಷ್ಟವುಳ್ಳದ್ದಾಗಿತ್ತು, ನಮ್ಯ ಹಾಗೂ ಕತ್ತಿಯ ಮೇಲಿನ ಅಲುಗಿನಂತೆ ತೀಕ್ಷ್ಣವಾದದ್ದು ಆಗಿತ್ತು.

ಪ್ರತಿಯೊಂದು ವಸ್ತು–ವಿಷಯದಲ್ಲಿ, ಪ್ರತಿಯೊಂದು ಸತ್ತೆಯಲ್ಲಿ ಕಾರ್ಯ ಕೈಕೊಳ್ಳುವವನು ನೀನೇ ಆಗಿರುವಿ, ಎಲ್ಲ ಕ್ರಿಯೆಗಳಲ್ಲಿ, ಯಾವುದನ್ನೂ ಹೊರತು–ಪಡಿಸದೆ ನಿನ್ನನ್ನು ನೋಡಲು ನಿನ್ನ ಬಳಿ ಸಾಕಷ್ಟು ಹತ್ತಿರವಿರುವವನು ಪ್ರತಿಯೊಂದು ಕ್ರಿಯೆಯನ್ನು ಕಲ್ಯಾಣಪ್ರದವಾಗುವಂತೆ ಪರಿವರ್ತನಗೊಳಿಸಬಲ್ಲನು.

ಮಹತ್ವದ್ದಾದ ಒಂದು ವಿಷಯವೆಂದರೆ ಯಾವಾಗಲೂ ನಿನ್ನಲ್ಲಿ ನೆಲೆಸು ವುದಾಗಿದೆ, ಯಾವಾಗಲೂ ಮತ್ತು ಎಂದಿಗಿಂತಲೂ ಹೆಚ್ಚಾಗಿ ನಿನ್ನಲ್ಲಿ ನೆಲೆಸು–ವುದಾಗಿದೆ, ಇಂದ್ರಿಯಗಳ ಭ್ರಮೆ ಹಾಗೂ ವಂಚನೆಗಳನ್ನು ಮೀರಿ ಹೋಗಿ ನಿನ್ನಲ್ಲಿರುವುದಾಗಿದೆ. ಕ್ರಿಯೆಯಿಂದ ಹಿಂದೆ ಸರಿದುಕೊಳ್ಳದೆ ಅದನ್ನು ತಿರಸ್ಕರಿಸದೆ, ಅಲ್ಲಗಳೆಯದೆ ಇರುವುದಾಗಿದೆ–ವಿರುದ್ಧ ರೀತಿಯಲ್ಲಿ ಕೈಕೊಳ್ಳುವ ಹೋರಾಟ ನಿರುಪಯುಕ್ತ ಹಾಗೂ ಹಾನಿಕಾರಕವಾದದ್ದು–ಆದರೆ ಕಾರ್ಯ ಯಾವುದೇ ಇರಲಿ, ಅದರಲ್ಲಿ ನಿನ್ನನ್ನು ಮಾತ್ರ ಎಂದೆಂದಿಗೂ ಹಾಗೂ ಯಾವಾಗಲೂ ಜೀವಿಸುವು–ದಾಗಿದೆ, ಆಗ ಭ್ರಮೆಯ ನಿವಾರಣೆಯಾಗುತ್ತದೆ, ಇಂದ್ರಿಯಗಳ ಮಿಥ್ಯೆಗಳು ಮಾಯವಾಗುತ್ತವೆ, ಪರಿಣಾಮದ ಬಂಧನ ಕಳಚಿ ಹೋಗುತ್ತದೆ, ಎಲ್ಲವೂ ನಿನ್ನ ಸನಾತನ ದೈವೀ ಸಾನ್ನಿಧ್ಯದ ವೈಭವೋಪೇತ ಪ್ರಕಟಣೆಯಾಗಿ ಪರಿವರ್ತನ–ಗೊಳ್ಳುತ್ತದೆ.

ಅದು ಹಾಗೆಯೇ ಆಗಲಿ, ತಥಾಸ್ತು.

**ಡಿಸೆಂಬರ 10, 1912**

*



## ಪ್ರತಿಯೊಂದು ಅಭೀಪ್ಸೆ ಹಾಗೂ ಪ್ರತಿಯೊಂದು ಕರೆ ನಮ್ಮನ್ನು ಭಗವಂತನತ್ತ ಕರೆದೊಯ್ಯುತ್ತದೆ

ಓ ದೈವೀ ಪ್ರಭು, ನನ್ನ ಹೃದಯದ ನಿಶ್ಚಲತೆಯಲ್ಲಿ ನಿನ್ನ ಧ್ವನಿ ಮಧುರವಾದ ಮಂತ್ರಘೋಷದಂತೆ ಕೇಳಿಸುತ್ತದೆ ಮತ್ತು ನನ್ನ ಬುದ್ಧಿಗೆ ಶಬ್ದಗಳಾಗಿ ಪರಿವರ್ತಿತಗೊಂಡು ಹೊಳೆಯುತ್ತದೆ ಮತ್ತು ಆ ಶಬ್ದಗಳು ಸಮರ್ಪಕವಾಗಿರದೇ ಇದ್ದರೂ ನಿನ್ನಿಂದ ಸಮೃದ್ಧಗೊಂಡಿರುತ್ತವೆ ಮತ್ತು ಈ ಶಬ್ದಗಳು ಪೃಥ್ವಿಯನ್ನು ಕುರಿತು ಹೇಳಿದವುಗಳಾಗಿರುತ್ತವೆ, ಅವು ಅವಳಿಗೆ ಹೇಳುತ್ತವೆ:– ದೀನ ದುಃಖಿತ ಪೃಥ್ವಿಯೆ ನನ್ನ ಸಾನ್ನಿಧ್ಯ ನಿನ್ನೊಳಗಿದೆ ಎಂಬುದನ್ನು ನೆನಪಿಗೆ ತಂದುಕೋ ಮತ್ತು ಭರವಸೆಯನ್ನು ಕಳೆದುಕೊಳ್ಳಬೇಡ; ಪ್ರತಿಯೊಂದು ಪ್ರಯತ್ನ, ಪ್ರತಿಯೊಂದು ನೋವಿನ ಬಾಧೆ, ನಿನ್ನ ಹೃದಯದ ಪ್ರತಿಯೊಂದು ಕರೆ, ನಿನ್ನ ಆತ್ಮದ ಪ್ರತಿಯೊಂದು ಅಭೀಪ್ಸೆ, ನಿನ್ನ ಋತುಗಳ ಪ್ರತಿಯೊಂದು ಪುನರಾವರ್ತನೆ, ಹೀಗೆ ಎಲ್ಲವೂ ಯಾವುದನ್ನೂ ಹೊರತುಪಡಿಸದೆ, ನಿನಗೆ ದುಃಖದಾಯಕವಾದದ್ದು, ಸಂತೋಷ–ಕರವಾದದ್ದು, ನಿನಗೆ ಕುರೂಪದ್ದೆಂದು ತೋರಿಬರುವಂತಹದು, ಸುಂದರವೆಂದು ತೋರಿಬರುವಂತಹದು ಇದೆಲ್ಲವೂ ತಪ್ಪದೆ ನಿನ್ನನ್ನು ನನ್ನೆಡೆಗೆ ಕರೆದೊಯ್ಯುತ್ತದೆ, ನಾನು ಕೊನೆಯಿಲ್ಲದ ದೈವೀ ಶಾಂತಿ, ಛಾಯಾರಹಿತ ದೈವೀ ಪ್ರಕಾಶ, ಪರಿಪೂರ್ಣ ಸಾಮರಸ್ಯ, ನಿಶ್ಚಿತತೆ, ವಿಶ್ರಾಂತಿ ಮತ್ತು ಪರಮೋಚ್ಚ ದಯಾಪರತೆ ಇವೆಲ್ಲವುಗಳಿಂದ ಕೂಡಿದವನಾಗಿದ್ದೇನೆ.

ಓ ಪೃಥ್ವಿಯೇ ಮೇಲೆದ್ದು ಬರುತ್ತಿರುವ ಘನತೆವೆತ್ತ ಧ್ವನಿಯನ್ನು ಕೇಳು, ಹೊಸ ಧೈರ್ಯ ತಂದುಕೋ.

**ಫೆಬ್ರುವರಿ 5, 1913**

*

## ನಿನ್ನ ಆವಶ್ಯಕತೆ ಇದ್ದಾಗೆಲ್ಲ, ಇದ್ದಲ್ಲೆಲ್ಲ ನೀನಿರುವಿ

ನನ್ನ ಸತ್ತೆ ಧನ್ಯವಾದ ಸಮರ್ಪಣೆ ಮಾಡುತ್ತ ನಿನ್ನೆಡೆಗೆ ಸಾಗುತ್ತದೆ, ನೀನು ಈ ದುರ್ಬಲ ದೇಹವನ್ನು ನಿನ್ನ ಪ್ರಕಟಣೆಗಾಗಿ ಉಪಯೋಗಿಸುತ್ತೀ ಎಂಬ ಕಾರಣದಿಂದಲ್ಲ, ಆದರೆ ನೀನು ನಿನ್ನನ್ನೇ ಪ್ರಕಟಿಸುತ್ತಿರುವಿ, ಅದು ವೈಭವಗಳ–ಲ್ಲೊಂದು ಮಹಾವೈಭವ, ಸಂತೋಷಗಳಲ್ಲಿ ಹೆಚ್ಚಿನ ಸಂತೋಷ, ಅದ್ಭುತಗಳಲ್ಲಿ ಹೆಚ್ಚಿನ ಅದ್ಭುತ. ನಿನ್ನ ಆವಶ್ಯಕತೆ ಇದ್ದಾಗೆಲ್ಲ ನೀನು ಅಲ್ಲಿ ಇದ್ದೇ ಇರುವಿ

ಎಂಬುದನ್ನು ನಿನ್ನನ್ನು ಉತ್ಕಟತೆಯಿಂದ ಅರಸುವವರೆಲ್ಲರೂ ತಿಳಿದುಕೊಳ್ಳತಕ್ಕದ್ದು. ನಿನ್ನನ್ನು ಅರಸುವುದನ್ನು ಬಿಟ್ಟುಕೊಡುವುದರಲ್ಲಿ, ಆದರೆ ಅದಕ್ಕೂ ಹೆಚ್ಚಾಗಿ ತಮ್ಮನ್ನು ಸಮಗ್ರವಾಗಿ ನಿನ್ನ ಸೇವೆಯಲ್ಲಿರಿಸಿಕೊಂಡು, ಕಾದುಕೊಂಡಿರುವುದರಲ್ಲಿ ಪರಮೋಚ್ಚ ಗಾಢ ನಂಬಿಕೆ ಹೊಂದಬಲ್ಲರಾದರೆ ನಿನ್ನ ಆವಶ್ಯಕತೆ ಉಂಟಾದಾಗೆಲ್ಲ ನೀನಲ್ಲಿರುವಿ, ನಿನ್ನ ಪ್ರಕಟಣೆಯ ರೂಪಗಳು ಭಿನ್ನವಾದವುಗಳು, ಬಹಳಷ್ಟು ಸಲ ಅನಿರೀಕ್ಷಿತ–ವಾದವುಗಳು ಆಗಿದ್ದರೂ ಸಹ ನಿನ್ನ ಆವಶ್ಯಕತೆ ಎಲ್ಲ ಕಾಲಕ್ಕೂ ಇದ್ದೇ ಇರುತ್ತದೆಯಲ್ಲವೆ?

ನಿನ್ನ ಜಯಘೋಷ ಮೊಳಗಲಿ,
ಮತ್ತು ಜೀವನವನ್ನು ಪಾವನಗೊಳಿಸಲಿ,
ಜನರ ಹೃದಯಗಳನ್ನು ಅದು ಪರಿವರ್ತಿಸಲಿ,
ನಿನ್ನ ದೈವೀ ಶಾಂತಿ ಪೃಥ್ವಿಯ ಮೇಲೆ ಆಳಿಕೆ ನಡೆಸಲಿ.

**ಫೆಬ್ರುವರಿ 10, 1913**

*

**ಪ್ರಯತ್ನರಹಿತ ಸರಳತೆಯಲ್ಲಿ ಅತ್ಯಂತ ಶ್ರೇಷ್ಠ ಸಾಮರ್ಥ್ಯ ನೆಲೆಸಿರುತ್ತದೆ**

ಪ್ರಕಟಣೆಯಿಂದ ಎಲ್ಲ ಪ್ರಯತ್ನ ಮಾಯವಾದ ಕೂಡಲೆ ಆ ಪ್ರಕಟಣೆ ಬಹಳ ಸರಳವಾಗುವುದು. ಗಲಿಬಿಲಿ ಇಲ್ಲವೆ ಭಾವೋದ್ವೇಗದ ಲಕ್ಷಣ ಇಲ್ಲದೆ, ಹೂವೊಂದು ತನ್ನ ಚೆಲುವನ್ನು ಹಾಗೂ ಪರಿಮಳವನ್ನು ಹರಡುತ್ತಿರುವ ರೀತಿಯಲ್ಲಿ ಬಹಳ ಸರಳವಾಗುವುದು. ಮತ್ತು ಈ ಸರಳತೆಯಲ್ಲಿಯೇ ಕನಿಷ್ಠ ಮಟ್ಟದಲ್ಲೂ ಮಿಶ್ರಣ–ಕ್ಕೊಳಗಾಗದ, ಹಾನಿಕಾರಕ ಪ್ರತಿಕ್ರಿಯೆಗಳಿಗೆ ಕನಿಷ್ಠ ಮಟ್ಟದಲೂ ಇಂಬುಗೊಡದ ಅತ್ಯಂತ ಶ್ರೇಷ್ಠ ಸಾಮರ್ಥ್ಯ ನೆಲೆಸಿರುತ್ತದೆ. ಪ್ರಾಣಿಕದ ಸಾಮರ್ಥ್ಯವನ್ನು ನಂಬ–ಬಾರದು, ಅದು ಕರ್ಮಮಾರ್ಗದಲ್ಲಿ ಪ್ರಲೋಭನ ಒಡ್ಡುವುದು, ಅದರ ಬಲೆಯಲ್ಲಿ ಸಿಕ್ಕಿಹಾಕಿಕೊಳ್ಳುವ ಅಪಾಯ ಯಾವಾಗಲೂ ಇರುತ್ತದೆ, ಏಕೆಂದರೆ ಅದು ಕೂಡಲೆ ದೊರಕುವ ಪರಿಣಾಮಗಳ ಸ್ವಾದವನ್ನು ಕೊಡುತ್ತದೆ; ಮತ್ತು ಕಾರ್ಯವನ್ನು ಸರಿಯಾಗಿ ಕೈಕೊಳ್ಳಬೇಕೆಂಬ ನಮ್ಮ ಮೊದಲ ಆತುರದಲ್ಲಿ ಈ ಸಾಮರ್ಥ್ಯ ನಮ್ಮನ್ನು ಕೊಂಡೊಯ್ಯಲು ಬಿಟ್ಟುಕೊಡುತ್ತೇವೆ. ಆದರೆ ಅದು ಬಹಳ ತೀವ್ರಗತಿಯಲ್ಲಿ ನಮ್ಮ ಎಲ್ಲ ಕ್ರಿಯೆ ಸರಿಯಾದ ಮಾರ್ಗ ತೊರೆದು ಬೇರೆಡೆ ಹೊರಳುವಂತೆ ಮಾಡುತ್ತದೆ ಮತ್ತು ನಾವು ಕೈಕೊಳ್ಳುತ್ತಿರುವುದರಲ್ಲಿ ಭ್ರಮೆ ಹಾಗೂ



ಮೃತ್ಯುವಿನ ಬೀಜವನ್ನು ಬಿತ್ತುತ್ತದೆ.

ಓ ಸರಳತೆಯೆ, ನಿನ್ನ ದೈವೀ ಸಾನ್ನಿಧ್ಯದ ಪರಿಶುದ್ಧತೆ ಎಷ್ಟೊಂದು ಮಧುರವಾಗಿದೆ! . . .

**ಫೆಬ್ರುವರಿ 12, 1913**

*

**ತಪ್ಪು ಮಾರ್ಗ ಅನುಸರಿಸುವ ಆಧ್ಯಾತ್ಮಿಕ ಜ್ಞಾನ**

ನಿಶ್ಚಲ ನೀರವತೆಯಲ್ಲಿ ಮತ್ತು ಏಕಾಂತದಲ್ಲಿ ಪರಿಪೂರ್ಣ ರೀತಿಯ ಚಿಂತನ ಕೈಕೊಳ್ಳುವುದನ್ನು ಸಿದ್ಧಿಸಿಕೊಂಡವನೂ ಕೂಡ, ತನ್ನ ದೇಹವನ್ನು ಕಡೆಗಣಿಸಿ ಅದರಿಂದ ಪ್ರತ್ಯೇಕಗೊಂಡು ಕೇವಲ ಆ ಚಿಂತನದತ್ತ ತಲುಪಿರಬಹುದು; ಮತ್ತು ಹಾಗಾಗಿ ದೇಹ ರಚನೆಗೊಂಡುದುದರ ದ್ರವ್ಯ ಮೊದಲಿನಷ್ಟೇ ಅಶುದ್ಧವಾಗಿ, ಅಪರಿಪೂರ್ಣವಾಗಿ ಉಳಿದುಕೊಳ್ಳಬಹುದು, ಏಕೆಂದರೆ ಅವನು ಅದನ್ನು ಅದರಷ್ಟಕ್ಕೆ ಬಿಟ್ಟುಕೊಟ್ಟಿರುತ್ತಾನೆ, ಮತ್ತು ತಪ್ಪು ಮಾರ್ಗ ಅನುಸರಿಸಿದ ಆಧ್ಯಾತ್ಮಿಕತೆ, ಅತಿಭೌತಿಕ ಭವ್ಯತೆಗಳಿಗಾಗಿರುವ ಪ್ರಲೋಭನ ತನ್ನದೇ ವೈಯಕ್ತಿಕ ಸಮಾಧಾನಕ್ಕಾಗಿ, ಭಗವಂತ, ನಿನ್ನೊಡನೆ ಏಕತೆ ಪಡೆಯಲು ಇರುವ ಅಹಂಕಾರಯುಕ್ತ ಆಸೆ ಇವುಗಳ ಮೂಲಕ ಅವನು ತನ್ನ ಬೆನ್ನನ್ನು ತನ್ನ ಪಾರ್ಥಿವ ಅಸ್ತಿತ್ವದ ವಿರುದ್ಧ ತಿರುಗಿಸಿರುತ್ತಾನೆ, ಹೆದರಿಕೊಳ್ಳುವವನ ಹಾಗೆ ತನ್ನ ಮಣಿಹವನ್ನು ಸಿದ್ಧಿಸಿಕೊಳ್ಳಲು ತಿರಸ್ಕರಿಸುತ್ತಾನೆ, ಆ ಮಣಿಹವೆಂದರೆ (ತನ್ನ ದೇಹದ) ಭೌತದ್ರವ್ಯವನ್ನು ಬಿಡುಗಡೆಗೊಳಿಸುವುದು ಹಾಗೂ ಪರಿಶುದ್ಧಗೊಳಿಸುವುದಾಗಿ–ರುತ್ತದೆ. ನಮ್ಮ ಸತ್ತೆಯ ಒಂದು ಭಾಗ, ಭಗವಂತ ನಿನ್ನೊಡನೆ ಸಂಸರ್ಗದಲ್ಲಿರಲು ಪರಿಪೂರ್ಣವಾಗಿ ಪರಿಶುದ್ಧಗೊಂಡಿದೆ ಎಂಬುದನ್ನು ತಿಳಿದುಕೊಂಡಿರುವುದು ಉಪಯುಕ್ತವಾಗಬೇಕಾದರೆ ಈ ಜ್ಞಾನವನ್ನು, ನಿನ್ನ ಘನತೆವೆತ್ತ ಕಾರ್ಯವನ್ನು ಸಿದ್ಧಿಸಿಕೊಳ್ಳುವುದಕ್ಕಾಗಿ, ಪೃಥ್ವಿಯ ರೂಪಪರಿವರ್ತನೆ ತ್ವರಿತಗೊಳ್ಳುವ ಹಾಗೆ ಉಪಯೋಗ ಮಾಡಬೇಕು.

**ಜೂನ್ 15, 1913**

*

**ಶಾಶ್ವತೆಯಲ್ಲಿ ಹಾರಾಟ ಮತ್ತು ಅನಂತತೆಯಲ್ಲಿ ಉಸಿರಾಟ**

ನಿನ್ನತ್ತ ಹೊರಳುವುದು, ನಿನ್ನೊಡನೆ ಏಕವಾಗುವುದು ಹಾಗೂ ನಿನ್ನಲ್ಲಿ ಜೀವಿಸುವುದು ಇದೆಲ್ಲ ಪರಮೋಚ್ಚ ರೀತಿಯಲ್ಲಿ ಸಂತೋಷ ನೀಡುತ್ತದೆ, ಆ ಸಂತೋಷ ಮಿಶ್ರಣಕ್ಕೊಳಗಾಗಿರುವುದಿಲ್ಲ, ಅಲ್ಲಿ ಬದಲಾಗದ ಶಾಂತಿಯಿರುತ್ತದೆ; ಅದು ಅನಂತದ ಉಸಿರು ತೆಗೆದುಕೊಳ್ಳುವುದಾಗಿರುತ್ತದೆ, ಶಾಶ್ವತತೆಯಲ್ಲಿ ಹಾರಾಡುವುದಾಗಿರುತ್ತದೆ, ಮನುಷ್ಯ ತನ್ನ ಮಿತಿಗಳ ಬಗ್ಗೆ ಭಾವನೆ ಹೊಂದದೆ ಇರುವುದಾಗಿದೆ, ಕಾಲ ಹಾಗೂ ಸ್ಥಳಾವಕಾಶಗಳಿಂದ ಪಾರಾಗಿ ಹೋಗುವು–ದಿರುತ್ತದೆ. ಇವೆಲ್ಲ ವರಗಳಿಂದ ಜನರು ಹೆದರಿಕೊಂಡವರಂತೆ ಪಲಾಯನ ಮಾಡುವುದೇಕೆ? ಅಜ್ಞಾನ ಎಂಬುದು ಎಷ್ಟೊಂದು ವಿಚಿತ್ರ ವಿಷಯವಾಗಿದೆ, ಅದು ಎಲ್ಲ ವೇದನೆಯ ಮೂಲವಾಗಿರುತ್ತದೆ! ಸಂತೋಷ ತಂದುಕೊಡುವ ವಿಷಯವೇ ಜನರನ್ನು ದೂರವಿರಿಸುವ ಮಬ್ಬುತನ ಎಷ್ಟೊಂದು ದುಃಖದಾಯಕವಾದದ್ದು, ಅದು ಈ ವೇದನೆಯನ್ನುಂಟು ಮಾಡುವ ಸಾಧಾರಣ ಅಸ್ತಿತ್ವದ ಸಂಪ್ರದಾಯ, ಅದನ್ನು ಹೋರಾಟ ಹಾಗೂ ವೇದನೆಗಳಿಂದ ಇಡಿಯಾಗಿ ರೂಪಿಸಲಾಗಿರುತ್ತದೆ.

**ಜೂನ್ 18, 1913**

*

**ಅತ್ಯಂತ ಒಳ್ಳೆಯ ಮನೋಭಾವ ಮತ್ತು ಏಕೈಕ ಕರ್ತವ್ಯ**

ಈ ದಿನ ಬೆಳಿಗ್ಗೆ, ಪ್ರಾರಂಭವಾಗುತ್ತಿರುವ ತಿಂಗಳನ್ನು ನಾನು ಅವಲೋಕಿಸಿದಾಗ, ಮತ್ತು ನಾನು ನಿನಗೆ (ಭಗವಂತ) ಹೆಚ್ಚು ಒಳ್ಳೆಯ ರೀತಿಯಲ್ಲಿ ಸೇವೆ ಹೇಗೆ ಸಲ್ಲಿಸಬಹುದು ಎಂದು ಯೋಚಿಸುತ್ತಿದ್ದಾಗ ನಾನು ಅಂತರಂಗದ ನಿಶ್ಚಲ ನೀರವತೆಯಲ್ಲಿ ಗುಣುಗುಟ್ಟುತ್ತಿರುವಂತಹ ಕ್ಷೀಣ ಧ್ವನಿಯನ್ನು ಕೇಳಿದೆ ಮತ್ತು ಅದು ನನಗೆ ಹೇಳಿದ್ದು ಹೀಗಿದೆ: "ಎಲ್ಲ ಬಾಹ್ಯ ಪರಿಸ್ಥಿತಿಗಳು ಎಷ್ಟು ಕಡಿಮೆ ರೀತಿಯಲ್ಲಿ ಮಹತ್ವದವಾಗಿವೆ ಎಂಬುದನ್ನು ನೋಡು, ದೈವೀ ಸತ್ಯದ ಕಲ್ಪನೆಯನ್ನು ಸಿದ್ಧಿಸಿ–ಕೊಳ್ಳುವುದನ್ನು ಕುರಿತು ಹೋರಾಟ ನಡೆಸುವುದೇಕೆ, ಪರಿಶ್ರಮ ಪಡುವುದೇಕೆ? ಹೆಚ್ಚು ನಮ್ರವಾಗು, ಹೆಚ್ಚಿನ ರೀತಿಯಲ್ಲಿ ವಿಶ್ವಾಸವನ್ನಿರಿಸು. ಇರುವ ಏಕೈಕ ಕರ್ತವ್ಯವೆಂದರೆ ಯಾವುದಕ್ಕೂ ನಮಗೆ ತೊಂದರೆ ಕೊಡಲು ಅನುವು ಮಾಡಿಕೊಡದೆ ಇರುವುದಾಗಿದೆ. ಸರಿಯಾದದ್ದನ್ನು ಕೈಕೊಳ್ಳುವುದಕ್ಕಾಗಿ ಮನುಷ್ಯ ತನ್ನನ್ನು ಪೀಡೆಗೊಳಪಡಿಸುವುದು ದುಷ್ಟ ಸಂಕಲ್ಪದಷ್ಟೇ ಹಾನಿಯನ್ನುಂಟು



ಮಾಡುತ್ತದೆ. ಆಳಾತಿ ಆಳದಲ್ಲಿರುವ ನೀರಿನ ಸ್ಥಿರತೆಯಂತಹದರಲ್ಲಿ ನಿಜವಾದ ಸೇವೆ ಸಲ್ಲಿಸುವ ಸಾಧ್ಯತೆಯನ್ನು ನೀನು ಕಂಡುಕೊಳ್ಳಬಹುದು.

**ಅಗಸ್ಟ್ 2, 1913**

*

**ಮನುಷ್ಯ ತನ್ನನ್ನು ಎಲ್ಲ ತಳಮಳ ಮತ್ತು ವೈಯಕ್ತಿಕ ಯೋಚನೆಯಿಂದ ವಾಸಿ ಮಾಡಿಕೊಳ್ಳುವುದು**

ಓ ದೈವೀ ಪ್ರಭು, ನಮ್ಮ ಜೀವನದ ಒಡೆಯನೆ, ನಮ್ಮ ಭೌತಿಕ ಸಂರಕ್ಷಣೆಗಾಗಿ ಇರುವ ಎಲ್ಲ ಕಾಳಜಿಯಿಂದ ಬಹಳ ಎತ್ತರದಲ್ಲಿ ನಾವು ಹಾರಾಡುವಂತಾಗಲಿ. ದೇಹದ ಸಂರಕ್ಷಣೆಯತ್ತ ಇಷ್ಟೊಂದು ಸತತವಾಗಿ ಹೊರಳಿಕೊಂಡಿರುವ ಯೋಚನೆಗಳು, ಮತ್ತು ಆರೋಗ್ಯ ಕುರಿತು ಈ ಪೂರ್ವಮಗ್ನತೆಗಳು, ಉಪಜೀವನಕ್ಕಾಗಿ ಸಾಧನ, ಜೀವನದ ಚೌಕಟ್ಟು ಇವೆಲ್ಲವುಗಳಿಗಿಂತ ಹೆಚ್ಚು ಮುಜುಗರವನ್ನುಂಟು ಮಾಡುವಂತಹದು, ಖಿನ್ನತೆಯನ್ನು ಉಂಟು ಮಾಡುವಂ–ತಹದು ಬೇರೆ ಯಾವುದೂ ಇಲ್ಲ. ... ಇದೆಲ್ಲವೂ ಎಷ್ಟೊಂದು ಪ್ರಾಮುಖ್ಯತೆಯಿಲ್ಲದ ವಿಷಯವಾಗಿದೆ, ಅದು ಕ್ಷೀಣ ಹೊಗೆಯಂತಿದ್ದು, ಅದನ್ನು ಒಂದು ಉಸಿರು ಚದುರಿಸಬಲ್ಲದು, ಇಲ್ಲವೆ ನಿನ್ನೆಡೆಗೆ ಹೊರಳಿದ ಏಕೈಕ ಯೋಚನೆ ವ್ಯರ್ಥ ಭ್ರಮೆಯನ್ನು ನಿವಾರಿಸಬಹುದು!

ಭಾವೋದ್ರೇಕದ ಗುಲಾಮರಾಗಿರುವವರನ್ನು ವಿಮೋಚನೆಗೊಳಿಸಿದ ಹಾಗೆ ಬಂಧನದಲ್ಲಿರುವವರನ್ನು ವಿಮೋಚನೆಗೊಳಿಸು. ನಿನ್ನೆಡೆಗೆ ಕರೆದೊಯ್ಯುವ ಮಾರ್ಗದಲ್ಲಿ ಈ ಅಡೆತಡೆಗಳು ಒಮ್ಮೆಗೆ ಭಯಾನಕ ಹಾಗೂ ಕ್ಷುಲ್ಲಕ ಆಗಿವೆ–ಅವುಗಳ ಆಳಿಕೆಯಲ್ಲಿ ಇನ್ನೂ ಇದ್ದವರಿಗೆ ಭಯಾನಕವಾಗಿರುತ್ತವೆ ಮತ್ತು ಆಚೆಗೆ ದಾಟಿ ಹೋದವನಿಗೆ ಕ್ಷುಲ್ಲಕವಾಗಿರುತ್ತವೆ.

ಮನುಷ್ಯ ತನಗಾಗಿ, ತನ್ನ ಜೀವನ ಹಾಗೂ ಆರೋಗ್ಯಕ್ಕಾಗಿ, ಸಮಾಧಾನ–ಕ್ಕಾಗಿ, ಪ್ರಗತಿಗಾಗಿಯೂ ಕೂಡ ಇರುವ ತಳಮಳದಿಂದ ಮುಕ್ತನಾದಾಗ ಬರುವ ಸಂಪೂರ್ಣ ಪರಿಹಾರ ಹಾಗೂ ಆನಂದದಾಯಕ ಹಗುರಾಗಿರುವ ಭಾವನೆ ಕುರಿತು ನಾನು ಹೇಗೆ ವರ್ಣಿಸಲಿ?

ಓ ದೈವೀ ಪ್ರಭುವೆ, ನೀನು ಈ ಪರಿಹಾರವನ್ನು, ಈ ವಿಮೋಚನೆಯನ್ನು ನನಗೆ ದಯಪಾಲಿಸಿರುವಿ, ನೀನು ನನ್ನ ಜೀವನದ ದೈವೀ ಜೀವನ, ನನ್ನ ಪ್ರಕಾಶದ

ದೈವೀ ಪ್ರಕಾಶ, ನೀನು ಹೆಚ್ಚುತ್ತಿರುವ ರೀತಿಯಲ್ಲಿ ಪ್ರೇಮವನ್ನು ಕಲಿಸಿಕೊಡುತ್ತಿರುವಿ, ಮತ್ತು ನನ್ನ ಅಸ್ತಿತ್ವದ ಉದ್ದೇಶವನ್ನು ನಾನು ಅರಿತುಕೊಳ್ಳುವಂತೆ ಮಾಡುತ್ತಿರುವಿ.

ನನ್ನಲ್ಲಿ ಜೀವಿಸುತ್ತಿರುವವನು ನೀನೇ ಆಗಿರುವಿ, ನೀನು ಮಾತ್ರ; ನಾನು ನನ್ನೊಂದಿಗೆ ಹಾಗೂ ನನಗೆ ಏನು ಸಂಭವಿಸಬಹುದು ಎಂಬುದರೊಂದಿಗೆ ಏಕೆ ಪೂರ್ವಮಗ್ನಳಾಗಿರಬೇಕು? ನಿನ್ನನ್ನೇ ಪ್ರಕಟಗೊಳಿಸಲು ಹೆಣಗುತ್ತಿರುವ ಈ ದೇಹದ ದ್ರವ್ಯವಾದ ಧೂಳು ನೀನಿಲ್ಲದಿದ್ದರೆ ಆಕಾರರಹಿತವಾದುದರಲ್ಲಿ ಹಾಗೂ ಅಚೇತನದಲ್ಲಿ ಚದುರಿ ಹೋಗುತ್ತಿತ್ತು, ಪ್ರಕಟಣೆಯ ಇತರ ಕೇಂದ್ರಗಳೊಡನೆ ಸಂಬಂಧವನ್ನು ಏರ್ಪಡಿಸುವಂತೆ ಮಾಡುವ ಸಂವೇದನಾಶೀಲತೆಯ ನಾಜೂಕು–ತನ ನೀನಿಲ್ಲದಿದ್ದರೆ, ಅಂಧಕಾರದ ತಮಸ್ಸಿನಲ್ಲಿ ಮಾಯವಾಗುತ್ತಿತ್ತು, ನೀನಿಲ್ಲದಿದ್ದರೆ ಈ ಇಡೀ ಸತ್ತೆಯನ್ನು ಸಚೇತನಗೊಳಿಸುವ ಹಾಗೂ ಪ್ರಕಾಶಿತಗೊಳಿಸುವ ಈ ಯೋಚನೆ ಅಸ್ಪಷ್ಟ, ಶೂನ್ಯ ಹಾಗೂ ಸಿದ್ಧಿಸಿಕೊಂಡಿರದಂತಹದು ಆಗುತ್ತಿತ್ತು. ಜೀವ ತುಂಬುವ, ಸುಸಂಬದ್ಧಗೊಳಿಸುವ, ಸಚೇತನಗೊಳಿಸುವ, ಎಲ್ಲ ವಸ್ತು–ವಿಷಯಗಳಿಗೆ ಬೆಚ್ಚಗಿನ ಅನುಭವ ಕೊಡುವ ಈ ಮಹೋನ್ನತ ಪ್ರೇಮ ನೀನಿಲ್ಲದಿದ್ದರೆ ಇನ್ನೂ ಎಚ್ಚತ್ತುಗೊಂಡಿರದ ಸಾಧ್ಯತೆಯಾಗುತ್ತಿತ್ತು. ನೀನಿಲ್ಲದಿದ್ದರೆ ಎಲ್ಲವೂ ಜಡ, ಪಶುಸದೃಶ ಇಲ್ಲವೆ ಅಚೇತನದ್ದಾಗುವುದು. ನಮ್ಮನ್ನು ಪ್ರಕಾಶಿತ–ಗೊಳಿಸುವ, ಅತ್ಯಾನಂದಕ್ಕೊಳಪಡಿಸುವ ಎಲ್ಲವೂ ನೀನೇ, ನಮ್ಮ ಅಸ್ತಿತ್ವದ ಇಡೀ ಕಾರಣ ಹಾಗೂ ಎಲ್ಲ ಗುರಿಯೂ ನೀನೇ. ನಮ್ಮನ್ನು ಪ್ರತಿಯೊಂದು ವೈಯಕ್ತಿಕ ಯೋಚನೆಯಿಂದ ಗುಣಪಡಿಸಲು, ಪ್ರಾಪಂಚಿಕ ಜೀವನದ ಆಕಸ್ಮಿಕಗಳಿಂದ ಮೇಲಕ್ಕೇರಿ ನಮ್ಮ ರೆಕ್ಕೆಗಳನ್ನು ಪಸರಿಸಲು ಇದಿಷ್ಟು ಸಾಕಾಗುವುದಿಲ್ಲವೆ? ಅದರಿಂದಾಗಿ ನಿನ್ನ ದೈವೀ ವಾತಾವರಣದಲ್ಲಿ ನಾವು ಹಾರಿ ಹೋಗುವಂತಾಗು ವುದು, ಮತ್ತು ನಿನ್ನ ಸಂದೇಶವಾಹಕರಾಗಿ ಮರಳಿ ಪೃಥ್ವಿಗೆ ಬಂದು, ನಿನ್ನ ಆಗಮನದ ಶುಭವಾರ್ತೆಯನ್ನು ಸಾರುವಂತಾಗುವುದು.

ಓ ದೈವೀ ಪ್ರಭುವೆ, ಘನತೆವೆತ್ತ ಮಿತ್ರನೆ, ಅದ್ಭುತ ಗುರುವೆ, ಫಲಭರಿತ ನಿಶ್ಚಲನೀರವತೆಯಲ್ಲಿ ನಾನು ನಿನಗೆ ಬಾಗಿ ನಮಸ್ಕರಿಸುತ್ತೇನೆ.

**ಅಗಸ್ಟ್ 17, 1913** **– ಶ್ರೀಮಾತೆ**

*

ನಿನ್ನೆದುರು ಕಳೆದ ಕೆಲವು ನಿಮಿಷಗಳು ಹಲವಾರು ಶತಕಗಳ ಕಾಲದ ಮಹದಾನಂದಕ್ಕೆ ಯೋಗ್ಯವೆನಿಸುವಂತಾಗಿವೆ. ...



ಓ ದೈವೀ ಪ್ರಭು, ಎಲ್ಲ ಛಾಯೆಗಳು ತೊಲಗಿ ಹೋಗುವಂತೆ ಮತ್ತು ನಾನು ಹೆಚ್ಚು ಹೆಚ್ಚಾಗಿ ಸಾತತ್ಯದಲ್ಲಿ ಹಾಗೂ ಪ್ರಶಾಂತತೆಯಲ್ಲಿ ನಿನ್ನ ವಿಶ್ವಾಸಾರ್ಹ ಸೇವಕಳಾಗುವಂತೆ ಅನುಗ್ರಹಿಸು. ನಿನ್ನೆದುರು ನನ್ನ ಹೃದಯ ಸ್ಫಟಿಕದ ಹಾಗೆ ಪರಿಶುದ್ಧವಾಗಿರಲಿ, ಅದರಿಂದಾಗಿ ಅದು ನಿನ್ನನ್ನು ಇಡಿಯಾಗಿ ಪ್ರತಿಫಲಿಸು–ವಂತಾಗುವುದು.

ಓಹ್, ನಿನ್ನೆದುರು ನಿಶ್ಚಲನೀರವತೆಯಲ್ಲಿ ನೆಲೆಸಿರುವುದರ ಮಾಧುರ್ಯ ಅದ್ಭುತವಾಗಿದೆ.

**ನವ್ಹೆಂಬರ 22, 1913**

*



ಎಡವದಿರುವ, ಸ್ವ–ಸಮಸ್ಥಾಯಿತ್ವವಿರುವ ಅವಳ ಸಂಕಲ್ಪ
ಉತ್ಸಾಹಪೂರಿತವಾಗಿಹುದು
ಅವಳ ಮನ ನಿಷ್ಕಾಪಟ್ಯದ ಶ್ವೇತ ಸಾಗರವಾಗಿಹುದು.
ಅದರ ಪ್ರವಾಹದಲಿ ಭಾವೋದ್ರೇಕವಿದ್ದರೂ ಕದಡಿದ ಒಂದೂ ತರಂಗ
ವಿರಲಿಲ್ಲ.

**Savitri 14-15** **– ಶ್ರೀ ಅರವಿಂದರು**

*

**ಪ್ರಾತಃಕಾಲದ ಒಂದು ಪ್ರಾರ್ಥನೆ**

ಓ ದೈವೀ ಪ್ರಭು, ಇಂದಿನ ದಿನ ನಮಗೆ ನಿನ್ನ ಸಂಕಲ್ಪಕ್ಕೆ ಹೆಚ್ಚು ಸಂಪೂರ್ಣವಾಗಿ ಮುಡಿಪಾಗಿರಿಸಿಕೊಳ್ಳುವಿಕೆಯನ್ನು, ನಿನ್ನ ದೈವೀ ಕಾರ್ಯಕ್ಕೆ

ನಮ್ಮನ್ನು ಸಮಗ್ರವಾಗಿ ಅರ್ಪಿಸಿಕೊಳ್ಳುವುದನ್ನು, ಸ್ವ–ವಿಸ್ಮರಣೆ ಇಡಿಯಾಗಿರುವುದನ್ನು, ಶ್ರೇಷ್ಠತರ ಜ್ಞಾನೋದಯವನ್ನು, ಹೆಚ್ಚು ಪರಿಶುದ್ಧವಾದ ಪ್ರೇಮವನ್ನು ತಂದುಕೊಡುವಂತೆ ಅನುಗ್ರಹಿಸು. ಎಂದೆಂದಿಗೂ ಹೆಚ್ಚು ಆಳವಾಗುತ್ತಿರುವ, ಹೆಚ್ಚು ಸತತವಿರುವ ಹಾಗೂ ಸಮಗ್ರವಾಗಿರುವ ಸಂಸರ್ಗದಲ್ಲಿ ನಾವು ನಿನ್ನೊಡನೆ ಹೆಚ್ಚು ಹೆಚ್ಚಾಗಿ ಏಕತೆ ಪಡೆಯುವಂತೆ ಮತ್ತು ನಿನಗೆ ಯೋಗ್ಯರಾದ ನಿನ್ನ ಸೇವಕರಾಗುವಂತೆ ಅನುಗ್ರಹಿಸು. ನಮ್ಮಿಂದ ಎಲ್ಲ ಅಹಂಮನ್ಯತೆಯನ್ನು ತೆಗೆದು ಹಾಕು, ಕ್ಷುದ್ರ ಗರ್ವವನ್ನು, ಅತ್ಯಾಸೆಯನ್ನು ಹಾಗೂ ಮಬ್ಬುತನವನ್ನು ಬೇರು ಸಹಿತ ಕಿತ್ತುಹಾಕು. ನಿನ್ನ ದೈವೀ ಪ್ರೇಮದಿಂದ ನಾವು ಪ್ರಜ್ವಲಿಸುವಂತಾಗಲಿ, ನಮ್ಮನ್ನು ಜಗತ್ತಿನಲ್ಲಿ ನಿನ್ನ ದೀವಟಿಗೆಗಳಾಗುವಂತೆ ಮಾಡು.

**ನವ್ವೆಂಬರ 28, 1913**

*

**ಈ ಎಲ್ಲ ಕೋಲಾಹಲ, ಈ ವ್ಯರ್ಥ ಹಾಗೂ ಕ್ಷುಲ್ಲಕ ಚಳುವಳಿ ಏಕೆ?**

ಈ ಎಲ್ಲ ಕೋಲಾಹಲ, ಈ ಎಲ್ಲ ಚಲನೆ, ಈ ವ್ಯರ್ಥ ಹಾಗೂ ಕ್ಷುಲ್ಲಕ ಚಳುವಳಿ ಏಕೆ? ನೊಣಗಳ ಒಂದು ಗುಂಪನ್ನು ಬಿರುಗಾಳಿ ಕೊಂಡೊಯ್ಯುವಂತೆ ಜನರನ್ನು ಕೊಂಡೊಯ್ಯುವ ಈ ಸುಂಟರಗಾಳಿಯೇಕೆ? ಆ ಎಲ್ಲ ಹಾಳುಮಾಡಲಾದ ಚೈತನ್ಯದ ಹಾಗೂ ಆ ಎಲ್ಲ ನಿರುಪಯುಕ್ತ ಪ್ರಯತ್ನಗಳ ದೃಶ್ಯ ಎಷ್ಟೊಂದು ವಿಷಾದನೀಯವಾಗಿದೆ! ಅವರು ಸೂತ್ರದ ಗೊಂಬೆಗಳಂತೆ ಕುಣಿಯುವುದನ್ನು ಎಂದು ನಿಲ್ಲಿಸುವರೋ? ಆ ಸೂತ್ರವನ್ನು ಯಾರು ಹಿಡಿದಿರುವರೋ ಇಲ್ಲವೆ ಯಾವುದು ಹಿಡಿದಿರುತ್ತದೆಯೋ ಎಂಬುದನ್ನು ಕೂಡ ಅವರು ಅರಿಯರು. ಅವರು ಅಚಂಚಲರಾಗಿ ಕುಳಿತುಕೊಂಡು, ತಮ್ಮನ್ನು ತಾವೇ ನೆನಪಿಗೆ ತಂದುಕೊಂಡು ಆ ಆಂತರಿಕ ದ್ವಾರವನ್ನು ತೆರೆದಿರಿಸಲು ಸಮಯ ಯಾವಾಗ ಕಂಡುಕೊಳ್ಳುವರೋ? ನಿನ್ನ ಅಮೂಲ್ಯ ಸಂಪತ್ತುಗಳು ಮತ್ತು ನಿನ್ನ ಅನಂತ ವರಗಳಿಂದ ಆ ದ್ವಾರ ಅವರನ್ನು ಪರದೆಯ ಹಿಂದಿರಿಸುತ್ತದೆ.

ನಿನ್ನ ಘನತೆವೆತ್ತ ಪ್ರಕಾಶದ ಒಂದು ಕಿಡಿ, ನಿನ್ನ ದೈವೀ ಪ್ರೇಮದ ಒಂದು ಹನಿ ಈ ವೇದನೆಯನ್ನು ದಿವ್ಯಾನಂದದ ಸಾಗರವನ್ನಾಗಿ ಪರಿವರ್ತಿಸಲು ಶಕ್ತವಾಗಿರುವಾಗ ಆ ಜನರ ಅಜ್ಞಾನ ಮತ್ತು ಮಬ್ಬುಗಳಿಂದ ಕೂಡಿದ ಜೀವನ, ಹುಚ್ಚುಚ್ಚಾದ ಚಳುವಳಿಯಿರುವ ಜೀವನ ಮತ್ತು ಹಾನಿಕಾರಕ ಬೆದರಿಕೊಂಡಿರುವಿಕೆ ಎಷ್ಟೊಂದು



ವೇದನಾಪೂರ್ಣವಾದದ್ದು ಹಾಗೂ ಮಬ್ಬಿನಿಂದ ಕೂಡಿದ್ದು ಎಂದು ನನಗೆ ತೋರಿಬರುತ್ತಿದೆ.

ಓ ದೈವೀ ಪ್ರಭು, ನನ್ನ ಪ್ರಾರ್ಥನೆ ನಿನ್ನೆಡೆಗೆ ಮೇಲೇರಿ ಬರುತ್ತದೆ: ನಿನ್ನ ಶಾಂತಿಯನ್ನು, ಸ್ಥಿರತೆಯನ್ನು ಮತ್ತು ಬದಲಾಗದ ಪ್ರಶಾಂತತೆಯಿಂದ ಬರುವ ಪ್ರತಿರೋಧಿಸಲಾಗದ ಬಲ ಇವುಗಳನ್ನು ಆ ಜನರು ಕಂಡುಕೊಳ್ಳಲಿ–ಯಾರ ಕಣ್ಣುಗಳನ್ನು ತೆರೆದಿರಿಸಲಾಗಿದೆಯೋ, ಯಾರು ನಿನ್ನನ್ನು ಕುರಿತು ತಮ್ಮ ಸತ್ತೆಯ ಪ್ರಜ್ವಲಿಸುವ ಸತ್ತೆಯಲ್ಲಿ ಚಿಂತನ ಮಾಡಲು ಶಕ್ತರಾಗಿರುವರೋ ಅಂತಹರಿಗೆ ಅದೆಲ್ಲ ಅವರ ಹಕ್ಕಾಗಿರುತ್ತದೆ.

**ನವ್ವೆಂಬರ 29, 1913**

*

ನಿನ್ನ ದೈವೀ ಪ್ರೇಮ ಪರಿಶುದ್ಧವಾದದ್ದು ಹಾಗೂ ನಿಷ್ಕಾಮವಾದದ್ದು, ಅದರಲ್ಲಿದ್ದುದನ್ನು ಗ್ರಹಿಸಿ ಪ್ರಕಟಪಡಿಸಲು ಶಕ್ತರಾಗುವುದು ನಿನ್ನನ್ನು ಅರಸುವ ಎಲ್ಲರ ಹೃದಯಗಳನ್ನು ತೆರೆದಿರಿಸಲು ಶಕ್ತವಾದ ಬೀಗದ ಕೈಯಾಗಿರುತ್ತದೆ. ಜ್ಞಾನ ಮಾರ್ಗದಿಂದ ನಿನ್ನನ್ನು ಅರಸುವವರು ಅತ್ಯುಚ್ಚ ಹಾಗೂ ನಿಜವಾದ ಕಲ್ಪನೆ ಹೊಂದಿರಬಹುದು, ನಿಜವಾದ ಜೀವನದ ಬಗ್ಗೆ ಎಂದರೆ ನಿನ್ನೊಡನೆ ಏಕವಾಗಿರುವುದರ ಬಗ್ಗೆ ಎಲ್ಲ ಮಾಹಿತಿ ಅವರ ಬಳಿ ಇರಬಹುದು, ಆದರೆ ಅವರು ಅದನ್ನು ಅರ್ಥಮಾಡಿಕೊಂಡಿರುವುದಿಲ್ಲ, ಆ ಜೀವನದ ಬಗ್ಗೆ ಅವರಿಗೆ ಅನುಭವವಿರುವುದಿಲ್ಲ. ನಿನ್ನೊಡನಿರುವ ಎಲ್ಲ ಸಂಪರ್ಕದ ಬಗ್ಗೆ ಅವರು ಅಜ್ಞಾನಿಗಳಾಗಿರುತ್ತಾರೆ. ಜ್ಞಾನಮಾರ್ಗವನ್ನು ಅನುಸರಿಸುವವರ ಕ್ರಿಯೆ ಒಂದು ರಚನೆಗೆ ಸೀಮಿತವಾಗಿರುತ್ತದೆ, ಅದನ್ನು ಅವರು ಅತ್ಯಂತ ಒಳ್ಳೆಯದೆಂದು ನಂಬುತ್ತಾರೆ, ಅವರನ್ನು ಪರಿವರ್ತನೆಗೆ ಒಳಪಡಿಸುವುದು ಬಹಳ ಕಠಿಣವಾದದ್ದು. ಅವರಲ್ಲಿ ಭಗವಂತನ ಬಗ್ಗೆ ಅವರ ಪ್ರಜ್ಞೆಯನ್ನು ಜಾಗ್ರತಗೊಳಿಸುವುದು ಬೇರೆ ಸದಿಚ್ಛೆಯುಳ್ಳ ಮನುಷ್ಯನಲ್ಲಿ ಜಾಗ್ರತಗೊಳಿಸುವುದಕ್ಕಿಂತ ಹೆಚ್ಚು ಕಠಿಣವಾದದ್ದು. ಪ್ರೇಮ ಮಾತ್ರ ಈ ಪವಾಡವನ್ನು ಕಾರ್ಯಗತಗೊಳಿಸಬಲ್ಲದು, ಏಕೆಂದರೆ ಪ್ರೇಮ ಎಲ್ಲ ದ್ವಾರಗಳನ್ನು ತೆರೆದಿರಿಸುತ್ತದೆ, ಎಲ್ಲ ಗೋಡೆಗಳಲ್ಲಿ ಒಳನುಗ್ಗಿ ಹೋಗುತ್ತದೆ, ಪ್ರತಿಯೊಂದು ಅಡೆತಡೆಯನ್ನು ತೊಡೆದುಹಾಕುತ್ತದೆ. ಸ್ವಲ್ಪಮಟ್ಟಿಗಿನ ನಿಜವಾದ ಪ್ರೇಮ ಅತ್ಯಂತ ಸುಂದರವಾದ ಭಾಷಣಗಳಿಗಿಂತ ಹೆಚ್ಚಿನದನ್ನು ಕೈಕೊಳ್ಳುತ್ತದೆ.

ದೈವೀ ಪ್ರಭುವೆ, ಪ್ರೇಮದ ಈ ಪರಿಶುದ್ಧ ಪುಷ್ಪ ನನ್ನಲ್ಲಿ ಅರಳಲಿ, ಅದು ತನ್ನ ಪರಿಮಳವನ್ನು ನಮ್ಮ ಬಳಿ ಬರುವವರೆಲ್ಲರಿಗೂ ಕೊಡುವಂತಾಗಲಿ ಮತ್ತು ಈ ಪರಿಮಳ ಅವರನ್ನು ಪವಿತ್ರಗೊಳಿಸಲಿ.

ಈ ಪ್ರೇಮದಲ್ಲಿ ಶಾಂತಿ ಹಾಗೂ ಸಂತೋಷಗಳಿವೆ, ಎಲ್ಲ ಬಲ ಹಾಗೂ ಸಿದ್ಧಿಯ ಕಾರಂಜಿಯಿದೆ, ಅದು ವಿಫಲವಾಗದ ಚಿಕಿತ್ಸಕ ಹಾಗೂ ಪರಮೋಚ್ಚ ರೀತಿಯಲ್ಲಿ ಸಮಾಧಾನ ಪಡಿಸುವವ ಇದ್ದಹಾಗೆ, ಅದು ಜಯಶಾಲಿ, ಸಾರ್ವಭೌಮ ಗುರುವಿದ್ದ ಹಾಗೆ.

**ಡಿಸೆಂಬರ 16, 1913**

*

**ಪ್ರತಿಕ್ಷಣ ನಾವು ಗತಕಾಲವನ್ನು ಕಳಚಿ ಹಾಕಬೇಕು**

ಓ ದೈವೀ ಪ್ರಭು, ವರ್ಷದ ಕೊನೆಗೆ ನಡೆಯುವ ಈ ಸಾಮೂಹಿಕ ಸಭೆಯ ಕೊನೆಗೊಳ್ಳುವಿಕೆಯು ಇನ್ನು ಮುಂದೆ ನಮ್ಮ ಜೀವನದಲ್ಲಿ ಯಾವ ಉದ್ದೇಶವನ್ನೂ ಹೊಂದಿರದ ನಮ್ಮ ಎಲ್ಲ ಬಂಧನಗಳನ್ನು ಹಾಗೂ ಆಸಕ್ತಿಗಳನ್ನು, ಭ್ರಮೆಗಳನ್ನು ಮತ್ತು ದೌರ್ಬಲ್ಯಗಳನ್ನು ಕೊನೆಗೊಳಿಸುವುದಕ್ಕೆ ಒಂದು ಅವಕಾಶವಾಗುವಂತೆ ಅನುಗ್ರಹಿಸು. ಪ್ರತಿಕ್ಷಣ ಗತಕಾಲವನ್ನು, ಬೀಳುತ್ತಿರುವ ಧೂಳನ್ನು ಝಾಡಿಸಿ ತೆಗೆಯುವ ಹಾಗೆ, ಚೆಲ್ಲಿಕೊಡಬೇಕು, ಅದರಿಂದಾಗಿ ಆ ಗತಕಾಲ ಇನ್ನೂ ಉಪಯೋಗಿಸದ, ಮತ್ತು ನಮ್ಮ ಮುಂದೆ ಪ್ರತಿಕ್ಷಣ ತೆರೆದುಕೊಳ್ಳುತ್ತಿರುವ ಮಾರ್ಗವನ್ನು ಕಲುಷಿತಗೊಳಿಸದಂತಾಗುವುದು.

ನಮ್ಮೊಳಗಿರುವ ಗುರುತಿಸಿದ ಹಾಗೂ ಸರಿಪಡಿಸಿದ ನಮ್ಮ ತಪ್ಪುಗಳು ಯಾವ ಪರಿಣಾಮವನ್ನೂ ಉಂಟುಮಾಡದ ದುರ್ಬಲ, ವ್ಯರ್ಥ ಮೃಗಜಲಕ್ಕಿಂತ ಬೇರೆ ಏನೂ ಆಗದಿರಲಿ ಮತ್ತು ಇನ್ನು ಅಸ್ತಿತ್ವದಲ್ಲಿ ಇರಬಾರದುದರ ಮೇಲೆ, ಎಲ್ಲ ಅಜ್ಞಾನದ ಮೇಲೆ, ಎಲ್ಲ ಮಬ್ಬುತನದ ಮೇಲೆ, ಎಲ್ಲ ಅಹಂಮನ್ಯತೆಯ ಮೇಲೆ ಕಾಲುಗಳನ್ನು ಊರಿ ನಾವು ದಿಟ್ಟತನದಿಂದ, ವಿಸ್ತಾರವಾದ ಕ್ಷಿತಿಜಗಳೆಡೆಗೆ, ಗಾಢತರವಾದ ಪ್ರಕಾಶದೆಡೆಗೆ, ಹೆಚ್ಚು ಪರಿಪೂರ್ಣವಾದ ಕರುಣೆಯೆಡೆಗೆ, ಹೆಚ್ಚು ನಿರ್ಮೋಹ ಪ್ರೇಮದೆಡೆಗೆ ನಮ್ಮ ಜಿಗಿತವನ್ನು ಮಾಡಬಹುದು.

**ಡಿಸೆಂಬರ 29, 1913**

*



**ಭ್ರಮಾತ್ಮಕ ಸುಲಭ ಮಾರ್ಗಗಳು**

ಬಹಳ ಸರಳವಾದ, ಪ್ರಯತ್ನಪಡುವುದನ್ನು ಕೇಳದೆ ಇರುವ ಮಾರ್ಗಗಳನ್ನು ನಾವು ದೂರವಿರಿಸೋಣ, ಅಂತಹ ಮಾರ್ಗಗಳು ನಾವು ಗುರಿಯನ್ನು ತಲುಪಿದೆವೆಂಬ ಭ್ರಮೆಯನ್ನುಂಟು ಮಾಡುತ್ತವೆ, ಎಲ್ಲ ಪತನಗಳಿಗೆ ದ್ವಾರ ತೆರೆದಿರಿಸುವ ಆ ಉಪೇಕ್ಷೆಯನ್ನು, ಪ್ರತಿಯೊಂದು ಬಗೆಯ ಕಂದರಗಳತ್ತ ಕರೆದೊಯ್ಯುವ ಆ ಪ್ರಸನ್ನಚಿತ್ತದ ಸ್ವ–ಪ್ರಶಂಸೆಯನ್ನು ನಾವು ದೂರವಿರಿಸೋಣ. ನಮ್ಮ ಪ್ರಯತ್ನಗಳು, ನಮ್ಮ ಹೋರಾಟಗಳು, ಈ ವಿಜಯಗಳೂ ಕೂಡ ನಾವು ಪ್ರಯಾಣಮಾಡಿ ಹೋಗಬೇಕಾದ ದೂರಕ್ಕೆ ಹೋಲಿಸಿದರೆ, ನಾವೀಗಾಗಲೆ ಸಾಗಿ ಹೋದ ಮಾರ್ಗ ಏನೂ ಅಲ್ಲ. ಅನಂತತೆಯ ಮುಂದೆ ಈ ಸೂಕ್ಷ್ಮಾತಿಸೂಕ್ಷ್ಮ ಧೂಳಿನ ಕಣಗಳು ಇಲ್ಲವೆ ಒಂದೇ ರೀತಿಯ ತಾರೆಗಳು ಸಮನಾಗಿರುತ್ತವೆ.

ಆದರೆ ದೈವೀ ಪ್ರಭು, ನೀನು ಎಲ್ಲ ಅಡೆತಡೆಗಳ ಮೇಲೆ ಜಯ ಸಾಧಿಸುವಿ, ಎಲ್ಲ ಅಜ್ಞಾನದ ಮೇಲೆ ಪ್ರಕಾಶ ಬೀರುವಿ, ಎಲ್ಲ ಗರ್ವವನ್ನು ಸೋಲಿಸುವ ದೈವೀ ಪ್ರೇಮವಾಗಿರುವಿ.

**ಜನವರಿ 8, 1914**

*

**ನಂಬಿಕೆಯ ಸಾಮರ್ಥ್ಯ**

ಪ್ರತಿಕ್ಷಣ ಮೊದಲು ಕಂಡುಕೊಂಡಿರದ, ಅನಿರೀಕ್ಷಿತ, ಅಪರಿಚಿತವಾದ ಎಲ್ಲವೂ ನಮ್ಮೆದುರಿಗಿರುತ್ತದೆ. ಪ್ರತಿಕ್ಷಣ ವಿಶ್ವವನ್ನು, ಅದರ ಸಮಗ್ರತೆಯಲ್ಲಿ ಮತ್ತು ಅದರ ಪ್ರತಿಯೊಂದು ಭಾಗದಲ್ಲಿ ಪುನಃ ಸೃಷ್ಟಿಸಲಾಗುತ್ತದೆ. ನಮ್ಮಲ್ಲಿ ನಿಜವಾದ ಜೀವಂತ ನಂಬಿಕೆ ಇದ್ದರೆ, ದೈವೀ ಪ್ರಭು, ನಿನ್ನ ಸರ್ವಸಾಮರ್ಥ್ಯ ಮತ್ತು ನಿನ್ನ ಏಕೈಕ ನೈಜತೆಗಳ ಬಗ್ಗೆ ಪರಿಪೂರ್ಣ ನಿಶ್ಚಿತತೆ ನಮ್ಮಲ್ಲಿದ್ದರೆ, ಪ್ರತಿಕ್ಷಣ ನಿನ್ನ ಪ್ರಕಟಣೆ ಎಷ್ಟೊಂದು ಸ್ಪಷ್ಟವಾಗುತ್ತದೆಂದರೆ ಇಡೀ ವಿಶ್ವ ಅದರಿಂದ ಪರಿವರ್ತನೆಗೊಳ–ಗಾಗುವುದು. ಆದರೆ ನಾವು ಪ್ರತಿಯೊಂದಕ್ಕೂ ಮತ್ತು ನಮ್ಮೆದುರಿಗೆ ಸಾಗಿ ಹೋದ ಎಲ್ಲದಕ್ಕೂ ಎಷ್ಟೊಂದು ಗುಲಾಮರಾಗಿರುವೆವೆಂದರೆ, ಪ್ರಕಟವಾದ ಸಮಗ್ರ ವಸ್ತು–ವಿಷಯಗಳಿಂದ ಎಷ್ಟೊಂದು ಪ್ರಭಾವಿತರಾಗಿರುವೆವೆಂದರೆ ಮತ್ತು ನಮ್ಮ ನಂಬಿಕೆ ಎಷ್ಟೊಂದು ದುರ್ಬಲವಾಗಿದೆಯೆಂದರೆ, ರೂಪಪರಿವರ್ತನೆಯ ಶ್ರೇಷ್ಠ ಪವಾಡಕ್ಕೆ ಮಧ್ಯವರ್ತಿಗಳಾಗಲು ನಾವಿನ್ನೂ ಅಸಮರ್ಥರಾಗಿದ್ದೇವೆ. ಆದರೆ ದೈವೀ ಪ್ರಭು,

ಒಂದು ದಿನ ಅದು ಬರಲಿದೆ ಎಂಬುದು ನನಗೆ ತಿಳಿದಿದೆ. ನಮ್ಮೆಡೆಗೆ ಬರುವವರನ್ನೆಲ್ಲ ನೀನು ಪರಿವರ್ತಿಸುವೆ ಎಂಬುದು ನನಗೆ ತಿಳಿದಿದೆ. ಅವರನ್ನು ನೀನು ಎಷ್ಟು ಮೂಲಭೂತವಾಗಿ ಪರಿವರ್ತಿಸುವೆ ಎಂದರೆ ಅವರು ಗತಕಾಲದ ಬಂಧನಗಳಿಂದ ಮುಕ್ತರಾಗಿ, ನಿನ್ನಲ್ಲಿ ಇಡಿಯಾಗಿ ಹೊಸ ಜೀವನದಲ್ಲಿ ವಾಸಿಸಲು ಪ್ರಾರಂಭಿಸುವರು, ಆ ಜೀವನ ನಿನ್ನಿಂದ ಕೈಕೊಂಡದ್ದಾಗಿರುತ್ತದೆ, ಅದರಲ್ಲಿ ನೀನೇ ಸಾರ್ವಭೌಮ ಪ್ರಭುವಾಗಿರುವಿ ಮತ್ತು ಈ ರೀತಿಯಲ್ಲಿ ಎಲ್ಲ ತಳಮಳಗಳು ಪ್ರಶಾಂತತೆಯಾಗಿ ಪರಿವರ್ತನೆಗೊಳ್ಳುತ್ತವೆ, ಎಲ್ಲ ಕಾಳಜಿ ಶಾಂತಿಯಾಗಿ, ಎಲ್ಲ ಸಂಶಯಗಳು ನಿಶ್ಚಿತತೆಗಳಾಗಿ, ಎಲ್ಲ ಕುರೂಪ ಸಾಮರಸ್ಯವಾಗಿ, ಎಲ್ಲ ಅಹಂಕಾರ ಸ್ವ–ಅರ್ಪಣೆಯಾಗಿ, ಎಲ್ಲ ಅಂಧಕಾರ ಪ್ರಕಾಶವಾಗಿ ಮತ್ತು ಎಲ್ಲ ವೇದನೆ ಬದಲಾಗದ ಸಂತೋಷವಾಗಿ ಬದಲಾಗುತ್ತವೆ.

**ಜನವರಿ 11, 1914**

*

**ಅತಿರೇಕವಾದ ಅನಿಷ್ಟ ಮತ್ತು ದುಷ್ಟ ಸಂಕಲ್ಪಗಳ ವಿರುದ್ಧ ಸಾಗಿ ಹೋಗಲು ಸಾಧ್ಯವಾಗದ ಪ್ರತಿಬಂಧ**

ಪ್ರತಿಯೊಂದು ಸತ್ತೆಯಲ್ಲಿರುವ ನಿನ್ನ ದೈವೀ ಸಾನ್ನಿಧ್ಯವು, ಓ ಪ್ರೇಮದ ದೈವೀ ಪ್ರಭುವೆ, ಪ್ರತಿಯೊಬ್ಬ ಮನುಷ್ಯನಿಗೆ, ಅವನು ಅತ್ಯಂತ ಕ್ರೂರನಾಗಿದ್ದಾಗಲೂ ಕೂಡ ಕರುಣೆಗೆ ತೆರೆದುಕೊಳ್ಳುವುದು ಮತ್ತು ಗೌರವಿಸಲು ಸಾಧ್ಯವಾಗದಷ್ಟು ನೀಚನಾಗಿ–ದ್ದಾಗಲೂ, ಬಹುಮಟ್ಟಿಗೆ ತನಗೆ ತಾನೇ ವಿರೋಧಿಸಿಯಾದರೂ ಗೌರವಕ್ಕೆ ಮತ್ತು ನ್ಯಾಯಕ್ಕೆ ತೆರೆದುಕೊಳ್ಳುವುದು ಸಾಧ್ಯವಾಗುವಂತೆ ಮಾಡುತ್ತದೆ. ಎಲ್ಲ ಸಂಪ್ರದಾಯಗಳು ಹಾಗೂ ಪೂರ್ವಗ್ರಹಗಳು ಇವುಗಳಾಚೆಗೆ ದೈವಿಕವಾದ ಹಾಗೂ ಪರಿಶುದ್ಧವಾದ ವಿಶೇಷ ಪ್ರಕಾಶದಿಂದ ನಾವಾಗಿರುವುದಕ್ಕೆ ಮತ್ತು ನಾವು ಕೈಕೊಳ್ಳುವುದಕ್ಕೆ ಪ್ರಕಾಶ ನೀಡುವವನು ಮತ್ತು ನಾವು ನಿಜವಾಗಿ ಏನಾಗಿದ್ದೇವೆ ಹಾಗೂ ನಾವೇನಾಗಲು ಸಾಧ್ಯವಿದೆ ಇವುಗಳ ನಡುವೆ ಇರುವ ವ್ಯತ್ಯಾಸವನ್ನು ಸ್ಪಷ್ಟವಾಗಿ ನೋಡುವಂತೆ ಮಾಡುವವನು ನೀನೇ ಆಗಿರುತ್ತೀ. ಮಿತಿಮೀರಿದ ಕೆಡುಕು, ಅಂಧಕಾರ ಮತ್ತು ದುರ್ಭಾವನೆಗಳ ವಿರುದ್ಧ ಇರಿಸಿದಂತಹ ಪ್ರತಿಬಂಧಕ–ವಾಗಿರುವಿ; ಪ್ರತಿಯೊಂದು ಹೃದಯದಲ್ಲಿ ಸಾಧ್ಯವಿರುವ ಹಾಗೂ ಭವಿಷ್ಯತ್ತಿ–ನಲ್ಲಾಗುವ ಎಲ್ಲ ಪರಿಪೂರ್ಣತೆಗಳಿಗೆ ಭರವಸೆ ನೀನೇ ಆಗಿರುವಿ.



ನಿನ್ನ ಆರಾಧನೆಯ ಉತ್ಸಾಹ ನಿನಗಾಗಿಯೇ ಇದೆ.

**ಜನವರಿ 29, 1914**

*

**ಆಯ್ಕೆಗಳ ಮಹತ್ವ**

ಅತ್ಯಂತ ಒಳ್ಳೆಯ ರೀತಿಯಲ್ಲಿ ನಿನ್ನನ್ನು ನಾವು ಹೇಗೆ ಪ್ರಕಟಿಸಬಲ್ಲೆವು ಮತ್ತು ಹೇಗೆ ಸೇವೆ ಸಲ್ಲಿಸಬಲ್ಲೆವು ಎಂದು ಪ್ರತಿದಿನ ನಿನ್ನನ್ನು ಕೇಳುತ್ತ ನಮ್ಮ ಯೋಚನೆ ನಿನ್ನತ್ತ ಏರಿ ಹೋಗಲಿ. ಪ್ರತಿಕ್ಷಣ ನಾವು ಮಾಡಿಕೊಳ್ಳಬಹುದಾದ ಆಯ್ಕೆಗಳು, ಪ್ರಾಮುಖ್ಯತೆ ಇಲ್ಲದವುಗಳಾಗಿದ್ದರೂ ಕೂಡ, ಬಹಳ ಮಹತ್ವದವಾಗಿರುತ್ತವೆ–ಏಕೆಂದರೆ ನಮ್ಮ ನಿರ್ಣಯಕ್ಕನುಸಾರವಾಗಿ ನಾವು ಒಂದಿಲ್ಲೊಂದು ಬಗೆಯ ದೈವ ನಿಯತಿಗಳ ವರ್ಗಕ್ಕೆ ಅಧೀನರಾಗುತ್ತೇವೆ–ನಿನ್ನ ದೈವೀ ಸಂಕಲ್ಪ ನಮ್ಮ ಆಯ್ಕೆಯನ್ನು ಮಾಡುವಂತಾಗಲಿ ಮತ್ತು ಹೀಗೆ ನೀನು ನಮ್ಮ ಇಡೀ ಜೀವನವನ್ನು ನಿರ್ದೇಶಿಸುವಂತಾಗಲಿ ಎಂಬ ಮನೋಭಾವ ಪ್ರತಿಕ್ಷಣ ನಮ್ಮಲ್ಲಿರುವಂತಾಗಲಿ. ನಾವು ನಿರ್ಧಾರವೊಂದನ್ನು ಕೈಕೊಳ್ಳುತ್ತಿರುವಾಗಿನ ನಮ್ಮ ಪ್ರಜ್ಞೆಯಲ್ಲಿರುವ ನೈಜತೆಗಳ ಕ್ರಮಬದ್ಧತೆಗನುಗುಣವಾದ ದೈವ ನಿಯತಿಗೆ ಅಧೀನರಾಗುತ್ತೇವೆ, ಅದರಿಂದ ಪರಿಣಾಮಗಳುಂಟಾಗುತ್ತವೆ. ಅವುಗಳನ್ನು ಪೂರ್ವಭಾವಿಯಾಗಿ ಕಂಡುಕೊಳ್ಳಲಾಗಿರುವುದಿಲ್ಲ, ಅವು ತೊಂದರೆದಾಯಕವಾಗಿರುತ್ತವೆ, ಮನುಷ್ಯನ ಜೀವನದ ಸರ್ವಸಾಧಾರಣ ನೆಲೆನಿರ್ದೇಶನಕ್ಕೆ ಅವು ವಿರುದ್ಧವಾಗಿರುತ್ತವೆ ಮತ್ತು ನಂತರ ಕೆಲವೊಮ್ಮೆ ಜಯಿಸಲು ಭಯಾನಕವಾಗಿರುತ್ತವೆ, ಹಾಗಾಗಿ ಓ ದೈವೀ ಪ್ರಭು, ದೈವೀ ಪ್ರೇಮದ ಒಡೆಯನೆ, ನಾವು ಕೇವಲ ನಿನ್ನ ಬಗ್ಗೆ ಪ್ರಜ್ಞಾಪೂರ್ಣ–ರಾಗಲು ಬಯಸುತ್ತೇವೆ; ನಾವು ನಿರ್ಧಾರ ಕೈಕೊಂಡ ಪ್ರತಿಸಲ, ಆಯ್ಕೆ ಮಾಡಿಕೊಂಡ ಪ್ರತಿಸಲ ನಿನ್ನೊಡನೆ ತಾದಾತ್ಮ್ಯ ಹೊಂದಿರಲು ಬಯಸುತ್ತೇವೆ. ಅದರಿಂದಾಗಿ ನಮ್ಮನ್ನು ಚಲಿಸುವಂತೆ ಮಾಡುವುದು ನಿನ್ನ ದೈವೀ ಸಂಕಲ್ಪ–ವಾಗುತ್ತದೆ ಮತ್ತು ನಮ್ಮ ಜೀವನ ಹೀಗೆ ಪರಿಣಾಮಕಾರಿಯಾಗಿ ಹಾಗೂ ಸಮಗ್ರ–ವಾಗಿ ನಿನಗೆ ಮುಡಿಪಾಗಿರಿಸಿಕೊಳ್ಳುವಂತಾಗುವುದು.

ನಿನ್ನ ದೈವೀ ಪ್ರಕಾಶದಲ್ಲಿ ನಾವು ನೋಡುವೆವು, ನಿನ್ನ ದೈವೀ ಜ್ಞಾನದಲ್ಲಿ ನಾವು ನೋಡುವೆವು, ನಿನ್ನ ದೈವೀ ಸಂಕಲ್ಪದಲ್ಲಿ ನಾವು ಸಿದ್ಧಿಸಿಕೊಳ್ಳುವೆವು.

**ಜನವರಿ 31, 1914**

*

**ಜೀವನದ ನಿಯಮಗಳು ತತ್ಕಾಲಕ್ಕೆ ಹೇಗೋ ಸರಿಹೊಂದಿಸಿಕೊಳ್ಳುವಂತಹ–ವಾಗಿರುತ್ತವೆ**

ಸಮಗ್ರವಾಗಿ ನಿನ್ನೊಡನೆ ಏಕತೆಯಲ್ಲಿದ್ದುಕೊಂಡು, ಪರಿಸ್ಥಿತಿಗಳನ್ನು ಪರಿಗಣನೆಗೆ ತೆಗೆದುಕೊಂಡಾಗ ಕ್ರಿಯೆಯಲ್ಲಿ ಯಾವುದು ನಿನ್ನನ್ನು ಅತ್ಯಂತ ಪರಿಪೂರ್ಣವಾಗಿ ಅಭಿವ್ಯಕ್ತಪಡಿಸುತ್ತದೆ ಎಂಬುದರ ಬಗೆಗೆ ಸತತ ಅರಿವುಳ್ಳವನಿಗೆ ಯಾವ ಬಾಹ್ಯ ನಿಯಮವೂ ಅವಶ್ಯವಾಗಿರುವುದಿಲ್ಲ. ನಿನ್ನನ್ನು ತಿಳಿದುಕೊಂಡಿರದೆ ಇದ್ದವರ ಅಜ್ಞಾನವನ್ನು ಸಾಧ್ಯವಿದ್ದಷ್ಟು ಕಡಿಮೆ ಮಾಡುವುದಕ್ಕೆ ಮತ್ತು ನಿನ್ನೊಡನೆ ಕೇವಲ ಮಧ್ಯೆ ಮಧ್ಯೆ ಸಂಪರ್ಕ ಇಟ್ಟುಕೊಂಡವರ ಕುರುಡುತನ ಹಾಗೂ ಮಬ್ಬುತನಗಳಿಗೆ ಪ್ರತಿಕೂಲವಾಗಿ ಕಾರ್ಯಮಾಡುವುದಕ್ಕೆ ಜೀವನದ ತತ್ವಗಳು, ಒಟ್ಟಿನಲ್ಲಿ, ಕೇವಲ, ತತ್ಕಾಲಕ್ಕೆ ಹೇಗೋ ಸರಿಹೊಂದಿಸುವಂತಹವಾಗಿರುತ್ತವೆ.

ಮನುಷ್ಯ ತನಗಾಗಿ ನಿಯಮಗಳನ್ನು ಮಾಡಿಕೊಂಡಿರುವುದು ಮತ್ತು ಅವು ಸಾಧ್ಯವಿದ್ದಷ್ಟು ಸರ್ವಸಾಧಾರಣ ಎಂದರೆ ಸಾಧ್ಯವಿದ್ದಷ್ಟು ನಮ್ಯವಾದವುಗಳನ್ನಾಗಿ ಮಾಡುವುದು ಒಳ್ಳೆಯದು, ಆದರೆ ಅವುಗಳನ್ನು ಕೃತ್ರಿಮ ಪ್ರಕಾಶಗಳೆಂದು ಮಾತ್ರ ಉಪಯೋಗಿಸಬೇಕು, ದೈವೀ ಪ್ರಭು, ನಿನ್ನೊಡನಿರುವ ಸಂಸರ್ಗದ ಪೂರ್ಣ ಸ್ವಾಭಾವಿಕ ಪ್ರಕಾಶದ ಕೊರತೆಯಿದ್ದಾಗ ಉಪಯೋಗಿಸಬೇಕು. ಅಲ್ಲದೆ ಈ ನಿಯಮಗಳನ್ನು ಸತತ ಪರಿಷ್ಕರಣೆಗೆ ಒಳಪಡಿಸುವುದು ಅತ್ಯಗತ್ಯವಾದದ್ದು, ಏಕೆಂದರೆ ಅವು ಕೇವಲ ಸದ್ಯದ ಜ್ಞಾನದ ಅಭಿವ್ಯಕ್ತಿಯಾಗಿರುತ್ತವೆ ಮತ್ತು ಜ್ಞಾನದಲ್ಲಾಗುವ ಸುಧಾರಣೆಯಿಂದ ಲಾಭ ಪಡೆಯಬೇಕು.

ಆ ಕಾರಣದಿಂದಾಗಿ ಮನುಷ್ಯ ಧ್ಯಾನ ಕೈಕೊಳ್ಳುತ್ತಿರುವಾಗ ಇರಬೇಕಾದ ಮನೋಭಾವ ಹೀಗಿರಬೇಕು: ಯಾರಿಗೂ ಹಾನಿಯನ್ನುಂಟು ಮಾಡದಂತೆ ದೂರವಿರುವುದಷ್ಟೇ ಅಲ್ಲ, ಆದರೆ ಎಲ್ಲದಕ್ಕಿಂತಲೂ ಹೆಚ್ಚಾಗಿ ಅವರಿಗೆ ಸಾಧ್ಯವಿದ್ದಷ್ಟು ಹೆಚ್ಚು ಒಳ್ಳೆಯದನ್ನು ಮಾಡುವುದಕ್ಕೆ ಹೆಣಗಬೇಕು–ಎಂದರೆ ಅವರು ತಮ್ಮೊಳಗಿರುವ ನಿನ್ನನ್ನು ಕಂಡುಕೊಳ್ಳುವ ಪರಮೋಚ್ಚ ಶೋಧವನ್ನು ಮಾಡಲು ಮನುಷ್ಯ ಸಾಧ್ಯವಿದ್ದಷ್ಟು ಒಳ್ಳೆಯ ರೀತಿಯಲ್ಲಿ ಸಹಾಯಮಾಡಬೇಕು–ನಿನ್ನ ನಿಯಮಕ್ಕೆ ಹೊಂದಿಕೊಳ್ಳಬಹುದಾದ ಯಾವ ನಿಯಮವೂ ಸಾಕಷ್ಟು ವಿಶಾಲ–ವಾಗಿರದೆ, ನಮ್ಯವಾಗಿರದೆ ಇರುವುದನ್ನು ನಾನು ಸ್ಪಷ್ಟವಾಗಿ ನೋಡಿದೆ ಮತ್ತು ಇರುವ ಏಕೈಕ ಪರಿಹಾರವೆಂದರೆ ದೈವೀ ಪ್ರಭು, ಯಾವಾಗಲೂ ನಿನ್ನ ಸಂಸರ್ಗ–



ದಲ್ಲಿರುವುದಾಗಿದೆ, ಅದರಿಂದಾಗಿ ಪರಿಸ್ಥಿತಿಗಳ ಎಲ್ಲ ಅನಂತ ವೈವಿಧ್ಯದೊಂದಿಗೆ ಅದನ್ನು ಹೊಂದಿಸಿಕೊಳ್ಳಬಹುದಾಗಿದೆ.

**ಫೆಬ್ರುವರಿ 7, 1914**

*

**ದೈವೀ ನಿಯಮ ಮನೋಭಾವಗಳ ನಿಯಮವಾಗಿರುತ್ತದೆ**

ದೈವೀ ಪ್ರಭು, ನಿನ್ನ ಪರಮೋಚ್ಚ ಪ್ರಜ್ಞೆಯೊಂದಿಗೆ ಪ್ರಜ್ಞಾವಂತನಾದಾಗ, ಮನುಷ್ಯ ಎಲ್ಲ ಪಾರ್ಥಿವ ಪರಿಸ್ಥಿತಿಗಳನ್ನು ಪರಿಗಣಿಸುತ್ತಾನೆ, ಅವುಗಳ ಸಂಪೂರ್ಣ ಸಾಪೇಕ್ಷತೆಯನ್ನು ನೋಡಿ ಹೇಳುತ್ತಾನೆ: "ಇದನ್ನು ಅಥವಾ ಅದನ್ನು ಕೈಕೊಳ್ಳುವುದು, ಒಟ್ಟಿನಲ್ಲಿ, ಬಹಳ ಮಹತ್ವದ ವಿಷಯವಾಗಿರುವುದಿಲ್ಲ; ಆದಾಗ್ಯೂ ಕ್ರಿಯೆಯ ಒಂದು ವಿಶಿಷ್ಟ ರೀತಿಯಿಂದ ಕಾರ್ಯಸಾಮರ್ಥ್ಯವನ್ನು, ವಿಶಿಷ್ಟ ಮನೋಭಾವವನ್ನು ಅತ್ಯಂತ ಒಳ್ಳೆಯ ರೀತಿಯಲ್ಲಿ ಉಪಯೋಗಿಸುವಂತಾ–ಗುವುದು. ಎಲ್ಲ ಕ್ರಿಯೆಗಳು, ಅವೇನೇ ಆಗಿರಲಿ, ತೋರಿಕೆಗೆ ವೈರುಧ್ಯವಿದ್ದವುಗಳೇ ಆಗಿರಲಿ, ನಿನ್ನ ದೈವೀ ನಿಯಮದ ಅಭಿವ್ಯಕ್ತಿಯಾಗಬಲ್ಲವು, ಆ ನಿಯಮದ ಪ್ರಜ್ಞೆಯನ್ನು ಅವುಗಳಲ್ಲಿ ಒಳಸೇರಿಸಿದ್ದಷ್ಟರ ಮಟ್ಟಿಗೆ ಅವು ಹಾಗಾಗಬಲ್ಲವು, ಅದು ವ್ಯಾವಹಾರಿಕವಾಗಿ ಅನ್ವಯಿಸಬಹುದಾದ ನಿಯಮವಾಗಿರುವುದಿಲ್ಲ, ಅದನ್ನು ಸಾಧಾರಣ ಮಾನವ ಪ್ರಜ್ಞೆಯ ತತ್ವಗಳಲ್ಲಿ ಇಲ್ಲವೆ ನಿಯಮಗಳಲ್ಲಿ ಪರಿವರ್ತಿಸ–ಲಾಗುವುದಿಲ್ಲ, ಆದರೆ ಅದು ಮನೋಭಾವದ ಸತತ ಮತ್ತು ಪ್ರಬಲ ಪ್ರಜ್ಞೆಯ, ಸೂತ್ರಗಳಲ್ಲಿ ಅಭಿವ್ಯಕ್ತಪಡಿಸಲಾಗದ, ಆದರೆ ಜೀವಿಸಬಹುದಾದ ಒಂದು ನಿಯಮವಾಗಿರುತ್ತದೆ.

ಆದರೆ ಸಾಧಾರಣ ಮನೋಭಾವದಲ್ಲಿ ಮನುಷ್ಯ ಹಿಂದೆ ಬಿದ್ದುಬಿಟ್ಟ ಕೂಡಲೆ, ಯಾವುದನ್ನೂ ಹಗುರಾಗಿ ಹಾಗೂ ಉದಾಸೀನತೆಯಿಂದ ಪರಿಗಣಿಸಬಾರದು, ಅತ್ಯಂತ ಕನಿಷ್ಠವಾಗಿರುವ ಪರಿಸ್ಥಿತಿಗಳು ಹಾಗೂ ಅತಿ ಚಿಕ್ಕ ಕ್ರಿಯೆಗಳು ಮಹತ್ವದವಾಗಿರುತ್ತವೆ ಮತ್ತು ಅವುಗಳನ್ನು ಗಂಭೀರವಾಗಿ ಪರಿಗಣಿಸಬೇಕು. ಏಕೆಂದರೆ ನಮ್ಮ ಪ್ರಜ್ಞೆ, ಸನಾತನನ ಪ್ರಜ್ಞೆಯೊಂದಿಗೆ ತಾದಾತ್ಮ್ಯ ಪಡೆಯುವಂತೆ ಮಾಡುವುದನ್ನು ಸುಲಭವಾಗಿರಿಸುವಂತೆ ನಾವು ಪ್ರತಿಕ್ಷಣ ಕೈಕೊಳ್ಳಬೇಕಾಗಿರುತ್ತದೆ ಮತ್ತು ಕಾಳಜಿಪೂರ್ವಕವಾಗಿ ಈ ಗುರುತಿಸಿಕೊಳ್ಳುವಿಕೆಗೆ ಅಡೆತಡೆ ಉಂಟು–ಮಾಡುವುದರಿಂದ ತಪ್ಪಿಸಿಕೊಳ್ಳಬೇಕಾಗಿರುತ್ತದೆ. ಆಗ ನಡತೆಯ ನಿಯಮಗಳು

ಪರಿಪೂರ್ಣ ನಿರಾಸಕ್ತಿಯ ತಳಹದಿಯನ್ನು ಹೊಂದಿ ತಮ್ಮ ಪೂರ್ಣ ಮೌಲ್ಯವನ್ನು ಕಂಡುಕೊಳ್ಳುವಂತಾಗುತ್ತದೆ.

ನನ್ನ ಹೃದಯದಲ್ಲಿರುವ ಶಾಂತಿಯೊಂದಿಗೆ, ಮನಸ್ಸಿನಲ್ಲಿರುವ ಪ್ರಕಾಶ–ದೊಂದಿಗೆ, ನಿಶ್ಚಿತತೆಯಿಂದ ನನ್ನ ಇಡೀ ಸತ್ತೆಯಲ್ಲಿ ಜನ್ಮತಾಳಿದ ಭರವಸೆಯೊಂದಿಗೆ, ಓ ದೈವೀ ಪ್ರಭು, ಸನಾತನ ಪ್ರೇಮದ ದೈವೀ ಗುರುವೆ ನಾನು ನಿನಗೆ ವಂದಿಸುವೆ.

**ಫೆಬ್ರುವರಿ 12, 1914**

*

**ನಿಜವಾದ ಮುಡಿಪಾಗಿರಿಸುವಿಕೆ ಮತ್ತು ಕಾರ್ಯದ ಬಗೆಗಿನ ಭ್ರಮೆಗಳು**

ಪ್ರತಿದಿನ, ಪ್ರತಿಕ್ಷಣ ಹೊಸ ಹಾಗೂ ಹೆಚ್ಚು ಸಂಪೂರ್ಣ ಮುಡಿಪಾಗಿ–ರಿಸುವಿಕೆಗೆ ಒಂದು ಸಂದರ್ಭವಾಗಬೇಕು ಮತ್ತು ಅದು ಉತ್ಸಾಹಪೂರ್ಣವಾದ ಹಾಗೂ ಕಳವಳಕ್ಕೀಡಾದ ಮುಡಿಪಾಗಿರಿಸುವಿಕೆಗಳಲ್ಲಿ ಒಂದಾಗಿರಬಾರದು, ಅತಿಯಾಗಿ ಕ್ರಿಯಾಶೀಲವಾಗಿರಬಾರದು, ಕಾರ್ಯ ಕುರಿತು ಭ್ರಮೆಗಳಿಂದ ತುಂಬಿ–ಕೊಂಡಿರಬಾರದು, ಆದರೆ ಆಳವಾದ, ನಿಶ್ಚಲನೀರವತೆಯಲ್ಲಿರುವ ಮುಡಿಪಾಗಿ–ರಿಸಿಕೊಳ್ಳುವಿಕೆ ಆಗಿರಬೇಕು, ಅದು ಅವಶ್ಯವಾಗಿ ಗೋಚರವಾಗಬೇಕಾಗಿರು–ವುದಿಲ್ಲ, ಆದರೆ ಎಲ್ಲ ಕ್ರಿಯೆಯಲ್ಲಿ ಒಳನುಗ್ಗುವಂತಹದು ಮತ್ತು ಎಲ್ಲ ಕ್ರಿಯೆಯನ್ನು ರೂಪ ಪರಿವರ್ತನೆಗೆ ಒಳಪಡಿಸುವಂತಹದು ಆಗಿರುತ್ತದೆ. ನಮ್ಮ ಮನಸ್ಸು ಏಕಾಕಿಯಾಗಿ, ಶಾಂತಿಪೂರ್ಣ ವಾಗಿದ್ದು ಯಾವಾಗಲೂ ನಿನ್ನಲ್ಲಿ ವಿಶ್ರಾಂತಿ ಪಡೆಯಬೇಕು ಮತ್ತು ಆ ಪರಿಶುದ್ಧ ಶಿಖರಗಳಿಂದ ನೈಜತೆಗಳ ಹಾಗೂ ಎಲ್ಲ ಅಸ್ಥಿರ ಹಾಗೂ ಕ್ಷಣಿಕ ನೋಟಗಳ ಹಿಂದಿರುವ ಏಕೈಕ ಮತ್ತು ಸನಾತನ ದೈವೀ ನೈಜತೆಯ ನಿಖರವಾದ ಗ್ರಹಿಕೆಯನ್ನು ಪಡೆಯಬೇಕು.

ಓ ದೈವೀ ಪ್ರಭು, ನನ್ನ ಹೃದಯ ಎಲ್ಲ ಅಸೌಖ್ಯದಿಂದ ಹಾಗೂ ತಳಮಳದಿಂದ ದೂರವಾಗಿ ಪರಿಶುದ್ಧಗೊಂಡಿದೆ, ಅದು ಏಕಪ್ರಕಾರದ್ದು ಮತ್ತು ಸ್ಥಿರವಾದದ್ದು ಆಗಿದ್ದು ಎಲ್ಲ ವಸ್ತು–ವಿಷಯಗಳಲ್ಲಿ ನಿನ್ನನ್ನು ನೋಡುತ್ತದೆ; ಮತ್ತು ನಮ್ಮ ಬಾಹ್ಯ ಪರಿಸ್ಥಿತಿಗಳು ಏನೇ ಆಗಿರಲಿ, ನಮ್ಮ ಬಾಹ್ಯಕ್ರಿಯೆಗಳು ಎಂತಹವೇ ಆಗಿರಲಿ, ನೀನೊಬ್ಬನೇ ಜೀವಿಸುತ್ತಿರುವಿ, ನಿನ್ನ ಬದಲಾಗದ ಶಾಶ್ವತತೆಯಲ್ಲಿ ನೀನೊಬ್ಬನೇ ಇರುವಿ ಮತ್ತು ನಾವು ಜೀವಿಸುವುದು ನಿನ್ನನ್ನೇ ಎಂಬುದು ನನಗೆ ತಿಳಿದಿದೆ. ...



ಪೃಥ್ವಿಯ ಮೇಲೆಲ್ಲ ಶಾಂತಿ ಇರುವಂತಾಗಲಿ.

**ಫೆಬ್ರುವರಿ 21, 1914**

*

**ವಿಶ್ವಕ್ಕಿಂತ ವಿಶಾಲವಾದ ನನ್ನ ಹೃದಯದಲ್ಲಿ ಎಲ್ಲ ಸತ್ತೆಗಳು ಬೆಚ್ಚಗಿರುವಂತೆ ಒಳದೂರಿಸಿಕೊಳ್ಳುತ್ತವೆ**

ನಾನು ಸುಮಾರು ಹದಿಮೂರು ವರ್ಷದವಳಾಗಿದ್ದಾಗ, ಪ್ರತಿದಿನ ರಾತ್ರಿ ನಿದ್ರಿಸಲು ಹಾಸಿಗೆಯ ಮೇಲೆ ಒರಗಿಕೊಂಡ ಕೂಡಲೆ ನನಗೆ ಒಂದು ಬಗೆಯ ಅನುಭವವಾಗುತ್ತಿತ್ತು, ಈ ಅನುಭವ ನನಗೆ ಒಂದು ವರ್ಷ ಪರ್ಯಂತ ಆಗುತ್ತಿತ್ತು. ನಾನು ಹಾಸಿಗೆಯ ಮೇಲೆ ಒರಗುತ್ತಿದ್ದಂತೆ, ನಾನು ನನ್ನ ದೇಹದಿಂದ ಹೊರಗೆ ಬಂದು ನೇರವಾಗಿ ನಮ್ಮ ಮನೆಯ ಮೇಲೆ ಏರಿ ಹೋದಂತೆ, ನಂತರ ನಗರದ ಮೇಲ್ಗಡೆ ಬಹಳ ಎತ್ತರಕ್ಕೆ ಏರಿ ಹೋದಂತೆ ತೋರಿಬರುತ್ತಿತ್ತು. ಆಗ ನನ್ನ ದೇಹಕ್ಕಿಂತಲೂ ಉದ್ದವಾದ, ಶೋಭಾಯಮಾನವಾದ, ಬಂಗಾರ ಬಣ್ಣದ ನಿಲುವಂಗಿ ಚಾಚಿಕೊಂಡು ನನ್ನನ್ನು ವೃತ್ತಾಕಾರದಲ್ಲಿ ಸುತ್ತಿಕೊಂಡ ಹಾಗಿರುತ್ತಿತ್ತು, ಅದು ನಾನಿದ್ದ ಪಟ್ಟಣದ ಮೇಲೆ ಭವ್ಯವಾದ ಚಪ್ಪರ ಹಾಕಿದ ರೀತಿಯಲ್ಲಿರುತ್ತಿತ್ತು. ಆಗ ಎಲ್ಲ ಬದಿಗಳಿಂದಲೂ ಅನೇಕಾನೇಕ ಜೀವಿಗಳು ನನ್ನೆಡೆಗೆ ಬರುವುದನ್ನು ನೋಡುತ್ತಿದ್ದೆ, ಅವರಲ್ಲಿ ಗಂಡಸರು, ಹೆಂಗಸರು, ಮಕ್ಕಳು, ಮುದುಕರು, ರೋಗಿಗಳು, ದುರ್ದೈವಿಗಳು ಇರುತ್ತಿದ್ದರು. ಅವರೆಲ್ಲರೂ ಅಲ್ಲಿ ಹಬ್ಬುತ್ತ, ಹರಡುತ್ತ ನಡೆದ ಆ ನಿಲುವಂಗಿಯ ಕೆಳಗೆ ಸಹಾಯವನ್ನು ಬೇಡುತ್ತ ಒಟ್ಟುಗೂಡಿರುತ್ತಿದ್ದರು, ತಮ್ಮ ದುಃಸ್ಥಿತಿಗಳು, ವೇದನೆಗಳು ಹಾಗೂ ಒದ್ದಾಟ ಕುರಿತು ಹೇಳುತ್ತಿದ್ದರು. ಅವುಗಳಿಗೆ ಉತ್ತರ ನೀಡುವ ರೀತಿಯಲ್ಲಿ, ನಮ್ಯ ಹಾಗೂ ಜೀವತಾಳಿದ ನಿಲುವಂಗಿ ವ್ಯಕ್ತಿಗತವಾಗಿ ಪ್ರತಿಯೊಬ್ಬರತ್ತ ಚಾಚಿಕೊಳ್ಳುತ್ತಿತ್ತು ಮತ್ತು ಅವರು ಅದನ್ನು ಸ್ಪರ್ಶಿಸಿದ ಕೂಡಲೆ ಅವರಿಗೆ ಸಮಾಧಾನ ದೊರಕುತ್ತಿತ್ತು ಇಲ್ಲವೆ ಅವರ ರೋಗ ವಾಸಿಯಾಗುತ್ತಿತ್ತು; ತಮ್ಮ ದೇಹಗಳಿಂದ ಹೊರಬಂದಿದ್ದ ಅವರು ಮೊದಲಿನಗಿಂತ ಹೆಚ್ಚು ಸಂತುಷ್ಟರಾಗಿ ಹಾಗೂ ಬಲಿಷ್ಠರಾಗಿ ಆ ದೇಹಗಳತ್ತ ಮರಳಿ ಹೋಗುತ್ತಿದ್ದರು. ಇದರ ಹೊರತಾಗಿ ಬೇರೆ ಯಾವುದೂ ನನಗೆ ಹೆಚ್ಚು ಸಂತೋಷಕರವಾಗಿರಲಿಲ್ಲ, ಹೆಚ್ಚು ಸುಂದರವಾಗಿರಲಿಲ್ಲ; ರಾತ್ರಿ ನಡೆಯುತ್ತಿದ್ದ ಈ ಚಟುವಟಿಕೆ ನನಗೆ ನಿಜವಾದ ಜೀವನವೆನಿಸುತ್ತಿತ್ತು, ಇದರ ಮುಂದೆ ಹಗಲಿನ

ಸಮಯದಲ್ಲಿ ನಡೆಯುತ್ತಿದ್ದ ಎಲ್ಲ ಚಟುವಟಿಕೆಗಳು ನೀರಸವಾದವುಗಳು, ವರ್ಣರಹಿತವಾದವುಗಳು, ಯಾವುದೇ ನಿಜವಾದ ಜೀವನ ಇಲ್ಲದೇ ಇರುವಂತಹಗಳು ಎಂದು ತೋರಿಬರುತ್ತಿದ್ದವು. ನಾನು ಮೇಲ್ಮಕ್ಕೇರಿ ಹೋಗು–ತ್ತಿದ್ದಾಗ, ಬಹಳಷ್ಟುಸಲ, ನನ್ನ ಎಡಬದಿಯಲ್ಲಿ ಮೌನದಿಂದ ಸ್ಥಿರವಾಗಿ ಉಳಿದು–ಕೊಳ್ಳುತ್ತಿದ್ದ ವೃದ್ಧನೊಬ್ಬ ಇರುತ್ತಿದ್ದ. ಅವನು ನನ್ನತ್ತ ದಯಾಪೂರ್ಣ ಮಮತೆಯಿಂದ ನೋಡುತ್ತಿದ್ದ ಮತ್ತು ತನ್ನ ಸಾನ್ನಿಧ್ಯದಿಂದ ನನಗೆ ಉತ್ತೇಜನ ನೀಡುತ್ತಿದ್ದ. ಕಪ್ಪು–ನೀಲಿ ವರ್ಣದ ನಿಲುವಂಗಿಯನ್ನು ಧರಿಸುತ್ತಿದ್ದ ಈ ವೃದ್ಧ ದುಃಖಿ–ಮಾನವನ ಪ್ರತಿರೂಪವಾಗಿದ್ದ ಎಂಬುದು ನನಗೆ ನಂತರ ತಿಳಿದು ಬಂದಿತು.

ಈಗ ಆ ಆಳವಾದ ಅನುಭವ, ಅನಿರ್ವಚನೀಯವಾದ ಆ ನೈಜತೆ ನನ್ನ ಮನಸ್ಸಿನಲ್ಲಿ ಇನ್ನಿತರ ವಿಚಾರಗಳಲ್ಲಿ ಪರಿವರ್ತನೆಗೊಳಗಾಗಿವೆ, ಅವುಗಳನ್ನು ಹೀಗೆ ಹೇಳಬಹುದು:

ಹಗಲು, ರಾತ್ರಿ ಸಮಯಗಳಲ್ಲಿ ಹಲವಾರು ಸಲ, ನಾನು, ಅದಕ್ಕೂ ಹೆಚ್ಚಾಗಿ ನನ್ನ ಪ್ರಜ್ಞೆ ನನ್ನ ಹೃದಯದಲ್ಲಿ ಇಡಿಯಾಗಿ ಕೇಂದ್ರೀಕೃತವಾದಂತೆ ತೋರಿಬರುತ್ತದೆ, ಆ ಹೃದಯ ಈಗ ಕೇವಲ ದೇಹದ ಒಂದು ಅಂಗವಾಗಿ ಉಳಿದಿಲ್ಲ, ಭಾವನೆಯ ಕೇಂದ್ರವೂ ಆಗಿಲ್ಲ, ಆದರೆ ಅಲ್ಲಿ ಅವೈಯಕ್ತಿಕ, ಸನಾತನ ದೈವೀ ಪ್ರೇಮವಿದೆ ಮತ್ತು ಈ ದೈವೀ ಪ್ರೇಮವಾಗಿದ್ದುಕೊಂಡು ನಾನು ಪೃಥ್ವಿಯ ಮೇಲಿನ ಪ್ರತಿಯೊಂದು ವಸ್ತು–ವಿಷಯದ ಕೇಂದ್ರದಲ್ಲಿ ಜೀವಿಸುತ್ತಿರುವ ಭಾವನೆ ತಂದುಕೊಳ್ಳುತ್ತೇನೆ ಮತ್ತು ಅದೇ ಕಾಲಕ್ಕೆ ಭವ್ಯ, ಅನಂತ ತೋಳುಗಳನ್ನು ಚಾಚುತ್ತ, ಮಿತಿರಹಿತ ಕೋಮಲತೆ–ಯೊಂದಿಗೆ ಎಲ್ಲ ಸತ್ತೆಗಳನ್ನು ಆವರಿಸುತ್ತಿರುವಂತೆ, ವಿಶ್ವಕ್ಕಿಂತ ವಿಸ್ತಾರವಾದ ನನ್ನ ಎದೆಯ ಮೇಲೆ ಅವುಗಳನ್ನು ಒಟ್ಟುಗೂಡಿಸಿಕೊಂಡು, ಗಟ್ಟಿಯಾಗಿ ಹಿಡಿದು–ಕೊಂಡು ಬೆಚ್ಚಗಿರುವಂತೆ ಒಳದೂರಿಸಿಕೊಳ್ಳುತ್ತಿರುವಂತೆ ತೋರಿಬರುತ್ತದೆ.

**ಫೆಬ್ರುವರಿ 22, 1914**

*

**ನಿನಗೆ ಸೇವೆ ಸಲ್ಲಿಸಲು ಬಯಸುವವನು**

ಯೋಗ್ಯ ರೀತಿಯಲ್ಲಿ ನಿನಗೆ ಸೇವೆ ಸಲ್ಲಿಸಲು ಬಯಸುವವನು ಯಾವುದಕ್ಕೂ ಅಂಟಿಕೊಂಡಿರಬಾರದು, ನಿನ್ನೊಡನೆ ಹೆಚ್ಚು ಪ್ರಜ್ಞಾಪೂರ್ವಕವಾಗಿ ಸಂಸರ್ಗ–



ದಲ್ಲಿರಲು ಸಾಧ್ಯವಾಗುವಂತೆ ಮಾಡುವ ಚಟುವಟಿಕೆಗಳಿಗೂ ಕೂಡ ಅಂಟಿ–ಕೊಂಡಿರಬಾರದು.

ಆದರೆ ಪರಿಸ್ಥಿತಿಗಳ ಒಟ್ಟಾರೆ ಪರಿಣಾಮದಿಂದ ಭೌತಿಕ ವಸ್ತುಗಳು ಜೀವನದಲ್ಲಿ ಭವ್ಯ ಸ್ಥಾನವನ್ನು ಇನ್ನೂ ತೆಗೆದುಕೊಳ್ಳುತ್ತಿದ್ದರೂ ಮನುಷ್ಯ ಅವುಗಳಲ್ಲಿ ಮಗ್ನವಾಗಿರದೆ ಇರುವುದನ್ನು ತಿಳಿದುಕೊಳ್ಳಬೇಕು, ತನ್ನ ಆಳಾತಿ ಆಳದಲ್ಲಿ ದೈವೀ ಪ್ರಭು, ನಿನ್ನ ಸಾನ್ನಿಧ್ಯದ ಸ್ಪಷ್ಟ ನೋಟವನ್ನು ಹೇಗೆ ಇರಿಸಿಕೊಂಡಿರಬೇಕು ಮತ್ತು ಯಾವಾಗಲೂ ಯಾವುದರಿಂದಲೂ ಕ್ಷೋಭೆಗೊಳಗಾಗದ ಆ ಪ್ರಶಾಂತ ಶಾಂತ–ಸ್ಥಿತಿಯಲ್ಲಿ ಹೇಗೆ ಜೀವಿಸಬೇಕು ಎಂಬುದನ್ನು ತಿಳಿದುಕೊಳ್ಳಬೇಕು.

ಓಹ್, ದೈವೀ ಪ್ರಭು ಎಲ್ಲೆಡೆಯಲ್ಲಿ ನಿನ್ನನ್ನು ಮಾತ್ರ ನೋಡುತ್ತ ಪ್ರತಿಯೊಂದನ್ನು ಕೈಕೊಳ್ಳುವುದು ಮತ್ತು ಹೀಗೆ ಕೈಕೊಂಡ ಕಾರ್ಯದ ಮೇಲೆ ಏರಿ ಹೋಗುವುದು, ಪೃಥ್ವಿಗೆ ನಮ್ಮನ್ನು ಕೈದಿಗಳನ್ನಾಗಿ ಮಾಡಿ ಕಟ್ಟಿ ಹಾಕುವ ಯಾವ ಸಂಕೋಲೆಗೂ ಅನುವು ಮಾಡಿಕೊಡದೆ ಇರುವುದು.

**ಫೆಬ್ರುವರಿ 25–26, 1914**

*

**ಮುಡಿಪಾಗಿರಿಸುವಿಕೆ ಪರಿಸ್ಥಿತಿಗಳ ಮೇಲೆ ಅವಲಂಬಿಸಿರುವುದಿಲ್ಲ**

ಓ ದೈವೀ ಪ್ರಭು, ನಿನಗೆ ಇಡಿಯಾಗಿ ತಮ್ಮ ಜೀವನವನ್ನು ಮುಡಿಪಾಗಿರಿಸಿ–ಕೊಂಡವರ ಅನಂತ ಸಂತೋಷದ ಭಾವನೆ ನನಗೆ ಬರುತ್ತದೆ, ಅದು ಮನುಷ್ಯನ ತನ್ನದೇ ಸತ್ತೆಯ ಸ್ಥಿತಿ ಹಾಗೂ ಅದು ಪಡೆದ ಹೆಚ್ಚುಕಡಿಮೆ ಜ್ಞಾನೋದಯ ಇವುಗಳ ಮೇಲೆ ಅವಲಂಬಿಸಿರುತ್ತದೆ, ಬಾಹ್ಯ ಪರಿಸ್ಥಿತಿಗಳ ಮೇಲಲ್ಲ. ನಿನ್ನ ನಿಯಮಕ್ಕೆ ಪರಿಪೂರ್ಣ ಮುಡಿಪಾಗಿರಿಸಿಕೊಳ್ಳುವಿಕೆ ಪರಿಸ್ಥಿತಿಗಳಲ್ಲಿ ಮಾರ್ಪಾಡು ಮಾಡದೇ ಇರುವುದು ಸಾಧ್ಯವಿಲ್ಲ, ಆದಾಗ್ಯೂ ಈ ಪರಿಸ್ಥಿತಿಗಳು ಪರಿಪೂರ್ಣ ಮುಡುಪಾಗಿರಿಸಿಕೊಳ್ಳುವುದನ್ನು ಅಭಿವ್ಯಕ್ತಗೊಳಿಸಲಾರವು. ಅದರರ್ಥ ಎಲ್ಲರಿಗೂ ಒಂದೇ ಆಗಿರುವ ಕೆಲವೊಂದು ವಿಶಿಷ್ಟ ಪರಿಸ್ಥಿತಿಗಳಲ್ಲಿ ನಿನ್ನ ನಿಯಮ ಪ್ರಕಟವಾಗುವುದಿಲ್ಲ, ಏಕೆಂದರೆ ಪ್ರತಿಯೊಬ್ಬನಿಗೆ ಈ ಪ್ರಕಟಣೆ ಅವನ ಮನೋಭಾವಕ್ಕನುಗುಣವಾಗಿ ಭಿನ್ನವಾಗಿರುತ್ತದೆ, ಎಂದರೆ ಅದು ಭೌತಿಕ ಜೀವನದಲ್ಲಿ, ಸದ್ಯದ ಕ್ಷಣದಲ್ಲಿ, ಅವನಿಗೆ ಒಪ್ಪಿಸಲಾದ ಮಣಿಹಕ್ಕೆ ಅನುಗುಣ–ವಾಗಿರುತ್ತದೆ.

ಆದರೆ ಸಂತೋಷಕರ ಶಾಂತಿ ಬದಲಾಗದೆ ಇರುವಂತಹದು ಹಾಗೂ ವಿಶ್ವಂಭರವಾದದ್ದು, ಅದು ನಿನಗೆ ಮಾತ್ರ ಮುಡುಪಾಗಿರಿಸಿಕೊಂಡ ಎಲ್ಲರ ಪ್ರಕಾಶಮಯ ಹಾಗೂ ಬದಲಾಗದ ಪ್ರಶಾಂತತೆ, ಅಂತಹ ಜನರಲ್ಲಿ ಇನ್ನು ಮುಂದೆ ಯಾವುದೇ ಬಗೆಯ ಅಂಧಕಾರ, ಅಜ್ಞಾನ, ಅಹಂಕಾರಯುಕ್ತ ಆಸಕ್ತಿ ಇಲ್ಲವೆ ದುರುದ್ದೇಶ ಇರುವುದಿಲ್ಲ.

ಓಹ್, ಎಲ್ಲರೂ ಈ ದೈವೀ ಶಾಂತಿಗೆ ಎಚ್ಚತ್ತುಕೊಳ್ಳಲಿ.

**ಫೆಬ್ರುವರಿ 27, 1914**

*

**ಮನುಷ್ಯನಲ್ಲಿಯೇ ಸ್ವತಃ ಎಲ್ಲ ಅಡೆತಡೆಗಳು ನೆಲೆಸಿರುತ್ತವೆ**

ಮನುಷ್ಯನಲ್ಲಿಯೇ ಸ್ವತಃ ಎಲ್ಲ ಅಡೆತಡೆಗಳು ನೆಲೆಸಿರುತ್ತವೆ, ಅವನಲ್ಲಿಯೇ ಸ್ವತಃ ಎಲ್ಲ ತೊಂದರೆಗಳು ಕಂಡುಬರುತ್ತವೆ, ಅವನಲ್ಲಿಯೇ ಸ್ವತಃ ಎಲ್ಲ ಅಂಧಕಾರ ಹಾಗೂ ಅಜ್ಞಾನ ಇರುತ್ತದೆ. ನಾವು ಪೃಥ್ವಿಯ ಆದ್ಯಂತ ಪ್ರಯಾಣ ಮಾಡಿದರೂ, ಯಾವುದೋ ಒಂದು ಏಕಾಂತ ಸ್ಥಳಕ್ಕೆ ಹೋಗಿ ಅಲ್ಲಿ ನಾವು ಹುದುಗಿಕೊಂಡರೂ, ನಮ್ಮ ಎಲ್ಲ ರೂಢಿಗಳನ್ನು ಮುರಿದು ಹಾಕಿದರೂ, ಅತ್ಯಂತ ವೈರಾಗ್ಯದ ಜೀವನ ನಡೆಸಿದರೂ, ನಿನ್ನ ಪರಿಪೂರ್ಣ ಪ್ರಜ್ಞೆಯಿಂದ ಭ್ರಮೆಯ ಯಾವುದೋ ಬಂಧನ ನಮ್ಮ ಪ್ರಜ್ಞೆಯನ್ನು ಹಿಂದಿಟ್ಟುಕೊಂಡರೆ, ನಿನ್ನ ದೈವೀ ಪ್ರೇಮದೊಡನಿರುವ ಸಮಗ್ರ ಸಂಸರ್ಗವನ್ನು ಯಾವುದೋ ಅಹಂಕಾರಯುಕ್ತ ಆಸಕ್ತಿ ಕಡಿದುಹಾಕಿದರೆ, ಎಲ್ಲ ಬಾಹ್ಯ ಪರಿಸ್ಥಿತಿಗಳ ಸಮ್ಮುಖದಲ್ಲಿ ನಾವು ಇನ್ನು ಮುಂದೆ ನಿನ್ನ ಸಮೀಪ ಇರಲಾರೆವು. ಯಾವುದಾದರೊಂದು ಪರಿಸ್ಥಿತಿ ಹೆಚ್ಚು ಕಡಿಮೆ ಅನುಕೂಲಕರ ಎಂದು ಪರಿಗಣಿಸಬಹುದೆ? ನನಗೆ ಅದರ ಬಗ್ಗೆ ಸಂಶಯವಿದೆ, ಪರಿಸ್ಥಿತಿಗಳ ಬಗ್ಗೆ ನಮ್ಮಲ್ಲಿರುವ ವಿಚಾರ, ಅವು ನಮಗೆ ಕಲಿಸಿಕೊಡುವ ಪಾಠಗಳಿಂದ, ನಾವು ಹೆಚ್ಚು ಕಡಿಮೆ ಲಾಭ ಪಡೆಯಲು ಶಕ್ತರಾಗುವಂತೆ ಮಾಡುವುದು.

ಓ ದೈವೀ ಪ್ರಭು, ನಾನು ನಿನ್ನಲ್ಲಿ ಮೊರೆಯಿಡುತ್ತೇನೆ! ನಾನು ಪರಿಪೂರ್ಣ–ವಾಗಿ ಪ್ರಜ್ಞಾವಂತಳಾಗುವಂತೆ ಮತ್ತು ಈ ವೈಯಕ್ತಿಕತೆಯನ್ನು ರಚಿಸಿದ್ದೆಲ್ಲದರ ಮೇಲೆ ಪ್ರಭುತ್ವ ಪಡೆಯುವಂತೆ ಅನುಗ್ರಹಿಸು, ಅದರಿಂದಾಗಿ ನನ್ನಿಂದ ನಾನು ವಿಮೋಚನೆ ಪಡೆಯುವಂತಾಗಲಿ, ಕೇವಲ ನೀನು ಈ ಅನೇಕಾನೇಕ ಅಂಶಗಳಲ್ಲಿ ಜೀವಿಸುವಂತಾಗಲಿ ಹಾಗೂ ಕಾರ್ಯ ಕೈಕೊಳ್ಳುವಂತಾಗಲಿ.



ದೈವೀ ಪ್ರೇಮದ ಮೂಲಕ, ದೈವೀ ಪ್ರೇಮಕ್ಕಾಗಿ ದೈವೀ ಪ್ರೇಮದಲ್ಲಿ ಜೀವಿಸುವುದು, ನಿನ್ನ ಅತ್ಯುಚ್ಚ ಪ್ರಕಟಣೆಯೊಂದಿಗೆ ವಿಚ್ಛೇದನಗೊಳ್ಳದ ರೀತಿಯಲ್ಲಿ ಏಕತೆಯಲ್ಲಿರುವುದು.

**ಮಾರ್ಚ್ 1, 1914**

*

**ಕೃತಜ್ಞತೆ ಹಾಗೂ ವಿಶ್ವಾಸಗಳಿರುವ ಒಂದು ಸ್ಥಿತಿ**

ಪ್ರಯಾಣ ಕೈಕೊಳ್ಳಬೇಕಾದ ದಿನ ಹತ್ತಿರ ಬರುತ್ತಿದ್ದಂತೆ ನಾನು ಒಂದು ಬಗೆಯ ಸ್ವ–ಸಂಸರ್ಗ(self-communion)ದಲ್ಲಿ ಪ್ರವೇಶಿಸುತ್ತಿದ್ದೇನೆ, ನಮ್ಮ ಸುತ್ತಲಿರುವ, ಏನೂ ಅಲ್ಲವೇನೋ ಎಂದು ತೋರಿಬರುವ ಚಿಕ್ಕಪುಟ್ಟ ಸಾವಿರಾರು ವಸ್ತುಗಳತ್ತ ಅತಿ ಪ್ರೀತಿಯ ಗಾಂಭೀರ್ಯದಿಂದ ಹೊರಳಿ ನೋಡುತ್ತೇನೆ, ಅವುಗಳೆಲ್ಲ ಹಲವಾರು ವರ್ಷಗಳ ಕಾಲ ವಿಶ್ವಾಸಾರ್ಹ ಮಿತ್ರರ ಪಾತ್ರವನ್ನು ಮೌನದಿಂದ ವಹಿಸಿವೆ; ಅವು ನಮ್ಮ ಜೀವನದ ಬಾಹ್ಯ ಭಾಗಕ್ಕೆ ಕೊಡಬಹು–ದಾದುದನ್ನೆಲ್ಲ ಕೊಡಲು ಅವುಗಳಿಗೆ ಸಾಧ್ಯವಾದದ್ದಕ್ಕಾಗಿ ನಾನು ಕೃತಜ್ಞತಾ–ಪೂರ್ವಕವಾದ ಧನ್ಯವಾದಗಳನ್ನು ಅರ್ಪಿಸುತ್ತೇನೆ, ಅವು ಇನ್ನಿತರರ ಕೈಗಳಿಗೆ ಎಷ್ಟೋ ಕಾಲದವರೆಗೆ ಸಿಗುವ ಅದೃಷ್ಟ ಅವುಗಳಿಗಿದ್ದರೆ, ಆ ಕೈಗಳು ಅವುಗಳನ್ನು ಮೃದುವಾಗಿ ಉಪಯೋಗಿಸಲಿ ಮತ್ತು ಓ ದೈವೀ ಪ್ರಭು, ಅಂಧಕಾರದ ಅಸ್ತವ್ಯಸ್ತತೆ ಇರುವ ಅಚೇತನದಿಂದ ಅವುಗಳನ್ನು ಹೊರತಂದಿರುವ ನಿನ್ನ ದೈವೀ ಪ್ರೇಮಕ್ಕೆ ಇರಬೇಕಾದ ಗೌರವವನ್ನು ತೋರಿಸಲಿ.

ನಂತರ ನಾನು ಭವಿಷ್ಯತ್ತಿನತ್ತ ಹೊರಳುತ್ತೇನೆ ಮತ್ತು ನನ್ನ ನೆಟ್ಟನೋಟ ಇನ್ನೂ ಹೆಚ್ಚು ಗಂಭೀರವಾಗುತ್ತದೆ. ಅದರಲ್ಲಿ ಏನೆಲ್ಲ ಇದೆಯೋ ಎಂಬುದು ನನಗೆ ತಿಳಿಯದು, ಅದನ್ನು ತಿಳಿದುಕೊಳ್ಳುವ ಕಾಳಜಿ ನನಗಿಲ್ಲ; ಬಾಹ್ಯ ಪರಿಸ್ಥಿತಿಗಳಿಗೆ ಯಾವ ಮಹತ್ವವೂ ಇಲ್ಲ, ಇದು ನಮಗೆ ಹೊಸ ಆಂತರಿಕ ಅವಧಿಯ ಪ್ರಾರಂಭವಾಗಲಿ ಎಂಬುದು ಮಾತ್ರ ನನ್ನ ಬಯಕೆಯಾಗಿದೆ, ಅದರಲ್ಲಿ ನಾವು ಪ್ರಾಪಂಚಿಕ ವಸ್ತು–ವಿಷಯಗಳಿಂದ ಹೆಚ್ಚು ನಿರ್ಲಿಪ್ತರಾಗಿ ನಿನ್ನ ದೈವೀ ನಿಯಮದ ಬಗ್ಗೆ ಹೆಚ್ಚು ಅರಿವುಳ್ಳವರಾಗಬಹುದು ಮತ್ತು ಹೆಚ್ಚು ಏಕನಿಷ್ಠವಾಗಿ ಅದರ ಪ್ರಕಟಣೆಗೆ ಮುಡಿಪಾಗಿರಿಸಿಕೊಳ್ಳಬಹುದು, ಆ ಅವಧಿ ಶ್ರೇಷ್ಠತರ ಪ್ರಕಾಶದ್ದಾಗಲಿ, ಪ್ರೇಮದ್ದಾಗಲಿ, ನಿನ್ನ ದೈವೀ ಉದ್ದೇಶಕ್ಕೆ ನಿವೇದಿಸಿಕೊಂಡದ್ದಾಗಲಿ.

ನಿಶ್ಚಲನೀರವತೆಯಲ್ಲಿಯ ಆರಾಧನೆಯಿಂದ ನಿನ್ನನ್ನು ಕುರಿತು ಚಿಂತನ ಮಾಡುತ್ತೇನೆ.

**ಮಾರ್ಚ್ 3, 1914**

*

**ಆಸಕ್ತಿಯಿಂದ ಹಾಗೂ ಮಮತೆಯಿಂದ ಜನ್ಮತಾಳಿದ ವೇದನೆಗೆ ಒಂದು ಚಿಕಿತ್ಸೆ**

ಅವರ ವೇದನೆಯಿಂದ ತೀಕ್ಷ್ಣ ವೇದನೆಗೊಳಗಾದ ನಾನು ನಿನ್ನತ್ತ ಹೊರಳಿದೆ, ಅದರಲ್ಲಿ ದೈವೀ ಪ್ರೇಮದ ಒಂದಿಷ್ಟನ್ನು ಒಳಸೇರಿಸಿ ವಾಸಿಮಾಡಲು ಪ್ರಯತ್ನಿಸಿದೆ, ಆ ದೈವೀ ಪ್ರೇಮ ಎಲ್ಲ ಶಾಂತಿಯ ಹಾಗೂ ಎಲ್ಲ ಸಂತೋಷದ ಮೂಲವಾಗಿದೆ. ನಾವು ವೇದನೆಯಿಂದ ತಪ್ಪಿಸಿಕೊಳ್ಳಲು ದೂರ ಓಡಿ ಹೋಗಬಾರದು, ಹಾಗೆಯೇ ಅದನ್ನು ಪ್ರೀತಿಸಿ ಪೋಷಿಸುತ್ತ ಹೋಗಬಾರದು, ಅದರ ಆಳದಲ್ಲಿಳಿದು ಸಾಕಷ್ಟು ದೂರ ಸಾಗಬೇಕು, ಅದರಿಂದಾಗಿ ಅದನ್ನು ಸಾಕಷ್ಟು ಸಾಮರ್ಥ್ಯಪೂರ್ಣವಾದ ಸನ್ನೆಕೋಲಾಗುವಂತೆ ಮಾಡಬಹುದು, ಆ ಸನ್ನೆಕೋಲು ಸನಾತನ ಪ್ರಜ್ಞೆಯ ದ್ವಾರವನ್ನು ತೆರೆದು ನಿನ್ನ ಬದಲಾಗದ ದೈವೀ ಏಕತೆಯಲ್ಲಿ ಪ್ರವೇಶ ದೊರಕಿಸಿ ಕೊಡುವುದು.

ದೇಹಗಳು ಪ್ರತ್ಯೇಕಗೊಂಡಾಗ ಅಗಲಿಕೆಯ ನೋವಿನ ತಳಮಳವನ್ನು ಉಂಟುಮಾಡುವ ಈ ಭಾವನಾತ್ಮಕ ಮತ್ತು ಭೌತಿಕ ಆಸಕ್ತಿ ಒಂದು ದೃಷ್ಟಿಕೋನ–ದಿಂದ ಬಾಲಿಶವಾದದ್ದು, ನಾವು ಬಾಹ್ಯ ರೂಪಗಳ ನಶ್ವರತೆಯನ್ನು ಮತ್ತು ನಿನ್ನ ಸಾರಭೂತ ಏಕತೆಯ ನೈಜತೆಯನ್ನು ಕುರಿತು ಚಿಂತನ ಮಾಡುವುದರಿಂದ ಬರುವ ದೃಷ್ಟಿಕೋನ ಅದಾಗಿರುತ್ತದೆ, ಆದರೆ, ಇನ್ನೊಂದೆಡೆಗೆ, ಈ ಆಸಕ್ತಿ ಈ ವೈಯಕ್ತಿಕ ಮಮತೆ ಆ ಮೂಲಭೂತ ಏಕತೆಯನ್ನು ಸಾಧ್ಯವಿದ್ದಷ್ಟು ಬಾಹ್ಯದಲ್ಲಿ ಸಿದ್ಧಿಸಿಕೊಳ್ಳಲು ಮನುಷ್ಯರು ಪ್ರಜ್ಞಾರಹಿತರಾಗಿ ಪ್ರಯತ್ನಮಾಡುವುದಾಗಿರುವುದಿಲ್ಲವೆ? ಅದರ ಬಗ್ಗೆ ಅರಿವನ್ನು ತಂದುಕೊಳ್ಳದೆಯೆ ಅವರು ಅದರತ್ತ ಚಲಿಸುತ್ತಿರುವುದಿಲ್ಲವೆ? ನಿಖರವಾಗಿ ಆ ಕಾರಣದಿಂದಾಗಿಯೇ ಪ್ರತ್ಯೇಕತೆ ತರುವ ವೇದನೆಯು ಈ ಬಾಹ್ಯ–ಪ್ರಜ್ಞೆಗೆ ಅತೀತವಾಗಿ ಹೋಗುವುದಕ್ಕೆ, ಈ ಮೇಲ್ಮೈ ಆಸಕ್ತಿಯ ಸ್ಥಾನದಲ್ಲಿ ನಿನ್ನ ಸನಾತನ ಏಕತೆಯನ್ನು ಇರಿಸುವುದಕ್ಕೆ ಅತ್ಯಂತ ಪರಿಣಾಮಕಾರಿ ಸಾಧನಗಳಲ್ಲಿ ಒಂದು ಸಾಧನವಾಗಿರುವುದಿಲ್ಲವೆ? ಇದನ್ನೇ ನಾನು ಅವರಿಗಾಗಿ ಬಯಸಿದೆ, ಇದನ್ನೇ ನಾನು ಅವರಿಗಾಗಿ ಸಂಕಲ್ಪ ಮಾಡಿದೆ, ಮತ್ತು ಆ ಕಾರಣದಿಂದ ನಿನ್ನ ವಿಜಯದ ಬಗ್ಗೆ ನಿಶ್ಚಿತತೆ ಹೊಂದಿ ಅವರ ದುಃಖವನ್ನು ನಿನ್ನ ವಶಕ್ಕೆ ಒಪ್ಪಿಸಿದೆ,



ಅದರಿಂದಾಗಿ ನೀನು ಆ ವೇದನೆಯ ಮೇಲೆ ಪ್ರಕಾಶ ಬೀರಿ ಅದನ್ನು ವಾಸಿ–ಮಾಡುವಂತಾಗುವುದು.

ಓ ದೈವೀ ಪ್ರಭು ಮಮತೆಯ ಹಾಗೂ ಕೋಮಲತೆಯ ಈ ಎಲ್ಲ ಸೌಂದರ್ಯ ವೈಭವೋಪೇತ ಜ್ಞಾನವಾಗುವಂತೆ ಅನುಗ್ರಹಿಸು.

ಪ್ರತಿಯೊಂದರಿಂದ ಅತ್ಯಂತ ಒಳ್ಳೆಯದು ಹೊರಹೊಮ್ಮುವಂತೆ ಮತ್ತು ನಿನ್ನ ಸಂತೋಷಕರ ದೈವೀ ಶಾಂತಿ ಪೃಥ್ವಿಯ ಮೇಲೆ ಆಳಿಕೆ ನಡೆಸುವಂತೆ ಅನುಗ್ರಹಿಸು.

**ಜಿನೇವಾ, ಮಾರ್ಚ್ 6, 1914**

*

**ನಿನ್ನ ನಿವಾಸ ಎಲ್ಲೆಡೆಯಲ್ಲಿದೆ**

ನಿನಗಾಗಿ ಹಾಗೂ ನಿನ್ನಲ್ಲಿ ಜೀವಿಸುವವರು ತಮ್ಮ ಸುತ್ತುಮುತ್ತಲಿರುವುದನ್ನು, ರೂಢಿಗಳನ್ನು, ಹವಾಮಾನವನ್ನು, "ಸಾಮಾಜಿಕ ಪರಿಸರವನ್ನು" ಬದಲು ಮಾಡ–ಬಹುದು, ಆದರೆ ಎಲ್ಲೆಡೆಯಲ್ಲಿ ಒಂದೇ ವಾತಾವರಣವನ್ನು ಕಂಡುಕೊಳ್ಳುತ್ತಾರೆ; ಅವರು ಆ ವಾತಾವರಣವನ್ನು ತಮ್ಮಲ್ಲಿ ಕೊಂಡೊಯ್ಯುತ್ತಾರೆ, ಅವರ ಯೋಚನೆ ಸತತ ನಿನ್ನಲ್ಲಿ ನೆಟ್ಟಿರುತ್ತದೆ. ಎಲ್ಲೆಡೆಯಲ್ಲಿ ಅವರು ನಿರಾತಂಕವಾಗಿ ಇರುವ ಭಾವನೆ ತಂದುಕೊಳ್ಳುತ್ತಾರೆ, ಏಕೆಂದರೆ ಅವರು ಎಲ್ಲೆಡೆಯಲ್ಲಿ ನಿನ್ನ ನಿವಾಸದಲ್ಲಿರುತ್ತಾರೆ. ಇನ್ನು ಮುಂದೆ ಅವರು ವಸ್ತು–ವಿಷಯಗಳ ಮತ್ತು ದೇಶಗಳ ಹೊಸತನ, ಅನಿರೀಕ್ಷಿತವಾಗಿರುವಿಕೆ, ಚಿತ್ರವತ್ತಾಗಿರುವಿಕೆ ಇಂತಹವುಗಳನ್ನು ಕಂಡು ಆಶ್ಚರ್ಯ–ಪಡುವುದಿಲ್ಲ; ನಿನ್ನ ದೈವೀ ಸಾನ್ನಿಧ್ಯ ಎಲ್ಲದರಲ್ಲಿ ಪ್ರಕಟವಾಗಿರುವುದನ್ನು ಅವರು ನೋಡುತ್ತಾರೆ, ಅವರನ್ನು ಅಗಲಿ ಹೋಗದ ನಿನ್ನ ಬದಲಾಗದ ಭವ್ಯತೆ ಕನಿಷ್ಠ–ಮಟ್ಟದ ಉಸುಕಿನ ಕಣದಲ್ಲೂ ತೋರಿಬರುತ್ತದೆ. ...

ಓ ದೈವೀ ಪ್ರಭು, ನನ್ನ ಮಧುರ ಒಡೆಯನೆ, ಶಾಂತಿಯ ಅದ್ಭುತ ನಿವಾಸವೆಂದು ತೋರಿಬರುವ ಈ ನಾವೆಯಲ್ಲಿ ಈ ಎಲ್ಲವನ್ನು ನಾನು ಸತತ ಅನುಭವಕ್ಕೆ ತಂದುಕೊಳ್ಳುತ್ತಿದ್ದೇನೆ, ಈ ನಾವೆ ಅಚೇತನದ ನಿಷ್ಕ್ರಿಯತೆಯ ತರಂಗಗಳ ಮೇಲೆ ನಿನಗೆ ಗೌರವ ಸೂಚಿಸುತ್ತ ಯಾನ ಮಾಡುತ್ತಿರುವ ದೇಗುಲದ ಹಾಗಿದೆ, ಆ ನಿಷ್ಕ್ರಿಯತೆಯನ್ನು ನಾವು ಜಯಿಸಬೇಕು ಮತ್ತು ಅದು ನಿನ್ನ ದೈವೀ ಸಾನ್ನಿಧ್ಯದ ಪ್ರಜ್ಞೆಗೆ ಎಚ್ಚತ್ತುಕೊಳ್ಳುವಂತೆ ಮಾಡಬೇಕು.

ಓ ಅನಿರ್ವಚನೀಯನಾದ ಸನಾತನನಾದವನೆ, ನಾನು ನಿನ್ನನ್ನು ಅರಿತು–ಕೊಂಡ ದಿನ ಸ್ವರ್ಗಸುಖ ತಂದುಕೊಡುವಂತಹದಾಗಿತ್ತು.

ಪೃಥ್ವಿ, ಕೊನೆಗೆ ಎಚ್ಚತ್ತುಕೊಂಡು, ನಿನ್ನನ್ನು ಅರಿತುಕೊಂಡು ನಿನಗಾಗಿ ಮಾತ್ರ ಇರುವಂತಹ ದಿನ ಎಲ್ಲ ದಿನಗಳಲ್ಲಿ ಸ್ವರ್ಗಸುಖ ತಂದುಕೊಡುವ ದಿನವಾಗುವುದು.

**ಮಾರ್ಚ್ 9, 1914**

*

**ರಾತ್ರಿಯ ನಿಶ್ಚಲ ನೀರವತೆಯಲ್ಲಿ ಒಂದು ಪ್ರಾರ್ಥನೆ**

ರಾತ್ರಿಯ ನಿಶ್ಚಲ ನೀರವತೆಯಲ್ಲಿ ನಿನ್ನ ದೈವೀ ಶಾಂತಿ ಎಲ್ಲ ವಸ್ತು–ವಿಷಯಗಳ ಮೇಲೆ ಆಳಿಕೆ ನಡೆಸುತ್ತಿತ್ತು, ನನ್ನ ಹೃದಯದ ನಿಶ್ಚಲ ನೀರವತೆಯಲ್ಲಿ ನಿನ್ನ ದೈವೀ ಶಾಂತಿ ಯಾವಾಗಲೂ ಆಳಿಕೆ ನಡೆಸುತ್ತದೆ ಮತ್ತು ಇವೆರಡೂ ಶಾಂತಿ ಸ್ಥಿತಿಗಳು ಒಟ್ಟುಗೂಡಿದಾಗ ನಿನ್ನ ದೈವೀ ಶಾಂತಿ ಎಷ್ಟೊಂದು ಸಾಮರ್ಥ್ಯಪೂರ್ಣ–ವಾಗಿರುತ್ತದೆ ಎಂದರೆ ಯಾವುದೇ ಬಗೆಯ ಕ್ಷೋಭೆ ಅದನ್ನು ಪ್ರತಿರೋಧಿಸ–ಲಾರದು. ಆಗ ನಮ್ಮ ಯಾನವನ್ನು ಸುರಕ್ಷಿತವಾಗಿರಿಸಲು ಜಾಗರೂಕರಾಗಿ ಕಾಯುತ್ತಿರುವ ಎಲ್ಲರನ್ನೂ ಕುರಿತು ಯೋಚಿಸಿದೆ, ಮತ್ತು ನಾನು, ಕೃತಜ್ಞತೆಯ ಭಾವದಲ್ಲಿ, ನಿನ್ನ ದೈವೀ ಶಾಂತಿ ಪುಟಿದೆದ್ದು ಬಂದು ಅವರ ಹೃದಯಗಳಲ್ಲಿ ವಾಸಿಸಲಿ ಎಂದು ಬಯಸಿದ್ದೆ. ಆ ನಂತರ ದೃಢ ನಂಬಿಕೆಯಿಂದ, ಕಾಳಜಿಯಿಂದ ಮುಕ್ತರಾಗಿ ಅಚೇತನದ ನಿದ್ರೆಯಲ್ಲಿ ತೊಡಗಿಕೊಂಡವರು ಹಾಗೂ ಎಚ್ಚತ್ತುಕೊಂಡ ನಂತರ ತಮ್ಮ ದುಃಸ್ಥಿತಿಗಳಿಗಾಗಿ ತವಕಪಟ್ಟುಕೊಳ್ಳುವವರು ಗುಪ್ತ ವೇದನೆಗಳಿಗಾಗಿ ಮರುಕ ಪಟ್ಟುಕೊಳ್ಳುವವರು ಇಂತಹರ ಹೃದಯಗಳಲ್ಲಿ ನಿನ್ನ ದೈವೀ ಶಾಂತಿಯ ಅಲ್ಪ ಮಾತ್ರವಾದರೂ ಜೀವಿಸಲಿ ಮತ್ತು ಅವರಲ್ಲಿ ಆಧ್ಯಾತ್ಮಿಕ ಜೀವನ ಎಚ್ಚತ್ತುಕೊಳ್ಳುವಂತಾಗಲಿ, ಅಜ್ಞಾನವನ್ನು ಹೊಡೆದೋಡಿಸುವ ಪ್ರಕಾಶ ಬೆಳಗಲಿ ಎಂದು ನಾನು ಬಯಸಿದ್ದೆ. ನಂತರ ಈ ವಿಶಾಲ ಸಮುದ್ರದಲ್ಲಿ ಗೋಚರವಾಗಿ, ಅಗೋಚರವಾಗಿ ಜೀವಿಸುವವರೆಲ್ಲರನ್ನೂ ಕುರಿತು ನಾನು ಯೋಚಿಸಿದೆ ಮತ್ತು ಅವರ ಮೇಲೆ ನಿನ್ನ ದೈವೀ ಶಾಂತಿ ಪಸರಿಸಲಿ ಎಂದು ಸಂಕಲ್ಪ ಮಾಡಿದೆ. ನಂತರ ನಾವು ಬಹಳ ದೂರದಲ್ಲಿ ಹಿಂದೆ ಬಿಟ್ಟು ಬಂದ ಎಲ್ಲರನ್ನು ಕುರಿತು ಯೋಚಿಸಿದೆ ಅವರ ಮಮತೆ ನಮ್ಮೊಂದಿಗೆ ಸಾಗಿ ಹೋಗುತ್ತಿದೆ, ಮತ್ತು ಬಹಳ ಕೋಮಲತೆ–ಯಿಂದ ಅವರಿಗಾಗಿ ನಿನ್ನ ದೈವೀ ಪ್ರಜ್ಞೆಯನ್ನು ಮತ್ತು ತಾಳಿಕೊಳ್ಳುವ ದೈವೀ



ಶಾಂತಿಯನ್ನು ಬಯಸಿದೆ, ಅದನ್ನು ಅವರು ಸ್ವೀಕರಿಸುವಷ್ಟರ ಮಟ್ಟಿಗೆ ಅದರ ವೈಶಾಲ್ಯವಿರುತ್ತದೆ, ನಂತರ ನಾವು ಯಾರ ಬಳಿ ಹೋಗುತ್ತಿದ್ದೆವೋ ಅಂತಹರನ್ನು ಕುರಿತು ಯೋಚಿಸಿದೆ, ಅಂತಹರಲ್ಲಿ ಬಾಲಿಶ ಪೂರ್ವಮಗ್ನತೆಗಳಿಂದ ತೊಂದರೆಗೀಡಾದವರು, ಅಜ್ಞಾನದಲ್ಲಿ ಹಾಗೂ ಅಹಂಕಾರಯುಕ್ತರಾಗಿ, ಆಸಕ್ತಿಯ ಕ್ಷುಲ್ಲಕ ಪೈಪೋಟಿಗಾಗಿ ಹೋರಾಡುವವರಿದ್ದರು ಮತ್ತು ಉತ್ಸಾಹದಿಂದ, ಶ್ರೇಷ್ಠ ಅಭೀಪ್ಸೆಯಲ್ಲಿ ಅವರಿಗಾಗಿ ನಿನ್ನ ದೈವೀ ಶಾಂತಿಯ ಪೂರ್ಣ ಪ್ರಕಾಶವನ್ನು ಕೇಳಿದೆ. ನಂತರ ನಮಗೆ ಪರಿಚಿತರಾದವರನ್ನು, ಅಪರಿಚಿತರಾದವರನ್ನು ಕುರಿತು, ರೂಪಗೊಳ್ಳುತ್ತಿರುವ ಎಲ್ಲ ಜೀವನವನ್ನು, ಅದರ ರೂಪವನ್ನು ಬದಲು ಮಾಡಿದ ಎಲ್ಲವನ್ನು, ಇನ್ನೂ ರೂಪತಾಳಿರದೆ ಇದ್ದುದೆಲ್ಲವನ್ನು ಕುರಿತು ಯೋಚಿಸಿದೆ ಮತ್ತು ಇವೆಲ್ಲವುಗಳಿಗಾಗಿ ಹಾಗೆಯೇ ನಾನು ಯೋಚಿಸಲು ಸಾಧ್ಯವಿಲ್ಲದ ಸಂಗತಿ–ಗಳಿಗಾಗಿ, ನನ್ನ ನೆನಪಿಗೆ ಬರುತ್ತಿರುವ ಮತ್ತು ನಾನು ಮರೆತುಬಿಟ್ಟ ಎಲ್ಲವುಗಳಿಗಾಗಿ, ಆಳವಾದ ಚಿಂತನದಲ್ಲಿ ಮತ್ತು ಮೂಕ ಆರಾಧನಾ ಭಾವದಲ್ಲಿ ನಿನ್ನ ದೈವೀ ಶಾಂತಿಗಾಗಿ ಮೊರೆಯಿಟ್ಟೆ. ...

**ಮಾರ್ಚ್ 10, 1914**

*

**ಬಾಹ್ಯ ಪರಿಸ್ಥಿತಿಗಳು ಎಷ್ಟರ ಮಟ್ಟಿಗೆ ಮಹತ್ವದವಾಗಿರುತ್ತವೆ**

ಓ ದೈವೀ ಪ್ರಭು, ನನ್ನ ಅಭೀಪ್ಸೆ ಕೇವಲ ನಿನ್ನನ್ನು ಅರಿತುಕೊಳ್ಳುವುದಕ್ಕಾಗಿ ಹಾಗೂ ನಿನಗೆ ಹೆಚ್ಚು ಒಳ್ಳೆಯ ಸೇವೆ ಸಲ್ಲಿಸುವುದಕ್ಕಾಗಿ ಇದೆ, ಬಾಹ್ಯ ವಿಷಯಗಳು ಎಷ್ಟರಮಟ್ಟಿಗೆ ಮಹತ್ವದವಾಗಿರುತ್ತವೆ? ಪ್ರತಿ ದಿನ ಅವು ಹೆಚ್ಚು ವ್ಯರ್ಥ–ವಾದವುಗಳಾಗಿ, ಭ್ರಮಾತ್ಮಕವಾದವುಗಳಾಗಿ ಇರುವ ಹಾಗೆ ಕಂಡುಬರುತ್ತವೆ ಮತ್ತು ನಾನು ಬಾಹ್ಯ ಜೀವನದಲ್ಲಿ ಏನು ಸಂಭವಿಸಬಹುದು ಎಂಬುದನ್ನು ಕುರಿತು ಅತಿ ಕಡಿಮೆ ಆಸಕ್ತಿ ಹೊಂದಿರುತ್ತೇನೆ, ಆದರೆ ನನಗೆ ಅತ್ಯಂತ ಮಹತ್ವದ್ದೆನಿಸುವ ಒಂದು ವಿಷಯ ಕುರಿತು ಗಾಢ ಆಸಕ್ತಿ ಹೊಂದಿರುತ್ತೇನೆ: ದೈವೀ ಪ್ರಭು, ಅದು ನಿನ್ನನ್ನು ಹೆಚ್ಚು ಹೆಚ್ಚಾಗಿ ತಿಳಿದುಕೊಳ್ಳುವುದು ಹಾಗೂ ನಿನಗೆ ಅತ್ಯಂತ ಒಳ್ಳೆಯ ರೀತಿಯಲ್ಲಿ ಸೇವೆ ಸಲ್ಲಿಸುವುದಾಗಿದೆ. ಎಲ್ಲ ಬಾಹ್ಯ ಘಟನೆಗಳು ಈ ಗುರಿಯ ಮೇಲೆ ಮಾತ್ರ ಒಂದೆಡೆ ಸೇರಬೇಕು ಮತ್ತು ಅದಕ್ಕಾಗಿ ಎಲ್ಲವೂ ಅವುಗಳತ್ತ ನಾವು ಇಟ್ಟುಕೊಂ–ಡಿರುವ ಮನೋಭಾವದ ಮೇಲೆ ಅವಲಂಬಿಸಿರುತ್ತದೆ. ಎಲ್ಲ ವಸ್ತು–ವಿಷಯಗಳಲ್ಲಿ

ಸತತ ನಿನ್ನನ್ನು ಅರಸುವುದು, ಪ್ರತಿಯೊಂದು ಪರಿಸ್ಥಿತಿಯಲ್ಲಿ ನಿನ್ನನ್ನು ಎಂದೆಂದಿಗಿಂತಲೂ ಹೆಚ್ಚು ಹೆಚ್ಚಾಗಿ ಪ್ರಕಟಿಸಲು ಬಯಸುವುದು ಇಂತಹ ಮನೋಭಾವದಲ್ಲಿ ಪರಮೋಚ್ಚ ದೈವೀ ಶಾಂತಿ, ಪರಿಪೂರ್ಣ ಪ್ರಶಾಂತತೆ, ನಿಜವಾದ ತೃಪ್ತಿ ಇರುತ್ತವೆ. ಅದರಲ್ಲಿ ಜೀವನ ಅರಳುತ್ತದೆ, ವಿಸ್ತಾರಗೊಳ್ಳುತ್ತದೆ, ಎಷ್ಟೊಂದು ಮಹೋನ್ನತವಾಗಿ, ಎಷ್ಟೊಂದು ಘನ ಗಾಂಭೀರ್ಯವುಳ್ಳ ತರಂಗ–ಗಳಲ್ಲಿ ವರ್ಧಿಸುತ್ತದೆಂದರೆ ಯಾವ ಬಿರುಗಾಳಿಯೂ ಇನ್ನು ಮುಂದೆ ಅದನ್ನು ಕ್ಷೋಭೆಗೊಳಪಡಿಸಲಾರದು.

ಓ ದೈವೀ ಪ್ರಭು, ನೀನು ನಮಗೆ ರಕ್ಷಣೋಪಾಯ ಆದವನು, ನಮಗೆ ನೀನು ಮಾತ್ರ ಸಂತೋಷದಾಯಕನು, ದೇದೀಪ್ಯಮಾನ ಪ್ರಕಾಶವಾದವನು, ನಮ್ಮ ಪರಿಶುದ್ಧ ಪ್ರೇಮವಾದ ನೀನು, ನಮಗೆ ಭರವಸೆ ಮತ್ತು ಬಲ ನೀಡುವವನು ಆಗಿರುವಿ. ನೀನೇ ನಮ್ಮ ಜೀವನ, ನಮ್ಮ ಸತ್ತೆಯ ನೈಜತೆ!

ಪೂಜ್ಯಭಾವನೆ ಹಾಗೂ ಸಂತೋಷದಿಂದ ಕೂಡಿದ ಆರಾಧನೆಯ ಭಾವದಲ್ಲಿ ನಾನು ನಿನಗೆ ಬಾಗಿ ನಮಿಸುವೆ.

**ಮಾರ್ಚ್ 12, 1914**

*

**ಭೌತಿಕ ಪರಿಸ್ಥಿತಿಗಳು ಸ್ವಲ್ಪ ಕಠಿಣವಾದಾಗ**

ಭೌತಿಕ ಪರಿಸ್ಥಿತಿಗಳು ಸ್ವಲ್ಪ ಕಠಿಣವಾದಾಗ ಮತ್ತು ಅದರೊಂದಿಗೆ ಅಸೌಖ್ಯ ಅನುಸರಿಸಿದಾಗ, ದೈವೀ ಪ್ರಭು, ಜೀವನ–ಮರಣ, ಆರೋಗ್ಯ–ಅನಾರೋಗ್ಯ ಇಂತಹವುಗಳಿಗಾಗಿ ಮನುಷ್ಯ ಕಾಳಜಿ ಮಾಡದೆ ನಿನ್ನ ದೈವೀ ಸಂಕಲ್ಪಕ್ಕೆ ಹೇಗೆ ಶರಣಾಗತನಾಗಬೇಕೆಂಬುದನ್ನು ಅರಿತುಕೊಂಡಿದ್ದರೆ, ಅವನ ಸಮಗ್ರ ಸತ್ತೆ ಕೂಡಲೆ ಪ್ರೇಮ ಹಾಗೂ ಜೀವನ ಕುರಿತು ಇರುವ ನಿನ್ನ ನಿಯಮದೊಂದಿಗೆ ಸಾಮರಸ್ಯ–ದಲ್ಲಿ ಪ್ರವೇಶ ಮಾಡುತ್ತದೆ ಮತ್ತು ಎಲ್ಲ ಭೌತಿಕ ಅಸ್ವಸ್ಥತೆ ನಿಂತುಹೋಗುತ್ತದೆ, ಅದರ ಸ್ಥಾನದಲ್ಲಿ ಸ್ಥಿರವಾದ ಆಳವಾದ ಹಾಗೂ ಶಾಂತಿಯಿಂದ ಕೂಡಿದ ಆರೋಗ್ಯದಿಂದ ಇರುವ ಸ್ಥಿತಿ ಬರುತ್ತದೆ.

ಹೆಚ್ಚಿನ ಶಾರೀರಿಕ ಸಹನೆ ಅವಶ್ಯವಾಗಿರುವ ಚಟುವಟಿಕೆಯಲ್ಲಿ ಮನುಷ್ಯ ತೊಡಗಿಕೊಂಡಾಗ, ಅವನಿಗೆ ಬಹಳ ದಣಿವನ್ನು ಉಂಟು ಮಾಡುವ ವಿಷಯ–ವೆಂದರೆ, ಅವನಿಗೆ ಎದುರಾಗಬಹುದಾದ ತೊಂದರೆಗಳನ್ನು ಪೂರ್ವ–ಭಾವಿಯಾಗಿ ನಿರೀಕ್ಷಿಸುವುದಾಗಿದೆ ಎಂಬುದನ್ನು ನಾನು ಗಮನಿಸಿದ್ದೇನೆ. ಪ್ರತಿಕ್ಷಣ ಸದ್ಯದ ಸಮಯದಲ್ಲಿ ಎದುರಾಗುತ್ತಿರುವ ತೊಂದರೆಯನ್ನಷ್ಟೇ ನೋಡುವುದು ಹೆಚ್ಚು ಜಾಣತನದ ವಿಷಯವಾಗುತ್ತದೆ, ಈ ರೀತಿಯಲ್ಲಿ ಪ್ರಯತ್ನ ಕೈಕೊಳ್ಳುವುದು ಹೆಚ್ಚು ಸುಲಭವಾಗುತ್ತದೆ, ಏಕೆಂದರೆ ಅದು, ಯಾವಾಗಲೂ, ಒಟ್ಟು ಬಲ ಹಾಗೂ ಮನುಷ್ಯನ ಅಧೀನದಲ್ಲಿರುವ ಪ್ರತಿರೋಧ ಇವುಗಳ ಪ್ರಮಾಣಕ್ಕನುಸಾರವಾಗಿ ಇರುತ್ತದೆ. ದೇಹ ಅದ್ಭುತವಾದ ಉಪಕರಣ, ನಮ್ಮ ಮನಸ್ಸು ಅದನ್ನು ಸರಿಯಾಗಿ ಹೇಗೆ ಉಪಯೋಗಿಸಬೇಕು ಎಂಬುದನ್ನು ತಿಳಿದಿರುವುದಿಲ್ಲ, ಅದರ ನಮ್ಯತೆ–ಯನ್ನು, ಸುಲಭವಾಗಿ ಪ್ರಭಾವಕ್ಕೊಳಗಾಗುವಿಕೆ (plasticity)ಯನ್ನು ಪೋಷಿಸಿ–ಕೊಂಡು ಬರುವುದರ ಬದಲಾಗಿ, ಒಂದು ಬಗೆಯ ಸ್ಥಾಯಿತ್ವವನ್ನು ಅದರಲ್ಲಿ ತರುತ್ತದೆ, ಆ ಸ್ಥಾಯಿತ್ವ ಪೂರ್ವಭಾವಿಯಾಗಿ ಕಲ್ಪಿಸಿಕೊಂಡ ವಿಚಾರಗಳಿಂದ ಮತ್ತು ಅನನುಕೂಲಕರ ಸೂಚನೆಗಳಿಂದ ಬರುತ್ತದೆ.

ಆದರೆ, ಓ ದೈವೀ ಪ್ರಭು, ನಿನ್ನೊಡನೆ ಏಕತೆ ಪಡೆಯುವುದು, ನಿನ್ನಲ್ಲಿ ವಿಶ್ವಾಸವಿರಿಸುವುದು, ನಿನ್ನಲ್ಲಿ ವಾಸಿಸುವುದು, ನೀನೇ ಆಗಿಬಿಡುವುದು ಪರಮೋಚ್ಚ ವಿಜ್ಞಾನವಾಗಿರುತ್ತದೆ ಮತ್ತು ನಂತರ ನಿನ್ನ ಸರ್ವಸಾಮರ್ಥ್ಯವನ್ನು ಪ್ರಕಟಿಸುವ ಮನುಷ್ಯನಿಗೆ ಯಾವುದೂ, ಇನ್ನು ಮುಂದೆ, ಅಸಾಧ್ಯವಾಗಿರುವುದಿಲ್ಲ.

**ಮಾರ್ಚ್ 17, 1914**

*

**ಸ್ವ–ಇಚ್ಛೆಯುಳ್ಳ ಆಶಾವಾದಿಯಾಗಿರಿ**

ದೈವೀ ಪ್ರಭು, ನಿನ್ನ ದೈವೀ ಪ್ರಜ್ಞೆಯ ಬಗ್ಗೆ ಸತತ ಅರಿವುಳ್ಳವರಾಗಿರುವುದು ಆದರ್ಶ ಸ್ಥಿತಿ ಎಂದು ನಾನು ನೋಡುತ್ತಿದ್ದೇನೆ, ಪ್ರತಿಕ್ಷಣ, ಸ್ವಯಂಪ್ರೇರಿತನಾಗಿ, ಚಿಂತನ ಮಾಡುವ ಆವಶ್ಯಕತೆ ಇಲ್ಲದೆ, ನಿನ್ನ ನಿಯಮವನ್ನು ಅತ್ಯಂತ ಒಳ್ಳೆಯ ರೀತಿಯಲ್ಲಿ ಅಭಿವ್ಯಕ್ತಗೊಳಿಸಲು ಏನನ್ನು ಕೈಕೊಳ್ಳಬೇಕು ಎಂಬುದನ್ನು ಮನುಷ್ಯ ತಿಳಿದುಕೊಳ್ಳುತ್ತಾನೆ.

ಪೃಥ್ವಿಯ ಮೇಲಿನ ಪ್ರತಿಯೊಂದು ಕ್ರಿಯೆಗೆ ಒಳ್ಳೆಯ ಬದಿ ಹಾಗೂ ಒಳ್ಳೆಯದಲ್ಲದರ ಬದಿ ಇದ್ದೇ ಇರುತ್ತವೆ. ದೈವೀ ಪ್ರೇಮದ ನಿಯಮವನ್ನು ಅತ್ಯಂತ

ಒಳ್ಳೆಯ ರೀತಿಯಲ್ಲಿ ಅಭಿವ್ಯಕ್ತಪಡಿಸುವ ಕ್ರಿಯೆಗಳೂ ತಮ್ಮೊಡನೆ ಅಸ್ತವ್ಯಸ್ತವಾದ ಹಾಗೂ ಇಂದಿನ ಜಗತ್ತಿನಲ್ಲಿ ಅಂತರ್ನಿಹಿತವಾಗಿರುವ ಅಂಧಕಾರದ ಏನೋ ಒಂದನ್ನು ಕೊಂಡೊಯ್ಯುತ್ತವೆ. ನಿರಾಶಾವಾದಿಗಳೆಂದು ಕರೆಯಲಾದ ಕೆಲವು ಜನರು, ಬಹುಮಟ್ಟಿಗೆ ಪ್ರತ್ಯೇಕವಾಗಿ, ಪ್ರತಿಯೊಂದರ ಅಂಧಕಾರದ ಬದಿಯನ್ನು ಗ್ರಹಿಸುತ್ತಾರೆ. ಇನ್ನೊಂದೆಡೆಗೆ ಆಶಾವಾದಿಗಳು ಸೌಂದರ್ಯ ಹಾಗೂ ಸಾಮರಸ್ಯ ಇರುವ ಬದಿಯನ್ನು ನೋಡುತ್ತಾರೆ. ಬುದ್ಧಿಪೂರ್ವಕವಲ್ಲದ ರೀತಿಯಲ್ಲಿ ಆಶಾವಾದಿಯಾಗುವುದು ಮೂರ್ಖತನದ್ದು ಹಾಗೂ ಅಜ್ಞಾನದದ್ದು ಆಗಿದ್ದರೆ, ಸ್ವ–ಇಚ್ಛೆಯಿಂದ ಆಶಾವಾದಿಯಾಗುವುದು ಸಂತೋಷಕರ ವಿಜಯ ಸಾಧಿಸಿದಂ–ತಲ್ಲವೆ? ನಿರಾಶಾವಾದಿಗಳ ದೃಷ್ಟಿಯಲ್ಲಿ ಮನುಷ್ಯ ಕೈಕೊಂಡದ್ದು ಏನೇ ಆಗಿರಲಿ, ಅದು, ಯಾವಾಗಲೂ, ಕೆಟ್ಟದಾದದ್ದು, ಅಜ್ಞಾನದ್ದು ಇಲ್ಲವೆ ಅಹಂಕಾರ–ಯುಕ್ತವಾದದ್ದು ಆಗಿರುತ್ತದೆ. ಅಂತಹ ಜನರನ್ನು ಸಮಾಧಾನಗೊಳಿಸುವುದು ಹೇಗೆ? ಅದು ಅಸಾಧ್ಯವಾದ ಕಾರ್ಯ.

ಆಶ್ರಯ ಒದಗಿಸುವ ಒಂದೇ ಒಂದು ಮಾರ್ಗವಿದೆ: ಮನುಷ್ಯ ಕಲ್ಪಿಸಿಕೊಳ್ಳ–ಬಹುದಾದ ಅತ್ಯುಚ್ಚ ಹಾಗೂ ಅತ್ಯಂತ ಪರಿಶುದ್ಧವಾದ ಪ್ರಕಾಶದೊಂದಿಗೆ ಸಾಧ್ಯವಿದ್ದಷ್ಟು ಏಕತೆ ಪಡೆಯಬೇಕು, ಅವನು ಸಾಧ್ಯವಿದ್ದಷ್ಟು ಸಂಪೂರ್ಣವಾಗಿ ತನ್ನ ಪ್ರಜ್ಞೆಯನ್ನು ಪರಿಪೂರ್ಣ ದೈವೀ ಪ್ರಜ್ಞೆಯೊಂದಿಗೆ ಗುರುತಿಸಿಕೊಳ್ಳಬೇಕು, ಎಲ್ಲ ಸ್ಫೂರ್ತಿಯನ್ನು ಆ ದೈವೀ ಪ್ರಜ್ಞೆಯಿಂದ ಮಾತ್ರ ಸ್ವೀಕರಿಸಲು ಹೆಣಗಬೇಕು, ಅದರಿಂದಾಗಿ ಪೃಥ್ವಿಯ ಮೇಲೆ ಅದರ ಪ್ರಕಟಣೆಯನ್ನು ಸಾಧ್ಯವಿದ್ದಷ್ಟು ಒಳ್ಳೆಯ ರೀತಿಯಲ್ಲಿ ಪೋಷಿಸಿಕೊಂಡು ಬರುವಂತಾಗುವುದು ಮತ್ತು ಅದರ ಸಾಮರ್ಥ್ಯ–ದಲ್ಲಿ ವಿಶ್ವಾಸವಿರಿಸಿ ಎಲ್ಲ ಘಟನೆಗಳನ್ನು ಪ್ರಶಾಂತತೆಯಿಂದ ಪರಿಗಣಿಸುವಂತಾ–ಗುವುದು.

ಸದ್ಯದ ಪ್ರಕಟಣೆಯಲ್ಲಿ ಎಲ್ಲವೂ ಅವಶ್ಯವಾಗಿ ಮಿಶ್ರಣಕ್ಕೊಳಗಾಗಿರುವುದರಿಂದ ಮನುಷ್ಯ ಕೈಕೊಳ್ಳಬಹುದಾದ ಅತ್ಯಂತ ಜಾಣತನದ ವಿಷಯವೆಂದರೆ, ಎಂದೆಂದಿಗೂ ಉಚ್ಚತರವಾಗಿರುವ ಪ್ರಕಾಶದತ್ತ ಸಾಗಲು ಹೆಣಗುತ್ತ ತನಗೆ ಸಾಧ್ಯ–ವಿದ್ದಷ್ಟು ಒಳ್ಳೆಯದನ್ನು ಕೈಕೊಳ್ಳುವುದಾಗಿದೆ ಮತ್ತು ಸದ್ಯದ ಕ್ಷಣದಲ್ಲಿ ಪರಿಪೂರ್ಣ ಪರಿಪೂರ್ಣತೆಯನ್ನು ಸಿದ್ಧಿಸಿಕೊಳ್ಳುವುದು ಸಾಧ್ಯವಿಲ್ಲ ಎಂಬ ವಾಸ್ತವತೆಯನ್ನು ಒಪ್ಪಿಕೊಳ್ಳುವುದಾಗಿದೆ.



ಆದಾಗ್ಯೂ ಅದೆಷ್ಟು ಉತ್ಸಾಹದಿಂದ ನಾವು ತಲುಪಲಾಗದ ಪರಿಪೂರ್ಣತೆ–ಗಾಗಿ ಯಾವಾಗಲೂ, ಅಭೀಪ್ಸೆಪಡುತ್ತಿರಬೇಕು!

**ಮಾರ್ಚ್ 23, 1914** **– ಶ್ರೀಮಾತೆ**

*

**ಮಾರ್ಚ್ 29, 1914**

**ನಾವು ಅರಿತುಕೊಳ್ಳಬೇಕಾದ, ಅರ್ಥಮಾಡಿಕೊಳ್ಳಬೇಕಾದ ಹಾಗೂ ಸಿದ್ಧಿಸಿಕೊಳ್ಳಬೇಕಾದ ದೈವೀ ಪ್ರಭು ನೀನು, ನಮಗೆ ಮಾರ್ಗದರ್ಶನ ಮಾಡುವ, ಪ್ರಕಾಶ ನೀಡುವ, ನಾವು ಚಲಿಸುವಂತೆ ಮಾಡುವ ನಮಗೆ ಸ್ಫೂರ್ತಿ ನೀಡುವ ನೀನು, ಈ ದುರ್ಬಲ ಆತ್ಮಗಳು ಬಲವುಳ್ಳವುಗಳು ಆಗುವಂತೆ, ಭಯಭೀತರಾದವರು ಪುನರಾಶ್ವಾಸನೆ ಪಡೆಯುವಂತೆ ಅನುಗ್ರಹಿಸು. ನಮ್ಮ ಇಡೀ ಅದೃಷ್ಟದ ಜವಾಬ್ದಾರಿಯನ್ನು ನಿನಗೆ ವಹಿಸಿಕೊಡುವ ರೀತಿಯಲ್ಲಿ ಅವರ ಜವಾಬ್ದಾರಿಯನ್ನೂ ನಿನಗೆ ವಹಿಸಿಕೊಡುತ್ತಿದ್ದೇನೆ.**

**CWM, 1/112** **– ಶ್ರೀಮಾತೆ**

*

## ಮಹತ್ವಪೂರ್ಣವಾದ ಭೇಟಿ

**ನನ್ನ ಮಣಿಹ (mission) ಕುರಿತು ನಾನು ಪ್ರಜ್ಞಾವಂತಳಾದುದು ಹೇಗೆ?**

ನನ್ನ ಮಣಿಹದ ಬಗೆಗಿನ ಜ್ಞಾನ ಎಂದು ಆಯಿತು, ಎಂದು ಬಂದಿತು ಎಂದು ಹೇಳುವುದು ಕಠಿಣವಾದದ್ದು. ಅದರೊಡನೆ ನಾನು ಜನ್ಮ ತಾಳಿದೆ ಎನ್ನುವ ಹಾಗಿದೆ ಮತ್ತು ಮನಸ್ಸು ಹಾಗೂ ಮಿದುಳಿನ ಬೆಳವಣಿಗೆಯೊಂದಿಗೆ ಈ ಪ್ರಜ್ಞೆಯ ಸಂಪೂರ್ಣತೆ ಮತ್ತು ನಿಖರತೆ ಕೂಡ ಬೆಳೆದವು. ನನ್ನ ಹನ್ನೊಂದು ಹಾಗೂ ಹದಿಮೂರನೆಯ ವಯಸ್ಸಿನ ನಡುವೆ ಚೈತ್ಯಾತ್ಮಿಕ ಹಾಗೂ ಆಧ್ಯಾತ್ಮಿಕ ಅನುಭವಗಳ ಸರಣಿ ನನಗೆ ಭಗವಂತನ ಅಸ್ತಿತ್ವವನ್ನು, ಅವನೊಡನೆ ಏಕತೆ ಪಡೆಯುವ, ಪ್ರಜ್ಞೆ–ಯಲ್ಲಿ ಮತ್ತು ಕ್ರಿಯೆಯಲ್ಲಿ ಅವನನ್ನು ಸಿದ್ಧಿಸಿಕೊಳ್ಳುವ, ಪೃಥ್ವಿಯ ಮೇಲೆ ದೈವೀ ಜೀವನದಲ್ಲಿ ಅವನನ್ನು ಪ್ರಕಟಪಡಿಸುವ ಸಾಧ್ಯತೆಯನ್ನು ತೆರೆದು ತೋರಿಸಿತು. ಇದನ್ನು ಮತ್ತು ಇದರ ನೆರವೇರಿಕೆಗಾಗಿ ಆಚರಣೆಯಲ್ಲಿ ತರಬೇಕಾದ ಶಿಸ್ತುಪಾಲನೆಯನ್ನು ನನ್ನ ನಿದ್ರಾವಸ್ಥೆಯಲ್ಲಿ ಹಲವಾರು ಬೋಧಕರು ನೀಡಿದರು,

ಅವರಲ್ಲಿ ಕೆಲವರನ್ನು ನಂತರ ಭೌತಿಕ ಸ್ತರದಲ್ಲಿ (ಪೃಥ್ವಿಯ ಮೇಲೆ) ಭೇಟಿ ಮಾಡಿದೆ. ಆ ನಂತರ ಆಂತರಿಕ ಹಾಗೂ ಬಾಹ್ಯ ಅಭಿವೃದ್ಧಿ ಮುಂದುವರಿದು–ಕೊಂಡು ಹೋಗುತ್ತಿದ್ದ ಹಾಗೆ ಈ ಸತ್ತೆಗಳಲ್ಲಿ ಒಬ್ಬರೊಡನೆ ನನ್ನ ಚೈತ್ಯಾತ್ಮಕ ಹಾಗೂ ಆಧ್ಯಾತ್ಮಿಕ ಸಂಬಂಧ ಹೆಚ್ಚು ಹೆಚ್ಚಾಗಿ ಸ್ಪಷ್ಟವಾಗುತ್ತ ಹೋಯಿತು ಮತ್ತು ಮೇಲಿಂದ ಮೇಲೆ ಆಗತೊಡಗಿತು. ಆ ಸಮಯದಲ್ಲಿ ನನಗೆ ಭಾರತೀಯ ತತ್ವಜ್ಞಾನಗಳ ಹಾಗೂ ಧರ್ಮಗಳ ಬಗ್ಗೆ ತಿಳಿದದ್ದು ಅಲ್ಪಮಾತ್ರವಾಗಿತ್ತಾದರೂ ನಾನು ಆ ಬೋಧಕರನ್ನು ಕೃಷ್ಣ ಎಂದು ಕರೆಯುವಂತೆ ಆದೇಶ ಪಡೆದೆ ಮತ್ತು ಆಗಿನಿಂದ ಅವರೊಡನೆ (ಅವರನ್ನು ಒಂದುದಿನ ಪೃಥ್ವಿಯ ಮೇಲೆ ಭೇಟಿ ಮಾಡು–ವವಳಿದ್ದೇನೆಂದು ನಾನು ತಿಳಿದಿದ್ದೆ) ದೈವೀ ಕಾರ್ಯವನ್ನು ಕೈಕೊಳ್ಳುವುದಿದೆ ಎಂಬ ಅರಿವು ನನ್ನಲ್ಲಿ ಮೂಡಿತು.

1910ರಲ್ಲಿ ನನ್ನ ಪತಿ ತಾವೊಬ್ಬರೇ ಪಾಂಡಿಚೇರಿಗೆ ಬಂದಿದ್ದರು, ಅಲ್ಲಿ ಬಹಳ ಸ್ವಾರಸ್ಯಕರವಾದ ರೀತಿಯಲ್ಲಿ ಹಾಗೂ ವಿಶಿಷ್ಟ ಪರಿಸ್ಥಿತಿಗಳಲ್ಲಿ ಅವರು ಶ್ರೀ ಅರವಿಂದರ ಪರಿಚಯ ಮಾಡಿಕೊಂಡರು. ಆಗಿನಿಂದ ನಾವಿಬ್ಬರೂ ಭಾರತಕ್ಕೆ ಮರಳಿ ಬರಬೇಕೆಂಬ ಬಲವತ್ತರವಾದ ಇಚ್ಛೆ ನಮ್ಮಲ್ಲಿ ಉಂಟಾಯಿತು–ಭಾರತ ನನ್ನ ನಿಜವಾದ ಮಾತೃ ದೇಶವೆಂದು ನಾನು ಯಾವಾಗಲು ಹೃದಯದಲ್ಲಿ ಭಾವಿಸುತ್ತಿದ್ದೆ. 1914ರಲ್ಲಿ ಈ ಸಂತೋಷವನ್ನು ನಮಗೆ ಅನುಗ್ರಹಿಸಲಾಯಿತು.

ನಾನು ಶ್ರೀ ಅರವಿಂದರನ್ನು ನೋಡಿದ ತತ್ಕ್ಷಣ, ನಾನು ಕೃಷ್ಣನೆಂದು ಕರೆಯುತ್ತಿದ್ದ, ನನಗೆ ಸುಪರಿಚಿತವಾಗಿದ್ದ ಸತ್ತೆಯನ್ನು ಅವರಲ್ಲಿ ಗುರುತಿಸಿದೆ. ನನ್ನ ಸ್ಥಾನ ಹಾಗೂ ಕಾರ್ಯ ಅವರ ಬಳಿ ಭಾರತದಲ್ಲಿದೆ ಎಂದು ನನಗೆ ಪೂರ್ತಿಯಾಗಿ ಮನವರಿಕೆಯಾದದ್ದು ಹೇಗೆ ಎಂಬುದನ್ನು ವಿವರಿಸಲು ಇದಿಷ್ಟು ಸಾಕು.

**ಪಾಂಡಿಚೇರಿ 1920** **– ಶ್ರೀಮಾತೆ**

*





**ಮಾರ್ಚ್ 30, 1914**

ಗಾಢವಾದ ಅಜ್ಞಾನದಲ್ಲಿ ಮುಳುಗಿರುವ ಸಾವಿರಾರು ಜನರಿರಬಹುದು, ಅದು ಅತಿ ಕಡಿಮೆ ಮಹತ್ವದ ವಿಷಯ. ನಾನು ನಿನ್ನೆ ನೋಡಿದ ವ್ಯಕ್ತಿ ಪೃಥ್ವಿಯ ಮೇಲಿದ್ದಾರೆ. ಅಂಧಕಾರವನ್ನು ಪ್ರಕಾಶವನ್ನಾಗಿ ಪರಿವರ್ತಿಸುವ, ದೈವೀ ಪ್ರಭು ನಿನ್ನ ಆಳಿಕೆಯನ್ನು ಪೃಥ್ವಿಯ ಮೇಲೆ ಸ್ಥಾಪಿಸುವ ದಿನವೊಂದು ಬರಲಿದೆ ಎಂದು ಸಿದ್ಧಪಡಿಸುವುದಕ್ಕೆ ಅವರ ಸಾನ್ನಿಧ್ಯವೊಂದೇ ಸಾಕು.

ಓ ದೈವೀ ಪ್ರಭು, ಈ ಅದ್ಭುತದ ನಿರ್ಮಾಪಕನೆ, ನಾನು ಅದನ್ನು ಕುರಿತು ಯೋಚಿಸಿದಾಗ ನನ್ನ ಹೃದಯ ಸಂತೋಷ ಹಾಗೂ ಕೃತಜ್ಞತೆ ಇವುಗಳ ಪ್ರವಾಹದಿಂದ ತುಂಬಿ ತುಳುಕುತ್ತದೆ ಮತ್ತು ನನ್ನ ನಿರೀಕ್ಷೆಗೆ ಯಾವ ಮಿತಿಯೂ ಇಲ್ಲ.

ನನ್ನ ಆರಾಧನೆ ಎಲ್ಲ ಶಬ್ದಗಳಾಚೆಗಿದೆ, ನನ್ನ ಗೌರವ ನಿಶ್ಚಲನೀರವತೆಯಲ್ಲಿದೆ.

**– ಶ್ರೀಮಾತೆ**

*

**ಹೊಸ ಕಾಲದ ಒಂದು ಗರ್ಭಕೋಶ**

ನಾನಿಲ್ಲಿಗೆ ಬಂದೆ ... ಆದರೆ ನನ್ನಲ್ಲಿರುವ ಏನೋ ಒಂದು ಶ್ರೀ ಅರವಿಂದರನ್ನು ಮೊಟ್ಟಮೊದಲಿಗೆ ಏಕಾಂತದಲ್ಲಿ ಭೇಟಿ ಮಾಡಬೇಕೆಂದು ಬಯಸಿತ್ತು. R ಅವರಲ್ಲಿಗೆ

ಬೆಳಗಿನ ಕಾಲದಲ್ಲಿ ಹೋಗಿದ್ದರು ಮತ್ತು ನನಗೆ ಅಪರಾಹ್ನದಲ್ಲಿ ಭೇಟಿ ಮಾಡಲು ಅವಕಾಶ ಒದಗಿಸಿಕೊಂಡು ಬಂದಿದ್ದರು. ಈಗ ಹಳೆಯ ಅತಿಥಿ ಗೃಹವಾಗಿ–ರುವುದರ ಎರಡನೆಯ ಮಹಡಿಯ ಮೇಲೆ ವಿಶ್ರಾಂತಿ ಸ್ಥಾನ (dormitory) ದ ಭಾಗವಾಗಿದ್ದ ಮನೆಯಲ್ಲಿರುತ್ತಿದ್ದರು. ನಾನು ಅಟ್ಟದ ಮೇಲೇರಿ ಹೋದೆ ಮತ್ತು ಅವರು ಅಲ್ಲಿ ನನಗಾಗಿ ಅಟ್ಟದ ಮೇಲ್ಭಾಗದ ಹತ್ತಿರ ಕಾದುಕೊಂಡು ನಿಂತು–ಕೊಂಡಿದ್ದರು. ಅದು ನಿಖರವಾಗಿ ನನ್ನ ದರ್ಶನದಲ್ಲಿದ್ದ ಹಾಗಿತ್ತು! ವಸ್ತ್ರ ಧರಿಸಿದ್ದು ಅದೇ ರೀತಿಯದಾಗಿತ್ತು, ನಿಂತ ಸ್ಥಳ ಅದೇ ಆಗಿತ್ತು, ಪಾರ್ಶ್ವದಿಂದ ಕಾಣಿಸು–ತ್ತಿದ್ದುದು ಅದೇ ಆಗಿತ್ತು, ಅವರು ಮುಖವನ್ನು ಮೇಲಕ್ಕೆತ್ತಿ ಹಿಡಿದು ನಿಂತಿದ್ದರು. ಅವರು ನನ್ನತ್ತ ಮುಖ ಹೊರಳಿಸಿದರು. ನಾನು ಅವರ ಕಣ್ಣುಗಳನ್ನು ನೋಡಿ ಅದು ಅವರೇ (ಕೃಷ್ಣನೇ) ಎಂಬುದನ್ನರಿತೆ. ಎರಡೂ ವಿಷಯಗಳು ಹೊಂದಿಕೆ–ಯಾದವು (ತತ್ಕ್ಷಣ ಉಂಟಾದ ಆಘಾತದ ಇಂಗಿತ ಸೂಚನೆ) ಆಂತರಿಕ ಅನುಭವ ಕೂಡಲೆ ಬಾಹ್ಯ ಅನುಭವದೊಂದಿಗೆ ಒಂದುಗೂಡಿತು ಮತ್ತು ಅಲ್ಲಿ ಬೆಸುಗೆ ಉಂಟಾಯಿತು–ಅದು ನಿರ್ಣಾಯಕ ಆಘಾತ.

ಆದರೆ ಇದು ಕೇವಲ ನನ್ನ ದರ್ಶನದ ಆರಂಭವಾಗಿತ್ತು. ಅನುಭವಗಳ ಸರಣಿಗಳು ಬಂದ ನಂತರ–ಹತ್ತು ತಿಂಗಳ ಕಾಲ ಪಾಂಡಿಚೇರಿಯಲ್ಲಿ ವಾಸ ಮಾಡಿ, ಐದು ವರ್ಷಗಳ ಕಾಲ ಪ್ರತ್ಯೇಕವಾಗಿದ್ದ ನಂತರ ಪಾಂಡಿಚೇರಿಗೆ ಮರಳಿ ಬಂದು ಅದೇ ಮನೆಯಲ್ಲಿ ಅವರನ್ನು ಅದೇ ರೀತಿಯಲ್ಲಿ ಭೇಟಿ ಮಾಡಿದ ನಂತರ–ಆ ದರ್ಶನ ಕೊನೆಗೊಂಡಿತು. ನಾನು ಅವರ ಬಳಿ ನಿಂತುಕೊಂಡಿದ್ದೆ. ನಾವು ಒಬ್ಬರ ಬಳಿ ಒಬ್ಬರು ಹಾಗೆ ನಿಂತುಕೊಂಡಿರುತ್ತಿದ್ದೆವು, ತೆರೆದ ಕಿಟಕಿಯ ಮೂಲಕ ನೆಟ್ಟನೋಟದಿಂದ ನೋಡುತ್ತಿದ್ದೆವು, ನಂತರ ಒಟ್ಟಿಗೆ, ನಿಖರವಾಗಿ ಅದೇ ಕ್ಷಣದಲ್ಲಿ "ಈಗ ದೈವೀ ಸಿದ್ಧಿ ನೆರವೇರಿಕೆ ಕಂಡುಕೊಳ್ಳಲಿದೆ" ಎಂಬ ಭಾವನೆ ನಮಗೆ ಬಂದಿತು. ಅದಕ್ಕೆ ಮುದ್ರೆ ಇರಿಸಲಾಗಿತ್ತು, ಸಿದ್ಧಿ ನೆರವೇರಿಕೆ ಕಂಡುಕೊಳ್ಳುವುದಿತ್ತು. ದರ್ಶನದಲ್ಲಿ ನಾನು ಭಾವನೆಗೆ ತಂದುಕೊಂಡಂತೆ ಅದೇ ನಿಶ್ಚಿತತೆಯಿಂದ ದೈವೀ ವಿಷಯ ಅಂತರಂಗದಲ್ಲಿ ಪ್ರಚಂಡ ಅವರೋಹಣ ಮಾಡಿತು. ಆ ಕ್ಷಣದ ನಂತರ ಹೇಳುವುದೇನೂ ಇರಲಿಲ್ಲ–ಶಬ್ದಗಳಿಲ್ಲ, ಏನೂ ಇಲ್ಲ. ಅದು 'ತತ್' ಆಗಿತ್ತೆಂದು ನಾವು ತಿಳಿದುಕೊಂಡೆವು.

(ಅನುಯಾಯಿಯೊಡನೆ ನಡೆಸಿದ ಮಾತುಕತೆ: ಡಿಸೆಂಬರ್ 20, 1961)

*



**ಕೆಲವು ನೆನಪುಗಳು**

ಶ್ರೀ ಅರವಿಂದರನ್ನು ಭೇಟಿ ಮಾಡಲು ನಾನು ಭಾರತಕ್ಕೆ ಬಂದೆ. ಅವರೊಡನೆ ವಾಸಿಸಲು ಭಾರತದಲ್ಲಿಯೇ ಉಳಿದುಕೊಂಡೆ. ಅವರು ತಮ್ಮ ದೇಹತ್ಯಾಗ ಮಾಡಿದ ನಂತರ, ಅವರ ಕಾರ್ಯವನ್ನು ಮುಂದುವರಿಸಿಕೊಂಡು ಹೋಗಲು ನಾನು ಇಲ್ಲಿಯೇ ವಾಸ ಮಾಡಿದೆ, ಆ ಕಾರ್ಯ ದೈವೀ ಸತ್ಯಕ್ಕೆ ಸೇವೆ ಸಲ್ಲಿಸುತ್ತ, ಮನುಕುಲಕ್ಕೆ ಜ್ಞಾನೋದಯವನ್ನುಂಟು ಮಾಡುತ್ತ ದೈವೀ ಪ್ರೇಮದ ಆಳಿಕೆ ಪೃಥ್ವಿಯ ಮೇಲೆ ಬರುವುದನ್ನು ತ್ವರಿತಗೊಳಿಸುವುದಾಗಿತ್ತು.

**ಫೆಬ್ರುವರಿ 21, 1968**

*

ಪೃಥ್ವಿಯ ಪ್ರಾರಂಭದಿಂದ, ಎಲ್ಲೆಲ್ಲಿ, ಯಾವಾಗ ದೈವೀಪ್ರಜ್ಞೆಯ ಕಿರಣ–ವೊಂದನ್ನು ಪ್ರಕಟಗೊಳಿಸುವ ಸಾಧ್ಯತೆಯಿದ್ದಿತೋ ಆಗ ನಾನಲ್ಲಿದ್ದೆ.

**CWM, 13/37**

*

ನಿಮ್ಮ ಹತ್ತಿರ ಈಗ ಮಾತನಾಡುತ್ತಿರುವವಳು ಭಗವಂತನ ನಿಷ್ಠಾವಂತ ಸೇವಕಳಾಗಿದ್ದಾಳೆ. ಪೃಥ್ವಿಯ ಪ್ರಾರಂಭದಿಂದ ಹಿಡಿದು ಎಲ್ಲ ಕಾಲದಲ್ಲೂ ಭಗವಂತನ ನಿಷ್ಠಾವಂತ ಸೇವಕಳಾದ ಅವಳು ದೈವೀ ಪ್ರಭುವಿನ ಹೆಸರಿನಲ್ಲಿ ಮಾತನಾಡಿದ್ದಾಳೆ. ಪೃಥ್ವಿ ಹಾಗೂ ಮಾನವರು ಅಸ್ತಿತ್ವದಲ್ಲಿ ಇರುವವರೆಗೆ ದೈವೀ ಶಬ್ದವನ್ನು ಬೋಧಿಸಲು ಅವಳು ಅಲ್ಲಿರುತ್ತಾಳೆ.

**CWM, 13/37**

*

ನಾನು ಯಾವುದೇ ರಾಷ್ಟ್ರಕ್ಕೆ, ಯಾವುದೇ ಸಂಸ್ಕೃತಿಗೆ, ಯಾವುದೇ ಸಮಾಜಕ್ಕೆ, ಯಾವುದೇ ಕುಲಕ್ಕೆ ಸೇರಿದವಳಲ್ಲ, ಆದರೆ ಭಗವಂತನಿಗೆ ಸೇರಿದವಳಾಗಿದ್ದೇನೆ.

ನಾನು ಯಾವ ಗುರುವಿಗೂ, ಯಾವ ರಾಷ್ಟ್ರಾಡಳಿತ ನಡೆಸುವವನಿಗೂ, ಯಾವ ಶಾಸನಕ್ಕೂ, ಯಾವುದೇ ಸಾಮಾಜಿಕ ಸಂಪ್ರದಾಯಕ್ಕೂ ವಿಧೇಯಳಾಗಿಲ್ಲ, ಕೇವಲ ಭಗವಂತನಿಗೆ ವಿಧೇಯಳಾಗಿದ್ದೇನೆ.

ಭಗವಂತನಿಗೆ ನನ್ನ ಸಂಕಲ್ಪ, ಆತ್ಮ ಹೀಗೆ ಎಲ್ಲವನ್ನೂ ಸಮರ್ಪಿಸಿದ್ದೇನೆ. ಅವನ ಸಂಕಲ್ಪವಿದ್ದರೆ ಅವನಿಗಾಗಿ ಹನಿ ಹನಿಯಾಗಿ ನನ್ನ ರಕ್ತವನ್ನು, ಸಂಪೂರ್ಣ ಸಂತೋಷದಿಂದ ಕೊಡಲು, ಸಿದ್ಧಳಿದ್ದೇನೆ, ಅವನ ಸೇವೆಯಲ್ಲಿ ಯಾವುದೂ ತ್ಯಾಗ ಸ್ವರೂಪದ್ದಾಗಿರುವುದಿಲ್ಲ, ಏಕೆಂದರೆ ಎಲ್ಲವೂ ದಿವ್ಯಾನಂದವಾಗಿರುತ್ತದೆ.

**CWM, 13/38** **– ಶ್ರೀಮಾತೆ**

*

**ಶ್ರೀಮಾತೆಯವರಲ್ಲಿ ಶ್ರೀ ಅರವಿಂದರು ಸಂಪೂರ್ಣ ಶರಣಾಗತಿಯನ್ನು ಕಂಡುಕೊಂಡರು**

ಮಿರ್ರಾ (ಶ್ರೀಮಾತೆ) ಅವರನ್ನು ನೋಡುವವರೆಗೆ ಪರಿಪೂರ್ಣ ಶರಣಾಗತಿ ಮಾಡಿಕೊಂಡವರ ಉದಾಹರಣೆಯನ್ನು ನಾನು ನೋಡಿರಲಿಲ್ಲ ಎಂದು ಶ್ರೀ ಅರವಿಂದರು, ಹಲವಾರು ವರ್ಷಗಳ ನಂತರ, ತಮ್ಮ ಚಿಕ್ಕ ಸಹೋದರ ಬರಿನ್ ಕುಮಾರನಿಗೆ ಹೇಳಿದರು. ಶ್ರೀಮಾತೆಯವರ ದೇಹದಲ್ಲಿಯ ಜೀವಕೋಶಗಳವರೆಗೆ ಅವರ ಸಂಪೂರ್ಣ ಶರಣಾಗತಿ ಇರುವುದನ್ನು ಶ್ರೀ ಅರವಿಂದರು ನೋಡಿದರು ಮತ್ತು ಅದರಿಂದಾಗಿ ಆಗ ಅತಿಮಾನಸದ ಪ್ರಕಟಣೆಗೆ ಕಾಲ ಸನ್ನಿಹಿತವಾದುದರ ಬಗ್ಗೆ ಮನವರಿಕೆ ಮಾಡಿಕೊಂಡರು.

**Reference : M.P. Pandit (edited) Breath of Grace, p.65**

*

**ಸ್ನೇಹಿತೆಯಾಗಿದ್ದರೂ ಅರಿತುಕೊಳ್ಳಲು ಸಾಧ್ಯವಾಗದಷ್ಟು ಶ್ರೇಷ್ಠರಾಗಿದ್ದರು**

' ... ಹಳೆಯ ಜನರಾಗಿದ್ದ ನಮಗೆ ಪ್ರಾರಂಭದಲ್ಲಿ ಅವರು ಶ್ರೀಮಾತೆಯ ರೂಪದಲ್ಲಿರುವುದು ತೋರಿಬರಲಿಲ್ಲ, ಅವರು ಮೊದಲು ಸೌಂದರ್ಯದ ವಿಶೇಷ ವೇಷದಲ್ಲಿ ನಮ್ಮ ಬಳಿ ಬಂದರು. ನಾವು ಅವರನ್ನು ಒಬ್ಬ ಸ್ನೇಹಿತೆ, ಸಹಕಾರಿ ಹಾಗೂ ನಮಗೆ ಅತಿ ಹತ್ತಿರವಾದವರು ಎಂದು ಒಪ್ಪಿಕೊಂಡೆವು. ಮೊದಲನೆಯ–ದಾಗಿ ಏಕೆಂದರೆ ಶ್ರೀ ಅರವಿಂದರೇ ಸ್ವತಃ ಅವರನ್ನು ಆ ರೀತಿ ಒಪ್ಪಿಕೊಂಡಿದ್ದರು, ಎರಡನೆಯದಾಗಿ ಅವರಲ್ಲಿರುವ ಗುಣವಿಶೇಷಗಳು ಅಪೂರ್ವವಾಗಿದ್ದವು. ಶ್ರೀಮಾತೆಯವರ ಬಗ್ಗೆ ಮೊದಲು ನಾನು ಕೇಳಿದ್ದು ಹಾಗೂ ನನಗೆ ತಿಳಿದು ಬಂದದ್ದು ಅವರೊಬ್ಬ ಶ್ರೇಷ್ಠ ಆಧ್ಯಾತ್ಮಿಕ ವ್ಯಕ್ತಿಯಾಗಿದ್ದಾರೆ ಎಂಬುದು. ಅವರಲ್ಲಿ



ಇನ್ನೂ ಅನೇಕ ಸಹಜ ಪ್ರತಿಭೆಗಳು ಇರಬಹುದೆಂಬುದು ಆಗ ನನಗೆ ತಿಳಿದು ಬಂದಿರಲಿಲ್ಲ. ಅವರು ಶ್ರೇಷ್ಠ ಮಟ್ಟದ ವರ್ಣ ಚಿತ್ರಕಾರರಾಗಿದ್ದಾರೆ ಎಂಬುದು ಮೊದಲು ತಿಳಿದು ಬಂದಿತು, ಅದಕ್ಕೆ ಸಮನಾಗಿ ಅವರು ಶ್ರೇಷ್ಠ ಸಂಗೀತಕಾರರೂ ಆಗಿದ್ದಾರೆ ಎಂಬುದು ನಂತರ ತಿಳಿಯಿತು. ಆದರೆ ಇನ್ನೂ ಇತರ ಆಶ್ಚರ್ಯಕಾರಕ ಸಂಗತಿಗಳು ಕಾದಿಟ್ಟುಕೊಂಡಿದ್ದವು. ಉದಾಹರಣೆಗೆ ಅವರಲ್ಲಿ ಶ್ರೀಮಂತವಾಗಿದ್ದ ಬೌದ್ಧಿಕ ಬದಿಯೂ ಇತ್ತು, ಎಂದರೆ ಅವರು ಅತಿ ಹೆಚ್ಚಿನ ರೀತಿಯಲ್ಲಿ ಓದಿದ್ದರು, ಅಭ್ಯಾಸ ಮಾಡಿದ್ದರು; ಪಂಡಿತರು ಮಾಡುವ ಹಾಗೆ ಅವರು ಬೌದ್ಧಿಕ ಹವ್ಯಾಸಗಳಲ್ಲಿ ತೊಡಗಿಕೊಂಡಿದ್ದರು. ಅವರು ಫ್ರಾನ್ಸ ದೇಶದಲ್ಲಿದ್ದಾಗ ಗೀತಾ, ಉಪನಿಷತ್ತುಗಳು, ಯೋಗ ಸೂತ್ರಗಳು, ನಾರದರ ಭಕ್ತಿ ಸೂತ್ರಗಳು ಇತ್ಯಾದಿ ಭಾರತೀಯ ಗ್ರಂಥಗಳನ್ನು ಅಭ್ಯಾಸ ಮಾಡಿದ್ದರು ಮತ್ತು ಭಾಷಾಂತರ ಮಾಡಿದ್ದಾರೆಂಬುದು ತಿಳಿದು ನನಗೆ ಇನ್ನೂ ಹೆಚ್ಚಿನ ಆಶ್ಚರ್ಯವಾಯಿತು. ನಾನು ಇದನ್ನು ಹೇಳುತ್ತಿರುವುದು ಏಕೆಂದರೆ ಶ್ರೀಮಾತೆಯವರು ತಮ್ಮ ಮನಸ್ಸನ್ನು ಪೂರ್ತಿ ಖಾಲಿ ಮಾಡಲು ಹೊಂದಿದ್ದ ಅವರ ಕ್ಷಮತೆ ಅವರ ಮಾನಸಿಕ ಸಂಪಾದನೆಗಳಲ್ಲಿದ್ದಷ್ಟೇ ಅಸಾಧಾರಣವಾಗಿತ್ತು. ಇದು ಅನನ್ಯವಾದ ಒಂದು ವಿಷಯ. ಶ್ರೀಮಾತೆಯವರು ಬಹುಮಟ್ಟಿಗೆ ನಮಗೆ ಒಬ್ಬ ಸ್ನೇಹಿತೆ, ಸಹಕಾರಿ ಹಾಗೂ ಸಹಸದಸ್ಯರು, ಅತಿ ಹೆಚ್ಚೆಂದರೆ ಗೌರವಾದರಗಳಿಗೆ, ಪೂಜ್ಯಬುದ್ಧಿಗೆ ಅರ್ಹರಾದವರಾಗಿದ್ದರು.' ...

ಶ್ರೀ ಅರವಿಂದರು ಒಂದು ಟಿಪ್ಪಣಿಯನ್ನು ಅಧಿಕವಾಗಿ ಸೇರಿಸಿದ್ದರು : ಬಹುಶಃ ಕೇವಲ ಸ್ತ್ರೀಯರು ತಮ್ಮನ್ನು ಇಷ್ಟೊಂದು ಇಡಿಯಾಗಿ ಸಾರ್ವಭೌಮ ನಿರಾತಂಕತೆಯಿಂದ ಸಮರ್ಪಿಸಿಕೊಳ್ಳಲು ಕ್ಷಮತೆಯುಳ್ಳವರಾಗಿರುತ್ತಾರೆ. ಇದು ಗತಕಾಲವನ್ನು ಅದರ ಸದ್ಗುಣಗಳು ಹಾಗೂ ದೋಷಗಳೊಂದಿಗೆ ಸಂಪೂರ್ಣ–ವಾಗಿ ಅಳಿಸಿ ಹಾಕುವುದನ್ನು ಒಳಗೊಳ್ಳುತ್ತದೆ. ಶ್ರೀಮಾತೆ (ಮಿರ್ರಾ) ಯವರು ಇಲ್ಲಿಗೆ ಬಂದಾಗ ಅವರು ತಮ್ಮನ್ನು ದೈವೀ ಪ್ರಭು ಶ್ರೀ ಅರವಿಂದರಿಗೆ ತಮ್ಮನ್ನು ಸಮರ್ಪಿಸಿದರು. ಅದನ್ನು ಅವರು ತಮ್ಮ ಗತಕಾಲವನ್ನು ಎಲ್ಲ ಆಧ್ಯಾತ್ಮಿಕ ಸಿದ್ಧಿಗಳನ್ನು ಪ್ರಜ್ಞೆಯ ಎಲ್ಲ ಶ್ರೀಮಂತಿಕೆಯನ್ನು ತಮ್ಮಿಂದ ಅಳಿಸಿ ಹಾಕಿದ ನಂತರ ಶಿಶುವಿನ ಬಿಚ್ಚುಮನಸ್ಸಿನ ಸರಳತೆಯಿಂದ ಕೈಕೊಂಡರು.

ಮಿರ್ರಾ (ಶ್ರೀಮಾತೆಯವರು) ಮುಕ್ತರಾಗಿ ಜನಿಸಿದ್ದಾರೆ ಎಂಬ ಹೇಳಿಕೆಯನ್ನು ಶ್ರೀ ಅರವಿಂದರು ಅವರನ್ನು ಮೊದಲ ಸಲ ಭೇಟಿ ಮಾಡಿದ ನಂತರ ಕೊಟ್ಟಿದ್ದರು.

**ಶ್ರೀ ನಲಿನಿ ಕಾಂತ ಗುಪ್ತಾ : ನೆನಪುಗಳು,** **p.81-83.**

*

**ಹೊಸ ಜೀವನದಲ್ಲಿ ಜನ್ಮ ತಾಳುವುದು**

ನಾನು ಹೊಸ ಜೀವನಕ್ಕಾಗಿ ಜನ್ಮ ತಾಳುತ್ತಿದ್ದೇನೆ ಮತ್ತು ಗತಕಾಲದ ಎಲ್ಲ ವಿಧಾನಗಳು ಹಾಗೂ ರೂಢಿಗಳು ಇನ್ನು ಮುಂದೆ ಯಾವ ಉಪಯೋಗಕ್ಕೂ ಬರುವುದಿಲ್ಲ ಎಂದು ನನಗೆ ತೋರಿಬರುತ್ತದೆ. ಪರಿಣಾಮಗಳೆಂದು ನಾನು ಏನನ್ನು ತಿಳಿದುಕೊಂಡಿದ್ದೆನೋ ಅವು ತಯಾರಿಗಿಂತ ಹೆಚ್ಚಿನವೇನಾಗಿಲ್ಲ, ನಾನಿನ್ನೂ ಏನನ್ನೂ ಕೈಕೊಂಡಿಲ್ಲ, ಆಧ್ಯಾತ್ಮಿಕ ಜೀವನವನ್ನು ಜೀವಿಸಿಲ್ಲ, ಕೇವಲ ಅದರತ್ತ ಕೊಂಡೊಯ್ಯುವ ಮಾರ್ಗದಲ್ಲಿ ಪ್ರವೇಶಿಸಿದ್ದೇನೆ ಎಂಬ ಭಾವನೆ ನನಗೆ ಬರುತ್ತಿದೆ, ನನಗೇನೂ ತಿಳಿದಿಲ್ಲ, ಯಾವುದಕ್ಕೂ ರೂಪಕೊಡುವ ಕ್ಷಮತೆ ನನ್ನಲ್ಲಿಲ್ಲ, ಎಲ್ಲ ಅನುಭವ ಈ ನಂತರ ಪ್ರಾರಂಭವಾಗಬೇಕಿದೆ ಎಂದು ನನಗೆ ತೋರಿಬರುತ್ತಿದೆ. ನನ್ನ ಇಡೀ ಗತಕಾಲವನ್ನು ಅದರ ದೋಷಗಳು ಹಾಗೂ ವಿಜಯಗಳೊಂದಿಗೆ ಕಿತ್ತು ಹಾಕಿದ ಹಾಗಿದೆ, ಅದೆಲ್ಲವೂ ಮಾಯವಾದ ಹಾಗಿದೆ ಮತ್ತು ಇಡಿ ಅಸ್ತಿತ್ವವನ್ನು ಇನ್ನು ಜೀವಿಸುವುದಕ್ಕಾಗಿ ಹೊಸದಾಗಿ ಜನ್ಮ ತಾಳಿದ ಶಿಶುವಿಗೆ ಸ್ಥಾನಮಾಡಿಕೊಟ್ಟ ಹಾಗಿದೆ, ಆ ಶಿಶುವಿಗೆ ಯಾವ ಕರ್ಮವೂ ಇಲ್ಲ, ಕಲಿತುಕೊಳ್ಳಲು ಯಾವ ಅನುಭವವೂ ಇಲ್ಲ, ಆದರೆ ಸರಿಪಡಿಸಬೇಕಾದ ಯಾವ ದೋಷವೂ ಇಲ್ಲ. ಎಲ್ಲ ಜ್ಞಾನ ಹಾಗೂ ನಿಶ್ಚಿತತೆ ಇವುಗಳಿಲ್ಲದೆ ನನ್ನ ಶಿರ ಬರಿದಾಗಿದೆ, ಹಾಗೆಯೇ ಅಲ್ಲಿ ಯಾವ ವ್ಯರ್ಥ ಯೋಚನೆಯೂ ಇಲ್ಲ. ಈ ಸ್ಥಿತಿಗೆ ಯಾವುದೇ ಪ್ರತಿರೋಧವಿಲ್ಲದೆ ಶರಣಾಗತಳಾಗುವುದನ್ನು ನಾನು ಕಲಿತುಕೊಂಡರೆ, ತಿಳಿದುಕೊಳ್ಳುವುದಕ್ಕಾಗಿ, ಅರ್ಥಮಾಡಿಕೊಳ್ಳುವುದಕ್ಕಾಗಿ ಪ್ರಯತ್ನಪಡದಿದ್ದರೆ, ಸಂಪೂರ್ಣವಾಗಿ ಅಜ್ಞಾನಿ ಹಾಗೂ ಬಿಚ್ಚುಮನಸ್ಸಿನ ಶಿಶುವಾಗಲು ನಾನು ಒಪ್ಪಿಕೊಂಡರೆ ಯಾವುದೋ ಹೊಸದಾದ ಸಾಧ್ಯತೆ ನನ್ನೆದುರು ತೆರೆದುಕೊಳ್ಳುವುದು. ನಾನೀಗ ನಿರ್ಣಾಯಕವಾಗಿ ನನ್ನನ್ನು ಬಿಟ್ಟುಕೊಡಬೇಕು ಮತ್ತು ಪರಿಪೂರ್ಣವಾಗಿ ಖಾಲಿ ಪುಟದಂತಾಗಬೇಕು ಎಂಬುದು ನನಗೆ ತಿಳಿದಿದೆ, ಆ ಪುಟದ ಮೇಲೆ ಓ ದೈವೀ ಪ್ರಭು, ನಿನ್ನ ಯೋಚನೆ, ಸಂಕಲ್ಪಗಳನ್ನು ಮುಕ್ತವಾಗಿ, ಯಾವ ಅಪಾಯವೂ ಇಲ್ಲದೆ ಲೇಖಿಸು–ವಂತಾಗುವುದು.

ಮಹೋನ್ನತ ಕೃತಜ್ಞತೆ ನನ್ನ ಹೃದಯದಿಂದ ಮೇಲೆದ್ದು ಬರುತ್ತಿದೆ. ನಾನು ಅಷ್ಟೊಂದು ಹೆಚ್ಚಿನ ರೀತಿಯಲ್ಲಿ ಅರಸುತ್ತಿದ್ದ ಹೊಸ್ತಿಲನ್ನು ತಲುಪಿದ್ದೇನೆ ಎಂದು ನನಗೆ ತೋರಿಬರುತ್ತಿದೆ.

ಓ ದೈವೀ ಪ್ರಭು, ಆ ಹೊಸ್ತಿಲನ್ನು ನಿರ್ಣಾಯಕವಾಗಿ ದಾಟಿ ಹೋಗಲು ನಾನು ಸಾಕಷ್ಟು ಪರಿಶುದ್ಧಗಳು, ಅವ್ಯೆಯಕ್ತಿಕವಾದವಳು, ದೈವೀ ಪ್ರೇಮದಿಂದ ಚೈತನ್ಯತುಂಬಿಕೊಂಡವಳು ಆಗುವಂತೆ ಅನುಗ್ರಹಿಸು.



ಯಾವುದೇ ಅಂಧಕಾರಕ್ಕೆ ಇಲ್ಲವೆ ನಿರ್ಬಂಧಕ್ಕೆ ಒಳಗಾಗದೆ ನಿನಗೆ ಮಾತ್ರ ಸೇರಿರುವಂತೆ ಅನುಗ್ರಹಿಸು.

**ಎಪ್ರಿಲ್ 3, 1914** **– ಶ್ರೀಮಾತೆ**

*

## ಏಕೈಕರಾದ ನಾವಿಬ್ಬರು

**ಪ್ರಜ್ಞೆಯ ಅಭಿನ್ನತೆ**

ಶ್ರೀಮಾತೆಯವರ ಪ್ರಜ್ಞೆ ಹಾಗೂ ನನ್ನ ಪ್ರಜ್ಞೆ ಒಂದೇ ಆಗಿವೆ. ದೈವೀ ಪ್ರಜ್ಞೆ ಎರಡರಲ್ಲಿವೆ, ಏಕೆಂದರೆ ಅದು ಲೀಲೆಗಾಗಿ ಅವಶ್ಯವಾಗಿದೆ. ಅವರ ಜ್ಞಾನ ಹಾಗೂ ಶಕ್ತಿಗಳಿಲ್ಲದೆ ಏನನ್ನೂ ಕೈಕೊಳ್ಳಲು ಶಕ್ಯವಾಗದು–ಯಾರಾದರೂ ಅವರ ಪ್ರಜ್ಞೆಯ ಅರಿವು ತಂದುಕೊಂಡರೆ ಅದರ ಹಿಂದೆ ನಾನಿರುವೆ ಎಂಬುದನ್ನು ತಿಳಿದುಕೊಳ್ಳಬೇಕು ಮತ್ತು ನನ್ನ ಬಗ್ಗೆ ಭಾವನೆ ತಂದುಕೊಂಡರೆ ಅವರ ಬಗ್ಗೆ ತಂದುಕೊಂಡ ಹಾಗೆಯೇ ಇರುತ್ತದೆ. ಆ ಬಗೆಯ ಪ್ರತ್ಯೇಕತೆಯನ್ನು ಮಾಡಿದರೆ (ಆ ಜನರ ಮನಸ್ಸುಗಳು ಅಷ್ಟೊಂದು ಬಲವತ್ತರವಾಗಿ ಈ ವಿಷಯಗಳ ಮೇಲೆ ಇರಿಸುವ ತಿರುವುಗಳನ್ನು ಬದಿಗಿರಿಸೋಣ) ದೈವೀ ಸತ್ಯ ಸ್ಥಾಪಿತಗೊಳ್ಳುವುದು ಹೇಗೆ? ದೈವೀ ಸತ್ಯದಿಂದ ಅಂತಹ ಪ್ರತ್ಯೇಕತೆ ಇಲ್ಲ.

**CWSA, 32/79**

*

**ಮಾರ್ಗಗಳಲ್ಲಿ ಅಭಿನ್ನತೆ**

ಶ್ರೀಮಾತೆಯವರ ಮಾರ್ಗ ಹಾಗೂ ನನ್ನ ಮಾರ್ಗ ಇವುಗಳಲ್ಲಿ ಯಾವ ಭಿನ್ನತೆಯೂ ಇಲ್ಲ. ನಮ್ಮದು ಒಂದೇ ಮಾರ್ಗವಾಗಿದೆ, ಯಾವಾಗಲೂ ಅದೇ ಮಾರ್ಗವಾಗಿತ್ತು, ಆ ಮಾರ್ಗ ಅತಿಮಾನಸ ಬದಲಾವಣೆಯತ್ತ ಮತ್ತು ದೈವೀ ಸಿದ್ಧಿಯತ್ತ ಕೊಂಡೊಯ್ಯುತ್ತದೆ, ಅವು ಕೊನೆಯಲ್ಲಿ ಕಂಡುಕೊಂಡ ಮಾರ್ಗಗಳಷ್ಟೇ ಅಲ್ಲ, ಪ್ರಾರಂಭದಿಂದಲೂ ಆ ಮಾರ್ಗಗಳು ಒಂದೇ ಆಗಿದ್ದವು.

ವಿಭಜನೆಯನ್ನು ಹಾಗೂ ವೈರುಧ್ಯವನ್ನು ಇರಿಸುವುದಕ್ಕೆ, ಶ್ರೀಮಾತೆಯವರನ್ನು ಒಂದು ಬದಿಗೆ ಮತ್ತು ನನ್ನನ್ನು ಇನ್ನೊಂದು ವಿರುದ್ಧ ಇಲ್ಲವೆ ಅತ್ಯಂತ ಭಿನ್ನವಾದ ಬದಿಯಲ್ಲಿ ಇರಿಸುವುದಕ್ಕೆ ಪ್ರಯತ್ನ ಮಾಡುವುದು ಯಾವಾಗಲೂ ಮಿಥ್ಯೆಯ

ಶಕ್ತಿಗಳ ಕುತಂತ್ರವಾಗಿದೆ, ಆ ಶಕ್ತಿಗಳು ದೈವೀ ಸತ್ಯವನ್ನು ತಲುಪುವುದಕ್ಕೆ ಸಾಧಕನಿಗೆ ಅಡ್ಡಿ ಉಂಟುಮಾಡುತ್ತವೆ. ನಿಮ್ಮ ಮನಸ್ಸಿನಿಂದ ಇಂತಹ ಎಲ್ಲ ಮಿಥ್ಯೆಗಳನ್ನು ತೆಗೆದು ಹಾಕಿರಿ.

ಶ್ರೀಮಾತೆಯವರ ಪ್ರಕಾಶ ಹಾಗೂ ಶಕ್ತಿ, ದೈವೀ ಸತ್ಯದ ಪ್ರಕಾಶ ಹಾಗೂ ಶಕ್ತಿಗಳಾಗಿವೆ ಎಂಬುದನ್ನು ತಿಳಿದುಕೊಳ್ಳಿರಿ, ಯಾವಾಗಲೂ ಶ್ರೀಮಾತೆಯವರ ಪ್ರಕಾಶ ಹಾಗೂ ಶಕ್ತಿಗಳ ಸಂಪರ್ಕದಲ್ಲಿ ಉಳಿದುಕೊಳ್ಳಿರಿ, ಆಗ ಮಾತ್ರ ನೀವು ದೈವೀ ಸತ್ಯದಲ್ಲಿ ಬೆಳೆಯಬಲ್ಲಿರಿ.

**CWSA, 32/81**

*

ಮನುಷ್ಯ ಶ್ರೀಮಾತೆಯವರಿಂದ ದೊರಕಿಸಿದ ಏನೆಲ್ಲವೂ ನನ್ನಿಂದಲೂ ಕೂಡ ಬಂದಿರುತ್ತದೆ, ಅದರಲ್ಲಿ ಯಾವ ವ್ಯತ್ಯಾಸವೂ ಇರುವುದಿಲ್ಲ. ನಾನೇನ್ನಾದರೂ ಕೊಟ್ಟರೆ ಅದು ಶ್ರೀಮಾತೆಯವರ ದೈವೀ ಶಕ್ತಿಯ ಮೂಲಕ ಸಾಧಕನಿಗೆ ಹೋಗುತ್ತದೆ.

**CWSA, 32/80**

*

ಶ್ರೀಮಾತೆಯವರ ಸಹಾಯ ನಿನಗೆ ಯಾವುದೇ ಬಗೆಯಲ್ಲಿ ಸಹಾಯಕ ಆಗುವುದಿಲ್ಲವೆಂದು ಪರಿಗಣಿಸುತ್ತಿರುವಿ. ... ನೀನು ಅವರ ಸಹಾಯದ ಲಾಭ ಪಡೆಯಲಾಗದಿದ್ದರೆ ನನ್ನದರಲ್ಲಿ ಇನ್ನೂ ಕಡಿಮೆ ಲಾಭ ಪಡೆಯುವಿ. ಆದರೆ, ಸಂದರ್ಭ ಏನೇ ಇರಲಿ, ನಾನು ಎಲ್ಲ ಅನುಯಾಯಿಗಳಿಗಾಗಿ, ಯಾವ ಅಪವಾದ–ವನ್ನೂ ಮಾಡದೆ, ಕೈಕೊಂಡ ವ್ಯವಸ್ಥೆಯಲ್ಲಿ ಬದಲಾವಣೆ ಮಾಡುವ ಉದ್ದೇಶ ನನಗಿಲ್ಲ. ಆ ವ್ಯವಸ್ಥೆ ಎಂದರೆ ಅನುಯಾಯಿಗಳು ಪ್ರಕಾಶ ಹಾಗೂ ಶಕ್ತಿಗಳನ್ನು ಶ್ರೀಮಾತೆಯವರಿಂದ ಪಡೆಯಬೇಕು, ನನ್ನಿಂದ ನೇರವಾಗಿ ಅಲ್ಲ ಮತ್ತು ತಮ್ಮ ಆಧ್ಯಾತ್ಮಿಕ ಪ್ರಗತಿಯಲ್ಲಿ ಅವರ ಮಾರ್ಗದರ್ಶನ ಪಡೆಯಬೇಕು. ಆ ವ್ಯವಸ್ಥೆಯನ್ನು ತಾತ್ಕಾಲಿಕ ಉದ್ದೇಶಕ್ಕಾಗಿ ಮಾಡಿಲ್ಲ, ಆದರೆ ಅನುಯಾಯಿ ಯಾವಾಗಲು, ಅವರಿಗೆ ತೆರೆದುಕೊಂಡವನು ಹಾಗೂ ಅವರಿಂದ ಸ್ವೀಕರಿಸುವವನು ಆದರೆ ಅದು ನಿಜವಾದ ಹಾಗೂ ಪರಿಣಾಮಕಾರಿಯಾದ ಒಂದು ಮಾರ್ಗ ಎಂಬ ಕಾರಣಕ್ಕಾಗಿ ಆ ವ್ಯವಸ್ಥೆ ಇದೆ. (ಅವರೇನಾಗಿರುವರು ಮತ್ತು ಅವರ ಶಕ್ತಿ ಎಂತಹದು ಎಂಬುದನ್ನು ಪರಿಗಣಿಸಿ ಹೀಗೆ ಮಾಡಲಾಗಿದೆ.)

**CWSA, 36/390**

*



**ಎರಡು ರೂಪಗಳಲ್ಲಿ ಒಂದೇ ದೈವೀ ಸಾಮರ್ಥ್ಯ**

ಶ್ರೀಮಾತೆಯವರು ಹಾಗೂ ನಾನು ಒಂದೇ ದೈವೀ ಸಾಮರ್ಥ್ಯವನ್ನು ಪ್ರತಿನಿಧಿಸುತ್ತೇವೆ–ಹಾಗಾಗಿ ಕನಸಿನಲ್ಲಾದ ಗ್ರಹಿಕೆ ಪರಿಪೂರ್ಣವಾಗಿ ತರ್ಕಬದ್ಧ–ವಾಗಿತ್ತು. ಈಶ್ವರ–ಶಕ್ತಿ, ಪುರುಷ–ಪ್ರಕೃತಿ ಇವೆರಡೂ ಕೇವಲ ಏಕೈಕ ಭಗವಂತನ (ಬ್ರಹ್ಮನ್‌ನ) ಎರಡು ಬದಿಗಳಾಗಿವೆ.

**CWSA, 32/126**

*

ನನ್ನ ಹಾಗೂ ಶ್ರೀಮಾತೆಯವರ ನಡುವಿನ ಅಭಿನ್ನತೆ ಅತಿ ಸಾಮಾನ್ಯ ಅನುಭವಕ್ಕೆ ಬರುವಂತಹದು (ನಾವಿಬ್ಬರೂ ಏಕೈಕರಾಗಿದ್ದೇವೆ ಎಂಬ ಗ್ರಹಿಕೆ), ಅದು ಎರಡು ಪ್ರತಿಮೆಗಳಲ್ಲಿ ಬೆಸುಗೆಗೆ ಒಳಗಾದ ಅಭಿವ್ಯಕ್ತಿಯಾಗಿರುತ್ತದೆ.

**CWSA, 27/690**

*

ಶ್ರೀಮಾತೆಯವರು ಮತ್ತು ನಾನು ಒಂದೇ ಆಗಿದ್ದೇವೆ, ಆದರೆ ಎರಡು ದೇಹಗಳಲ್ಲಿದ್ದೇವೆ; ಎರಡೂ ದೇಹಗಳು, ಯಾವಾಗಲೂ, ಒಂದೇ ಕಾರ್ಯವನ್ನು ಕೈಕೊಳ್ಳುವ ಆವಶ್ಯಕತೆ ಇರುವುದಿಲ್ಲ. ತದ್ವಿರುದ್ಧವಾಗಿ, ನಾವಿಬ್ಬರೂ ಒಂದೇ ಆಗಿರುವುದರಿಂದ ಒಬ್ಬರು ಸಹಿ ಮಾಡುವುದು ಸಾಕಾಗುವಂತೆ, ಒಬ್ಬರು ಕೆಳಗೆ ಹೋಗಿ ಪ್ರಣಾಮ ಸ್ವೀಕರಿಸುವುದು, ಧ್ಯಾನಕ್ಕಾಗಿ ಸಮಯ ವಿನಿಯೋಗಿಸುವುದು ಸಾಕಾಗುತ್ತದೆ.

**CWSA, 32/82**

*

**ದೈವೀ ಸಾಮರ್ಥ್ಯ ಏಕೈಕವಾಗಿದೆ**

*ಪ್ರಶ್ನೆ : ಶ್ರೀ ಅರವಿಂದರಿಗೆ ತಮ್ಮನ್ನು ತೆರೆದಿರಿಸಿಕೊಂಡವರು ಶ್ರೀಮಾತೆಯವರಿಗೆ ತೆರೆದಿರಿಸಿಕೊಂಡಿರದೆ ಇರುವ ಸಾಧ್ಯತೆ ಇದೆಯೆ? ಶ್ರೀಮಾತೆಯವರಿಗೆ ತೆರೆದಿರಿಸಿಕೊಂಡವರು ಶ್ರೀ ಅರವಿಂದರಿಗೆ ತೆರೆದಿರಿಸಿಕೊಂಡಂತೆ ಆಗುವುದೇ?*

ಶ್ರೀ ಅ : ಶ್ರೀಮಾತೆಯವರ ಬಗೆಗಿನ ಪ್ರಸ್ತಾಪ ಸರಿಯಾಗಿದೆ. ಶ್ರೀ ಅರವಿಂದರಿಗೆ ತೆರೆದಿರಿಸಿಕೊಂಡವನು ಶ್ರೀಮಾತೆಯವರಿಗೆ ತೆರೆದಿರಿಸಿಕೊಂಡಿರದಿದ್ದರೆ ಅದರರ್ಥ ಅವನು ನಿಜವಾಗಿ ಶ್ರೀ ಅರವಿಂದರಿಗೆ ತೆರೆದಿರಿಸಿಕೊಂಡವನಾಗಿರುವುದಿಲ್ಲ.

**CWSA, 32/104**

*

ಕೇವಲ ಒಂದೇ ಶಕ್ತಿ ಇದೆ, ಅದು ಶ್ರೀಮಾತೆಯವರ ದೈವೀ ಶಕ್ತಿ. ನೀನು ಇಷ್ಟಪಡುವುದಾದರೆ ಶ್ರೀಮಾತೆಯವರು ಶ್ರೀ ಅರವಿಂದರ ಶಕ್ತಿ ಎಂದು ಹೇಳಬಹುದು.

**CWSA, 32/105**

*

ಶ್ರೀಮಾತೆಯವರು ಶ್ರೀ ಅರವಿಂದರ ಶಿಷ್ಯೆಯಲ್ಲ, ಅವರಿಗೆ ಶ್ರೀ ಅರವಿಂದರಿಗಾದ ಅನುಭವ ಹಾಗೂ ಸಿದ್ಧಿಗಳಾಗಿದ್ದವು.

ಶ್ರೀಮಾತೆಯವ ಸಾಧನೆ ಅವರು ಬಹಳ ಚಿಕ್ಕವರಾಗಿರುವಾಗಲೇ ಪ್ರಾರಂಭವಾಯಿತು. ಅವರು ಹನ್ನೆರಡು, ಹದಿಮೂರು ವರ್ಷದವರಾಗಿದ್ದಾಗ ಪ್ರತಿದಿನ ಸಾಯಂಕಾಲ ಹಲವಾರು ಬೋಧಕರು ಅವರ ಬಳಿ ಬಂದು ಅವರಿಗೆ ಅನೇಕ ಆಧ್ಯಾತ್ಮಿಕ ಶಿಸ್ತುಪಾಲನೆಗಳನ್ನು ಕಲಿಸಿಕೊಟ್ಟರು. ಅವರಲ್ಲಿ ಏಶಿಯಾ ಮೂಲದ ಕಪ್ಪು ವರ್ಣದವರೊಬ್ಬರಿದ್ದರು. ನಾವು ಮೊದಲು ಭೇಟಿ ಮಾಡಿದಾಗ ಅವರು ನನ್ನನ್ನು ಏಶಿಯಾ ಮೂಲದ ಆ ಕಪ್ಪು ವರ್ಣದವನೆಂದು ಗುರುತಿಸಿದರು, ಆ ಕಪ್ಪು ವರ್ಣದವನನ್ನು ಬಹಳ ಕಾಲದಿಂದ ನೋಡುತ್ತ ಬಂದಿದ್ದರು. ಅವರು ಇಲ್ಲಿಗೆ ಬರಬೇಕು ಹಾಗೂ ನನ್ನೊಡನೆ ಕಾರ್ಯಕೈಕೊಳ್ಳಬೇಕೆಂಬುದು ದೈವಸಂಕಲ್ಪವಾಗಿತ್ತು.

ಶ್ರೀಮಾತೆಯವರು ಭಾರತಕ್ಕೆ ಬರುವುದಕ್ಕಿಂತ ಮೊದಲು ಬೌದ್ಧ ಯೋಗ ಹಾಗೂ ಗೀತೆಯ ಯೋಗ ಇವುಗಳಲ್ಲಿ ಪರಿಣತಿ ಪಡೆದಿದ್ದರು. ಅವರ ಯೋಗ ಭವ್ಯ ಸಮನ್ವಯದತ್ತ ಚಲಿಸುತ್ತಿತ್ತು. ಇದರ ನಂತರ ಅವರು ಇಲ್ಲಿಗೆ ಬರುವುದು ಸ್ವಾಭಾವಿಕವಾಗಿತ್ತು. ಅವರು ನನ್ನ ಯೋಗಕ್ಕೆ ಮೂರ್ತರೂಪ ಕೊಡಲು ಸಹಾಯ ಮಾಡಿದ್ದಾರೆ ಹಾಗೂ ಮಾಡುತ್ತಲೇ ಇದ್ದಾರೆ. ಅವರ ಸಹಕಾರವಿಲ್ಲದೆ ಇದು ಸಾಧ್ಯವಾಗುತ್ತಿರಲಿಲ್ಲ.

ಈ ಯೋಗದ ಎರಡು ಶ್ರೇಷ್ಠ ಹೆಜ್ಜೆಗಳಲ್ಲಿ ಶ್ರೀಮಾತೆಯವರಲ್ಲಿ ಆಶ್ರಯ ಪಡೆಯುವುದು ಒಂದು.

**CWSA, 32/36** – **ಶ್ರೀ ಅರವಿಂದರು**

*





## Mother Sri Aurobindo is My refuge

## ಮದರ ಶ್ರೀ ಅರೋಬಿಂದೋ ನನ್ನ ಆಶ್ರಯ

*

... ನಾನು ಸರಿಯಾಗಿ ಕಾರ್ಯ ಕೈಕೊಳ್ಳಲು ಪ್ರಾರಂಭಿಸಿದಂದಿನಿಂದ ದರ್ಶನಗಳು ನನಗೆ ಸರಣಿಯಾಗಿ ಬರತೊಡಗಿದವು. (ನನಗೆ ಭಾರತದ ಬಗ್ಗೆ ಏನೂ ತಿಳಿದಿರಲಿಲ್ಲ, ಇದನ್ನು ನೀನು ಲಕ್ಷ್ಯದಲ್ಲಿ ಇರಿಸಿಕೊಳ್ಳಬೇಕು). ಸರಿ ಈ ಹಲವಾರು ದರ್ಶನಗಳಲ್ಲಿ, ಅವರು ಭೌತಿಕ ರೂಪದಲ್ಲಿ ಕಾಣಿಸಿಕೊಳ್ಳುತ್ತಿದ್ದ ಹಾಗೆ ಆದರೆ ತೇಜೋಮಯರಾಗಿದ್ದಂತೆ ನೋಡಿದೆ ಎಂದರೆ ನನ್ನ ಮೊದಲ ಭೇಟಿಯಲ್ಲಿ ನೋಡಲಿದ್ದ ಅದೇ ವ್ಯಕ್ತಿ, ಬಹುಮಟ್ಟಿಗೆ ಸಣಕಲಾದವರು, ಹೊಂಬಣ್ಣದಿಂದ ಕೂಡಿದ ಕಂಚಿನ ಬಣ್ಣವುಳ್ಳವರು ಮತ್ತು ಹೆಚ್ಚಿನಮಟ್ಟಿಗೆ ತೀಕ್ಷ್ಣ ಪಾರ್ಶ್ವ ದೃಶ್ಯದ ರೂಪುರೇಖೆಯಿಂದ ಕೂಡಿದವರು, ಅಂಕೆಯಲ್ಲಿರದ ಗಡ್ಡ ಹಾಗೂ ಉದ್ದ ತಲೆಗೂದಲನ್ನು ಹೊಂದಿದವರು, ಧೋತ್ರ ಧರಿಸಿದವರು, ಆ ಧೋತ್ರದ ಒಂದು ಅಂಚನ್ನು ಹೆಗಲ ಮೇಲೆ ಇರಿಸಿಕೊಂಡವರು, ತೋಳುಗಳು ಹಾಗೂ ಎದೆ ಬರಿದಾಗಿರುವಂತೆ ಇಟ್ಟುಕೊಂಡವರು ಮತ್ತು ಬರಿಗಾಲಿನಲ್ಲಿದ್ದವರು ಆಗಿರುವಂತೆ ಕಂಡುಬಂದರು. ಆ ಕಾಲದಲ್ಲಿ ಅದು ದರ್ಶನದಲ್ಲಿ ಕಂಡುಬರುವ ಉಡುಪಾಗಿರಬಹುದೆಂದು ಯೋಚಿಸಿದೆ. ಅದರರ್ಥ ಆಗ ನಾನು ಭಾರತದ ಬಗ್ಗೆ ಏನೂ ತಿಳಿದಿರಲಿಲ್ಲ ಎಂದಿದೆ, ಭಾರತೀಯ ರೀತಿಯಲ್ಲಿ ಉಡುಪು ಧರಿಸಿದ ಭಾರತೀಯರನ್ನು ನೋಡಿರಲಿಲ್ಲ. ಸರಿ, ನಾನವರನ್ನು ನೋಡಿದೆ. ಏಕಕಾಲಕ್ಕೆ ಸಾಂಕೇತಿಕ ದರ್ಶನಗಳು ಹಾಗೂ ಆಧ್ಯಾತ್ಮಿಕ ವಾಸ್ತವತೆಗಳು ಆಗಿದ್ದವುಗಳ ಅನುಭವ ನನಗಾಯಿತು: ಪರಿಪೂರ್ಣವಾಗಿ ನಿರ್ಣಾಯಕವಾದ ಆಧ್ಯಾತ್ಮಿಕ ಅನುಭವಗಳು ಮತ್ತು ಅವರನ್ನು ಭೇಟಿ ಮಾಡಿದ ವಾಸ್ತವ ಸಂಗತಿಗಳು ಮತ್ತು ಸಿದ್ಧಿಸಿಕೊಳ್ಳಬೇಕಾಗಿದ್ದ ಕಾರ್ಯದ ಬಗ್ಗೆ ಏಕತೆ ಪಡೆದ ಗ್ರಹಿಕೆ ಅವುಗಳಲ್ಲಿದ್ದವು

ಮತ್ತು ಈ ದರ್ಶನಗಳಲ್ಲಿ ನಾನು ಭೌತಿಕವಾಗಿ ಕೈಕೊಂಡಿರದ ಏನೋ ಒಂದನ್ನು ಕೈಕೊಂಡೆ; ಅವರ ಮುಂದೆ ಹಿಂದೂ ಪದ್ಧತಿಯಲ್ಲಿ ಸಾಷ್ಟಾಂಗ ನಮಸ್ಕಾರ ಮಾಡಿದೆ. ನಾನದನ್ನು ಕೈಕೊಂಡೆ ಮತ್ತು ಅದೇ ಕಾಲಕ್ಕೆ ನನ್ನ ಬಾಹ್ಯ ಸತ್ತೆ "ಇದೆಲ್ಲ ಏನು?" ಎಂದು ಕೇಳುತ್ತಿತ್ತು.

ನಾನು ಆ ದರ್ಶನವನ್ನು ಕುರಿತು ಬರೆದಿಟ್ಟಿದ್ದೆ... ಆದರೆ ಅದರ ಬಗ್ಗೆ ಯಾರ ಮುಂದೆಯೂ ಮಾತನಾಡಿರಲಿಲ್ಲ. ... ಆದರೆ ಅದು ಮುನ್ಸೂಚಕವೆಂದು ಮತ್ತು ಒಂದು ದಿನ ಅಂತಹದು ಸಂಭವಿಸಲಿದೆಯೆಂದು ನನಗೆ ಭಾಸವಾಯಿತು. ಅದು ಪ್ರಜ್ಞೆಯ ಹಿಂಭಾಗದಲ್ಲಿ ಉಳಿದುಕೊಂಡಿತ್ತು, ಕ್ರಿಯಾಶೀಲವಾಗಿರಲಿಲ್ಲ, ಆದರೆ ಅದರ ಸಾನ್ನಿಧ್ಯ ಸತತ ಇರುತ್ತಿತ್ತು.

ಇದು ಸುಮಾರು 1904ರಲ್ಲಿ ನಡೆದ ಸಂಗತಿ. "ಶ್ರೀಮಾತೆಯವರು ಅನುಯಾಯಿ–ಯೊಬ್ಬನಿಗೆ ವಿವರಪೂರ್ಣವಾಗಿ ನಿರೂಪಿಸಿದ್ದು", "ಶ್ರೀಅರವಿಂದರು ಹಾಗೂ ಶ್ರೀಮಾತೆ–ಯವರು" ಕಿರೀಟ ಜೋಶಿ ಬರೆದ ಈ ಗ್ರಂಥದಿಂದ ಆಯ್ದುಕೊಂಡದ್ದು. ಪು. 29

ನಾನು ಐದು ವರ್ಷದವಳಾಗಿದ್ದಾಗಿನ ಸಂಗತಿ (ನಾನು ಅದಕ್ಕೂ ಮೊದಲು ಪ್ರಾರಂಭಿಸಿರಬಹುದು, ಆದರೆ ಅದರ ನೆನಪು ಸ್ಪಷ್ಟವಾಗಿಲ್ಲ, ನಿಖರವಾಗಿಲ್ಲ.)... ಆದರೆ ಐದು ವರ್ಷದವಳಾದ ನಂತರ, ಸರಿ ನಾನು ಪ್ರಜ್ಞಾಪೂರ್ವಕವಾಗಿ ಪ್ರಾರಂಭಿಸಿದೆ. ಸಹಜವಾಗಿ ಅದೇನಿರಬಹುದೆಂಬ ವಿಚಾರ ನನಗೆ ತಿಳಿದಿರಲಿಲ್ಲ. ಆದರೆ ಪ್ರಜ್ಞೆಯನ್ನು ಕುರಿತು ಅನುಭವ (ಶಿರದ ಮೇಲಾದುದನ್ನು ಸೂಚಿಸುತ್ತಾರೆ), ಅದು ದೈವೀ ಪ್ರಕಾಶ ಹಾಗೂ ದೈವೀ ಶಕ್ತಿಯಾಗಿತ್ತೆಂಬ ಭಾವನೆ ನನಗೆ ಬಂದಿತು. ನಾನು ಅದನ್ನು ಇಲ್ಲಿ (ಅದೇ ಸೂಚನೆ) ನನ್ನ ಐದನೆಯ ವರ್ಷದಲ್ಲಿ ಭಾವನೆಗೆ ತಂದುಕೊಂಡೆ. ಅದು ಬಹಳ ಸಂತೋಷಕರ ಸಂವೇದನೆಯಾಗಿತ್ತು. ನನಗಾಗಿ ತಯಾರಿಸಿದ್ದ ಚಿಕ್ಕ ಆರಾಮ ಕುರ್ಚಿಯ ಮೇಲೆ ಕುಳಿತುಕೊಳ್ಳುತ್ತಿದ್ದೆ, ಏಕಾಕಿಯಾಗಿ ನನ್ನ ಕೋಣೆಯಲ್ಲಿರುತ್ತಿದ್ದೆ. (ಅದೇನಿತ್ತು ಎಂಬುದು ನನಗೆ ತಿಳಿದಿರಲಿಲ್ಲ, ಸ್ವಲ್ಪವೂ ಇಲ್ಲ, ಮಾನಸಿಕವಾಗಿ ಶೂನ್ಯ ಸ್ಥಿತಿ ಇರುತ್ತಿತ್ತು.) ಬಲವತ್ತರವಾಗಿದ್ದ ಹಾಗೂ ಪ್ರಕಾಶಮಾನವಾಗಿದ್ದ ಏನೋ ಒಂದರ ಸಂತೋಷಕರ ಭಾವನೆ ಇರುತ್ತಿತ್ತು, ಅದು ಇಲ್ಲಿ (ಶಿರದ ಮೇಲೆ) ಇರುತ್ತಿತ್ತು. ದೈವೀ ಪ್ರಜ್ಞೆ. "ಅದನ್ನೇ ನಾನು ಜೀವಿಸಬೇಕಾಗಿದೆ, ಅದೇ ನಾನಾಗಬೇಕಾಗಿದೆ" ಎಂಬ ಭಾವನೆ ಇರುತ್ತಿತ್ತು. ಸ್ವಾಭಾವಿಕವಾಗಿ ಅವೆಲ್ಲ ಶಬ್ದಗಳು ಅಲ್ಲಿರುತ್ತಿರಲಿಲ್ಲ, ಆದರೆ (ಶ್ರೀಮಾತೆಯವರು ಮೇಲ್ಗಡೆಗೆ ಇರಬೇಕಾದ ಅಭೀಪ್ಸೆಯ ಸಂಜ್ಞೆ ಮಾಡುತ್ತಾರೆ.) ನಂತರ ನಾನು ಅದನ್ನು ಕೆಳಗೆಳೆದು ತರುತ್ತಿದ್ದೆ, ಏಕೆಂದರೆ ಅದು ನನ್ನ ಅಸ್ತಿತ್ವದ ಮೂಲ ಕಾರಣವಾಗಿತ್ತು.



ಅದು ನನ್ನ ಮೊದಲ ನೆನಪು–ನಾನು ಐದು ವರ್ಷದವಳಾಗಿದ್ದಾಗಿನದು. ಅದರ ಪ್ರಭಾವ ಬೌದ್ಧಿಕ ಬದಿಯ ಮೇಲೆ ಆಗುವುದಕ್ಕಿಂತಲೂ ಹೆಚ್ಚಾಗಿ ನೈತಿಕ ಬದಿಯ ಮೇಲಾಗಿತ್ತು, ಆದಾಗ್ಯೂ ಅದು ಬೌದ್ಧಿಕ ರೂಪವನ್ನು ಪಡೆಯಿತು... ತೋರಿಕೆಗೆ ನಾನು ಇನ್ನಿತರ ಬಾಲಿಕೆಯರ ಹಾಗಿದ್ದೆ, ನನ್ನನ್ನು ಹಿಡಿತದಲ್ಲಿ ಇಟ್ಟುಕೊಳ್ಳುವುದು ಮಾತ್ರ ಕಠಿಣವಾಗಿತ್ತು. ಕಠಿಣ ಆಗಿದ್ದು ಏಕೆಂದರೆ ನನಗೆ ಆಹಾರ ಸೇವನೆಯಲ್ಲಿ, ಸಾಧಾರಣ ಆಟಪಾಟಗಳಲ್ಲಿ, ತಿಂಡಿ ತಿನ್ನುವುದಕ್ಕಾಗಿ, ಸ್ನೇಹಿತೆಯರ ಮನೆಗೆ ಹೋಗುವುದರಲ್ಲಿ, ಇಂತಹ ಯಾವುದರಲ್ಲಿಯೂ ಆಸಕ್ತಿಯಿರಲಿಲ್ಲ, ಕೇಕ್‌ನಂತಹದನ್ನು ತಿನ್ನುವುದರಲ್ಲಿ ಕನಿಷ್ಠ ಮಟ್ಟದ ಆಸಕ್ತಿಯೂ ಇರಲಿಲ್ಲ! ನನಗೆ ಶಿಕ್ಷೆ ನೀಡುವುದೂ ಕೂಡ ಅಸಾಧ್ಯವಾಗಿತ್ತು, ಏಕೆಂದರೆ ನಾನು ಸಂಪೂರ್ಣ ನಿರ್ಲಕ್ಷ್ಯದಿಂದಿರುತ್ತಿದ್ದೆ. ಊಟದ ನಂತರ ಕೊಡುವ ಸಿಹಿತಿಂಡಿ ದೊರಕದಂತೆ ಮಾಡಿದರೆ, ಅದು ನನಗೆ ಹೆಚ್ಚಾಗಿ ಸಮಾಧಾನ ನೀಡುವ ವಿಷಯವಾಗುತ್ತಿತ್ತು! ಮತ್ತು ಆಗ ನಾನು ಓದಲು ಕಲಿತುಕೊಳ್ಳುವುದನ್ನು ಸಾರಾಸಗಟವಾಗಿ ತಿರಸ್ಕರಿಸುತ್ತಿದ್ದೆ, ಕಲಿಯುವ ಇಚ್ಛೆಯಿರಲಿಲ್ಲ. ನನಗೆ ಸ್ನಾನ ಮಾಡಿಸುವುದೂ ಕೂಡ ಬಹಳ ಕಠಿಣ ಕಾರ್ಯವಾಗುತ್ತಿತ್ತು, ಏಕೆಂದರೆ ಆಂಗ್ಲ ಗೃಹಶಿಕ್ಷಕಿ (governess) ಯೊಬ್ಬಳು ನನ್ನ ಯೋಗಕ್ಷೇಮ ನೋಡಿಕೊಳ್ಳುತ್ತಿದ್ದಳು, ಅವಳು ನನಗೆ ತಣ್ಣೀರಿನ ಸ್ನಾನ ಮಾಡಿಸುತ್ತಿದ್ದಳು, ನನ್ನ ಸಹೋದರ ಅದನ್ನು ಮಾಮೂಲಿನ ವಿಷಯ–ವೆಂದು ತೆಗೆದುಕೊಂಡ, ಆದರೆ ನಾನು ಕೇವಲ ಗಟ್ಟಿಯಾಗಿ ಅಳುತ್ತಿದ್ದೆ. ನಂತರ ಆ ತಣ್ಣೀರಿನ ಸ್ನಾನ ನನಗೆ ಒಳ್ಳೆಯದಲ್ಲವೆಂದು ಕಂಡು ಬಂದಿತು (ವೈದ್ಯರು ಆ ರೀತಿ ಹೇಳಿದ್ದರು), ಆದರೆ ಅದು ಬಹಳ ಕಾಲದ ನಂತರದ ವಿಷಯ. ಹಾಗಾಗಿ ಆಗಿನ ಚಿತ್ರಣ ನಿಮಗೆ ದೊರೆಯುತ್ತದೆ.

ಆದರೆ ಬಂಧು ಬಳಗದವರು, ಸಹ ಆಟಗಾರರು ಇಲ್ಲವೆ ಸ್ನೇಹಿತರು ಇಂತಹರೊಡನೆ ಅಸಂತೋಷಕರ ವಿಷಯಗಳು ಮೇಲೆದ್ದು ಬಂದಾಗೆಲ್ಲ ನನಗೆ ಅಲ್ಲಿರುತ್ತಿದ್ದ ಎಲ್ಲ ದುಸ್ತರತೆ (nastiness) ಇಲ್ಲವೆ ದುರುದ್ದೇಶಗಳ ಬಗ್ಗೆ ಭಾವನೆ ಬರುತ್ತಿತ್ತು–ಅಲ್ಲಿ ಎಲ್ಲ ಬಗೆಯ ಕ್ಷುಲ್ಲಕ, ಕುರೂಪದವುಗಳಾದ ಸಂಗತಿಗಳು ಕಾಣಿಸಿಕೊಳ್ಳುತ್ತಿದ್ದವು, (ನಾನು ಬಹಳ ಸೂಕ್ಷ್ಮ ಸಂವೇದನಾಶೀಲಳಾಗಿದ್ದೆ, ಏಕೆಂದರೆ ನಾನು ಸಹಜವಾಗಿ ಸೌಂದರ್ಯ ಹಾಗೂ ಸಾಮರಸ್ಯಗಳಿರುವ ಆದರ್ಶವನ್ನು ಪೋಷಿಸಿಕೊಂಡು ಬಂದಿದ್ದೆ, ಅದನ್ನು ಜೀವನದ ಎಲ್ಲ ಪರಿಸ್ಥಿತಿಗಳು ನಿರಾಕರಿಸುತ್ತಿದ್ದವು)... ಹಾಗಾಗಿ ನಾನು ವಿಷಣ್ಣಳಾದಾಗೆಲ್ಲ ನನ್ನ ತಾಯಿಯ ಮುಂದೆ ಆಗಲಿ ಇಲ್ಲವೆ ತಂದೆಯ ಮುಂದೆ ಆಗಲಿ ಏನನ್ನೂ ಹೇಳದೆ ಇರುವ ಹಾಗೆ ಕಾಳಜಿ ವಹಿಸುತ್ತಿದ್ದೆ, ಏಕೆಂದರೆ ನನ್ನ ತಂದೆ ಅಂತಹದಕ್ಕೆ ಎಳ್ಳಷ್ಟೂ ಗಮನ ಕೊಡುತ್ತಿರಲಿಲ್ಲ. ತಾಯಿ ನನ್ನನ್ನು ಬಯ್ಯುತ್ತಿದ್ದಳು–ಆಕೆ ಕೈಕೊಳ್ಳುತ್ತಿದ್ದ ಮೊದಲ

ವಿಷಯ ಅದೇ ಆಗಿರುತ್ತಿತ್ತು. ಹಾಗಾಗಿ ಅಂತಹ ಸಂದರ್ಭದಲ್ಲಿ ನನ್ನ ಕೋಣೆಗೆ ಹೋಗಿ, ಆರಾಮ ಕುರ್ಚಿಯ ಮೇಲೆ ಕುಳಿತುಕೊಳ್ಳುತ್ತಿದ್ದೆ, ಅಲ್ಲಿ ಏಕಾಗ್ರತೆಯಲ್ಲಿದ್ದು ನನ್ನದೇ ರೀತಿಯಲ್ಲಿ ಅರ್ಥಮಾಡಿಕೊಳ್ಳಲು ಪ್ರಯತ್ನಿಸುತ್ತಿದ್ದೆ. ಬಹುಶಃ ಹಲವಾರು ವಿಫಲಗೊಂಡ ಪ್ರಯತ್ನಗಳ ನಂತರ ನನಗೆ ನಾನೇ ಹೇಳಿಕೊಳ್ಳುತ್ತಿದ್ದೆ: "ಇಲ್ಲಿ ನೋಡು, ಯಾರೋ ಒಬ್ಬರು ನಿನಗೆ ನಿಜವಾಗಿ ಜುಗುಪ್ಸೆ ತರಿಸುವ ಏನನ್ನೋ ಹೇಳಿದರು–ಆದರೆ ಅದು ನೀನು ಅಳುವಂತೆ ಏಕೆ ಮಾಡಬೇಕು? ನೀನು ಇಷ್ಟೊಂದು ದುಃಖಿತಳು ಆಗುವುದೇಕೆ? ಕೆಟ್ಟವ ಅವನಾಗಿದ್ದ, ಅವನು ಅಳುತ್ತ ಕುಳಿತುಕೊಳ್ಳಬೇಕು. ನೀನು ಅವನಿಗೆ ಕೆಟ್ಟದಾದ ಏನನ್ನೂ ಮಾಡಲಿಲ್ಲ... ಅವನಿಗೆ ಅಸಹ್ಯವಾದ ಏನನ್ನಾದರೂ ಹೇಳಿದೆಯಾ? ಅವನೊಡನೆ ಇಲ್ಲವೆ ಅವಳೊಡನೆ ಜಗಳ ಮಾಡಿದೆಯಾ? ಇಲ್ಲ, ನೀನೇನನ್ನೂ ಮಾಡಿಲ್ಲ, ಅಲ್ಲವೆ? ಸರಿ, ಹಾಗಾದರೆ ನೀನು ದುಃಖಿತಳಾಗುವ ಆವಶ್ಯಕತೆಯಿಲ್ಲ. ನೀನೇನಾದರೂ ಕೆಟ್ಟದ್ದನ್ನು ಮಾಡಿದ್ದರೆ ಅದಕ್ಕಾಗಿ ದುಃಖಿತಳಾಗಬೇಕು, ಆದರೆ... ಹಾಗಾಗಿ ಅದು ಮನಸ್ಸನ್ನು ಶಾಂತ ಸ್ಥಿತಿಗೆ ತಂದಿತು. ನಂತರ ನಾನು ಅಳುವುದನ್ನು ಬಿಟ್ಟುಕೊಟ್ಟೆ. ಅಲ್ಪ ಮಟ್ಟದ ಆಂತರಿಕ ಚಲನೆಯೊಂದಿಗೆ ಇಲ್ಲವೆ "ನೀನು ಯಾವ ತಪ್ಪನ್ನೂ ಮಾಡಿಲ್ಲ" ಎಂದು ಹೇಳುವ "ಏನೋ ಒಂದರಿಂದ" ವಿಷಾದ ಉಂಟಾಗುವುದು ನಿಂತು ಹೋಯಿತು.

ಆದರೆ "ಈ ಯಾರೋ ಒಬ್ಬರು" ಎನ್ನುವುದಕ್ಕೆ ಇನ್ನೊಂದು ಬದಿಯಿತ್ತು: ಅದು ನನ್ನ ಮೇಲೆ ಹೆಚ್ಚು ಹೆಚ್ಚಾಗಿ ಕಾವಲಿರಿಸುತ್ತಿತ್ತು ಮತ್ತು ನಾನು ಒಂದು ಹೆಚ್ಚಿನ ಶಬ್ದವನ್ನು ಉಚ್ಚರಿಸಿದಾಗ ಇಲ್ಲವೆ ಸಂಕೇತವನ್ನು ಮಾಡಿದಾಗ, ಒಂದು ಚಿಕ್ಕ ಕೆಟ್ಟ ಯೋಚನೆ ನನಗೆ ಬಂದಾಗ, ನನ್ನ ಸಹೋದರನಿಗೆ ಕೀಟಲೆ ಮಾಡಿದಾಗ, ಅತ್ಯಂತ ಚಿಕ್ಕ ವಿಷಯವೂ ಕೂಡ ಇದ್ದಾಗ ಅದು ಹೇಳುತ್ತಿತ್ತು: (ಶ್ರೀಮಾತೆಯವರು ಗಂಭೀರ ಧ್ವನಿಯಲ್ಲಿ ಹೇಳುವ ಸಂಜ್ಞೆ ಮಾಡುತ್ತಾರೆ) "ಲಕ್ಷ್ಯಗೊಡು, ಕಾಳಜಿ–ಯಿಂದಿರು!" ಅದನ್ನು ಕುರಿತು ಮೊದಲು ನಾನು ಗೋಳಿಡುತ್ತಿದ್ದೆ, ಬರಬರುತ್ತ ಅದು ನನಗೆ ಕಲಿಸಿಕೊಟ್ಟಿತು: "ದುಃಖಿಸಬೇಡ–ಸರಿಯಾಗಿರಿಸು, ತಿದ್ದಿಕೋ" ಮತ್ತು ವಿಷಯಗಳನ್ನು ತಿದ್ದಿಕೊಳ್ಳುವುದು ಸಾಧ್ಯವಾದಾಗ–ಅವುಗಳನ್ನು ಯಾವಾಗಲೂ ತಿದ್ದಿಕೊಳ್ಳಬಹುದಾಗಿತ್ತು–ನಾನು ಹಾಗೆ ಮಾಡುತ್ತಿದ್ದೆ. ಅದೆಲ್ಲವೂ ಐದರಿಂದ ಏಳು ವರ್ಷಗಳವರೆಗಿನ ಮಗುವಿನ ಬುದ್ಧಿಯ ಮಟ್ಟದಲ್ಲಾಗುತ್ತಿತ್ತು.

ಹಾಗಾಗಿ ಅದು ಪ್ರಜ್ಞೆಯಾಗಿತ್ತು.

ನಂತರ ಕಲಿಯುವ ಹಾಗೂ ಅಭಿವೃದ್ಧಿ ಹೊಂದುವ ಅವಧಿ ಬಂದಿತ್ತು, ಆದರೆ ಅದು ಸಾಧಾರಣ ಮಾನಸಿಕ ಹಂತದಲ್ಲಿತ್ತು–ಅದು ಶಾಲೆಗೆ ಹೋಗುವ ವರ್ಷಗಳ–ದ್ದಾಗಿತ್ತು. ಕುತೂಹಲ ನಾನು ಓದಲು ಕಲಿಯುವಂತೆ ಮಾಡಿತು. ಅದು



ಹೇಗಾಯಿತು ಎಂದು ನಾನು ನಿಮಗೆ ಹೇಳಿರುವೆನೆ? ನಾನು ಸುಮಾರು ಏಳು ವರ್ಷದವಳಾಗಿದ್ದಾಗ, ಏಳು ವರ್ಷಗಳಿಗಿಂತ ಇನ್ನೂ ಸ್ವಲ್ಪ ಕಡಿಮೆ ವಯಸ್ಸಿನ–ವಳಾಗಿದ್ದಾಗ, ನನಗಿಂತ ಹದಿನೆಂಟು ತಿಂಗಳು ಹಿರಿಯನಾದ ನನ್ನ ಸಹೋದರ ಶಾಲೆಯಿಂದ ದೊಡ್ಡ ಚಿತ್ರಪಟಗಳನ್ನು ಮನೆಗೆ ತೆಗೆದುಕೊಂಡು ಬರುತ್ತಿದ್ದ (ಆ ಚಿತ್ರಪಟಗಳ ಕೆಳಗಡೆಯಲ್ಲಿ ಚಿತ್ರ ಕುರಿತು ವಿವರಣೆ ನೀಡುವ ಬರಹಗಳಿ–ರುತ್ತಿದ್ದವು, ಅಂತಹವುಗಳನ್ನು ಈಗಲೂ ಕೂಡ ಉಪಯೋಗಿಸಲಾಗುತ್ತದೆ), ಅವುಗಳಲ್ಲಿ ಒಂದನ್ನು ನನಗೆ ಕೊಟ್ಟಿದ್ದ. "ಅಲ್ಲಿ ಏನು ಬರೆದಿದೆ?" ಎಂದು ನಾನು ಕೇಳಿದೆ. "ಅದನ್ನು ಓದು" ಎಂದು ಅವನು ಹೇಳಿದ. "ನನಗೆ ಓದಲು ಬರುವುದಿಲ್ಲ" ಎಂದು ನಾನು ಹೇಳಿದೆ. "ಹಾಗಾದರೆ ಕಲಿತುಕೋ" ಎಂದು ಅವನು ಹೇಳಿದ. "ಆಗಲಿ, ನನಗೆ ಅಕ್ಷರಗಳನ್ನು ತೋರಿಸಿಕೊಡು" ಎಂದು ನಾನು ಹೇಳಿದೆ. A, B, C ಇರುವ ಪುಸ್ತಕವೊಂದನ್ನು ಅವನು ನನಗೆ ತಂದುಕೊಟ್ಟ. ಅದನ್ನು ನಾನು ಎರಡು ದಿನಗಳಲ್ಲಿ ಕಲಿತುಕೊಂಡೆ ಮತ್ತು ಮೂರನೆಯ ದಿನದಿಂದ ಓದಲು ಪ್ರಾರಂಭಿಸಿದೆ. ನಾನು ಕಲಿತುಕೊಂಡಿದ್ದು ಹೀಗೆ. ನನ್ನ ಸುತ್ತಲಿದ್ದವರು "ಓಹೋ, ಈ ಮಗು ಬಹಳ ಹಿಂದುಳಿದಿದೆ" ಎಂದು ಹೇಳುತ್ತಿದ್ದರು. ಇಡೀ ಕುಟುಂಬ ಅದರ ಬಗ್ಗೆ ಕಳವಳ ವ್ಯಕ್ತಪಡಿಸುತ್ತಿತ್ತು. ನಂತರ ನೋಡಿರಿ, ಕಲಿಯಲು ಹಲವಾರು ವರ್ಷಗಳು ಬೇಕಾಗಿದ್ದಷ್ಟನ್ನು ನಾನು ಒಂದು ವಾರದ ಸಮಯದಲ್ಲಿ ತಿಳಿದುಕೊಂಡೆ–ಅವರೆಲ್ಲರೂ ಎರಡೆರಡು ಸಲ ಯೋಚಿಸುವಂತಾಯಿತು.

ನಂತರ ಶಾಲೆಯಲ್ಲಿ ಕಲಿಯುತ್ತಿದ್ದಾಗಿನ ವರ್ಷಗಳು. ನಾನು ಬಹಳ ಪ್ರತಿಭಾವಂತ ವಿದ್ಯಾರ್ಥಿನಿಯಾಗಿದ್ದೆ, ಕಾರಣ ಅದೇ ಆಗಿತ್ತು: ನಾನು ಅರ್ಥ–ಮಾಡಿಕೊಳ್ಳಲು ಬಯಸಿದ್ದೆ. ಇತರ ಮಕ್ಕಳು ಮಾಡುತ್ತಿದ್ದಂತೆ ನಾನು ಬಾಯಿಪಾಠ ಮಾಡಿ ಕಲಿಯುವುದರಲ್ಲಿ ಸ್ವಾರಸ್ಯ ಕಂಡುಕೊಳ್ಳುತ್ತಿರಲಿಲ್ಲ–ನಾನು ಅವುಗಳನ್ನೆಲ್ಲ ತಿಳಿದುಕೊಳ್ಳಲು ಬಯಸಿದ್ದೆ. ಧ್ವನಿಗಳು ಹಾಗೂ ಪ್ರತೀಕಗಳನ್ನು ಕುರಿತು ನನ್ನ ನೆನಪಿನ ಶಕ್ತಿ ಅತ್ಯದ್ಭುತವಾಗಿತ್ತು! ನಾನು ರಾತ್ರಿ ಕಾಲದಲ್ಲಿ ಒಂದು ಕವಿತೆಯನ್ನು ಗಟ್ಟಿಯಾಗಿ ಓದಿದಾಗ, ಮರುದಿನ ಮುಂಜಾನೆ ಅದು ನನಗೆ ಪೂರ್ತಿಯಾಗಿ ತಿಳಿದಿರುತ್ತಿತ್ತು. ನಾನೊಂದು ಪುಸ್ತಕವನ್ನು ಅಭ್ಯಾಸ ಮಾಡಿದಾಗ ಇಲ್ಲವೆ ಓದಿದ ನಂತರ ಯಾರಾದರೊಬ್ಬರು ಅದರೊಳಗಿನ ಪರಿಚ್ಛೇದವನ್ನು ಕುರಿತು ಹೇಳಿದಾಗ, ನಾನು "ಅಹಾ, ಹೌದು–ಅದು ಇಂತಿಂತಹ ಪುಟದಲ್ಲಿದೆ" ಎಂದು ಹೇಳುತ್ತಿದ್ದೆ. ನಾನು ಆ ಪುಟವನ್ನು ಕಂಡುಕೊಳ್ಳುತ್ತಿದ್ದೆ. ಯಾವುದೂ ಮಸುಕಾಗಿ ಹೋಗುತ್ತಿರಲಿಲ್ಲ. ಅದೆಲ್ಲವೂ ತಾಜಾ ಆಗಿ ಉಳಿದುಕೊಂಡಿರುತ್ತಿತ್ತು. ಆದರೆ ಇದು ಅಭಿವೃದ್ಧಿಯ ಸಾಧಾರಣ ಅವಧಿ.

ನಂತರ ಬಹಳ ಚಿಕ್ಕ ವಯಸ್ಸಿನಲ್ಲಿಯೇ (ಸುಮಾರು ಎಂಟರಿಂದ ಹತ್ತು ವರ್ಷದವಳಿದ್ದಾಗ) ವರ್ಣಚಿತ್ರಗಳನ್ನು ಬಿಡಿಸಲು ಪ್ರಾರಂಭಿಸಿದೆ. ಹನ್ನೆರಡರ ವಯಸ್ಸಿನಲ್ಲಿ ಭಾವಚಿತ್ರ (portrait)ಗಳನ್ನು ರಚಿಸತೊಡಗಿದೆ. ಸೌಂದರ್ಯದ ಹಾಗೂ ಕಲೆಯ ಎಲ್ಲ ಮುಖಗಳು, ವಿಶೇಷವಾಗಿ, ಸಂಗೀತ ಹಾಗೂ ವರ್ಣಚಿತ್ರ ಕಲೆ ನನಗೆ ಹೆಚ್ಚು ಚಿತ್ತಾಕರ್ಷಕವಾಗಿದ್ದವು. ಆ ಅವಧಿಯಲ್ಲಿ ನಾನು ಬಹಳ ಗಾಢವಾಗಿ ಪ್ರಾಣಿಕವನ್ನು ಅಭಿವೃದ್ಧಿಪಡಿಸಿಕೊಳ್ಳುವುದರಲ್ಲಿ ನಿರತಳಾಗಿದ್ದೆ, ಆಗ ನನ್ನೊಂದಿಗೆ, ನನ್ನ ಮೊದಲಿನ ವರ್ಷಗಳಲ್ಲಿ ಇದ್ದ ಹಾಗೆ, ಆಂತರಿಕ ದೈವೀ ಮಾರ್ಗದರ್ಶಕನಿರುತ್ತಿದ್ದ; ಎಲ್ಲವೂ ಅಭ್ಯಾಸದ ಮೇಲೆ ಕೇಂದ್ರೀಕೃತವಾಗಿತ್ತು: ಸಂವೇದನೆಗಳ, ಅವಲೋಕನಗಳ ಅಭ್ಯಾಸ, ತಾಂತ್ರಿಕತೆಯ ಅಭ್ಯಾಸ, ತಾರತಮ್ಯ ಗುರುತಿಸುವ ಅಭ್ಯಾಸ, ರುಚಿ ವಾಸನೆ ಮತ್ತು ಶ್ರುತಿ ಇವುಗಳೊಡನೆ ವ್ಯವಹರಿಸುವ ಅವಲೋಕನಗಳ ಇಡೀ ಪಟ್ಟಿ–ಅದೊಂದು ಅನುಭವಗಳ ವರ್ಗೀಕರಣವಾಗಿತ್ತು. ಇದು ಜೀವನದ ಎಲ್ಲ ಮುಖಗಳತ್ತ ಜೀವನ ತರಬಹುದಾದ ಎಲ್ಲ ಅನುಭವಗಳತ್ತ ವಿಸ್ತರಿಸಿಕೊಂಡಿತು; ದುಃಸ್ಥಿತಿಗಳು, ತೊಂದರೆಗಳು, ವೇದನೆಗಳು ಹೀಗೆ ಎಲ್ಲವೂ ಅಲ್ಲಿದ್ದವು–ಓಹ್, ಅದು ಅಭ್ಯಾಸ ಕೈಕೊಳ್ಳಬೇಕಾದ ಇಡೀ ಕ್ಷೇತ್ರವಾಗಿತ್ತು! ಮತ್ತು ಯಾವಾಗಲೂ ಅಂತರಂಗದಲ್ಲಿ ಈ ದೈವೀ ಸಾನ್ನಿಧ್ಯವಿತ್ತು, ಅದು ತೀರ್ಮಾನ ಕೈಕೊಳ್ಳುವ, ನಿರ್ಧರಿಸುವ, ವರ್ಗೀಕರಣ ಮಾಡುವ, ಸಂಘಟಿಸುವ ಮತ್ತು ಪ್ರತಿಯೊಂದನ್ನು ವ್ಯವಸ್ಥಿತಗೊಳಿಸುವ ಕಾರ್ಯಕೈಕೊಳ್ಳುತ್ತಿತ್ತು.

ನಾನು ಥಿಯೋನ್‌ನನ್ನು ಭೇಟಿ ಮಾಡಿದಾಗ ಪ್ರಜ್ಞಾಪೂರ್ಣ ಯೋಗ ನನ್ನ ಜೀವನದಲ್ಲಿ ಒಮ್ಮೆಗೆ ಪ್ರವೇಶ ಮಾಡಿತು, ಆಗ ನನ್ನ ವಯಸ್ಸು ಇಪ್ಪತ್ತೊಂದರಷ್ಟು ಇದ್ದಿರಬಹುದು. ಜೀವನದ ನೆಲೆ ನಿರ್ದೇಶನ ಬದಲಾಯಿತು, ಅನುಭವಗಳ ಇಡೀ ಸರಣಿಯನ್ನೇ ಕಂಡುಕೊಂಡೆ, ಪ್ರಾಣಿಕದ ಅಭಿವೃದ್ಧಿ ಸ್ವಾರಸ್ಯಕರ ರಹಸ್ಯ ಪರಿಣಾಮ ತಂದುಕೊಟ್ಟಿತು.

ನಂತರ ಗಾಢವಾದ ಮಾನಸಿಕ ಅಭಿವೃದ್ಧಿಯ ಅವಧಿಯಿತ್ತು, ಆ ಅಭಿವೃದ್ಧಿ ಅತ್ಯಂತ ಸಂಪೂರ್ಣ ಮಾದರಿಯದಾಗಿತ್ತು, ಎಲ್ಲ ತತ್ವಜ್ಞಾನಗಳ ಅಭ್ಯಾಸ, ಸೂಕ್ಷ್ಮ ವಿವರಗಳಲ್ಲಿ ಎಲ್ಲ ಕಾಲ್ಪನಿಕ ಚಮತ್ಕಾರಗಳ ಕೌಶಲದ ಪ್ರಾಪ್ತಿ–ಪದ್ಧತಿಗಳ ಆಳದಲ್ಲಿ–ಳಿದು ಹೋಗುವುದು, ಅವುಗಳನ್ನು ಗ್ರಹಿಕೆಗೆ ತಂದುಕೊಳ್ಳುವುದು. ಹತ್ತು ವರ್ಷಗಳ ಕಾಲದ ಗಾಢವಾಧ ಮಾನಸಿಕ ಅಭ್ಯಾಸಗಳು ನನ್ನನ್ನು ಶ್ರೀ ಅರವಿಂದರತ್ತ ಕೊಂಡೊಯ್ದುವು.

ಹಾಗಾಗಿ ನಾನು ಎಲ್ಲ ತಯಾರಿ ಮಾಡಿಕೊಂಡಿದ್ದೆ. ನಾನು ನಿಮಗೆ ಈ ವಿವರಗಳನ್ನು ಕೊಡುತ್ತಿರುವುದೇಕೆಂದರೆ, ಅದೆಲ್ಲವೂ ಪ್ರಜ್ಞೆಯಿಂದ ಪ್ರಾರಂಭ–ವಾಯಿತು ಎಂದು ನಿಮಗೆ ಹೇಳಬೇಕಾಗಿದೆ. (ಪ್ರಜ್ಞೆ ಎಂದರೆ ಏನೆಂಬುದನ್ನು, ನನ್ನ



ಹತ್ತಿರ ಅದನ್ನು ವಿವರಿಸಲು ಒಂದು ಶಬ್ದ ಇಲ್ಲವೆ ವಿಚಾರ ಇಲ್ಲದೆ ಇದ್ದಾಗಲೂ, ಸರಿಯಾಗಿ ತಿಳಿದುಕೊಂಡಿದ್ದೆ), ಪ್ರಜ್ಞೆ ಹಾಗೂ ಅದರ ಶಕ್ತಿ–ಅದರ ಕ್ರಿಯೆಯ ಶಕ್ತಿ, ನಿರ್ವಹಿಸುವ ಅದರ ಶಕ್ತಿ. ನಂತರ ಪ್ರಾಣಿಕದ ವಿವರಗಳನ್ನು ಕುರಿತು ಅಭ್ಯಾಸ ಹಾಗೂ ಅದನ್ನು ಸಂಪೂರ್ಣವಾಗಿ ಅಭಿವೃದ್ಧಿಪಡಿಸುವುದು. ಅದರ ನಂತರ ಮಾನಸಿಕ ಅಭಿವೃದ್ಧಿಯನ್ನು ಅದರ ಅತ್ಯಂತ ಉಚ್ಚಮಟ್ಟದವರೆಗೆ ತೆಗೆದುಕೊಂಡು ಹೋಗಲಾಗಿತ್ತು, ಅಲ್ಲಿ ಎಲ್ಲ ವಿಚಾರಗಳೊಡನೆ ಚಮತ್ಕಾರದ ಕೌಶಲ ನಡೆಸ–ಬಹುದು; ಅಭಿವೃದ್ಧಿಯ ಒಂದು ಹಂತ, ಅಲ್ಲಿ ಎಲ್ಲ ವಿಚಾರಗಳು ಸತ್ಯವಾದ–ವುಗಳು, ಅವುಗಳ ಸಮನ್ವಯ ಮಾಡುವುದಿರುತ್ತದೆ ಎಂಬುದನ್ನು ಮೊದಲೆ ತಿಳಿದುಕೊಂಡಿರಬಹುದಾಗಿದೆ ಮತ್ತು ಸಮನ್ವಯದಾಚೆಗೆ ಪ್ರಕಾಶಮಯವಾದ, ನಿಜವಾದ ಏನೋ ಒಂದಿರುತ್ತದೆ. ಎಲ್ಲದರ ಹಿಂದೆ ಮುಂದುವರಿದುಕೊಂಡು ಹೋಗುವ ಪ್ರಜ್ಞೆಯಿರುತ್ತದೆ. ನಾನಿಲ್ಲಿಗೆ ಬಂದಾಗ ನನ್ನ ಸ್ಥಿತಿ ಹೀಗಿತ್ತು: ನಾನು ಶ್ರೀ ಅರವಿಂದರ ಬಳಿಗೆ ಬಂದಾಗ ಅನುಭವಗಳ ಜಗತ್ತನ್ನು ಪರಿಚಯಿಸಿಕೊಂಡಿದ್ದೆ, ಮೇಲ್ಗಡೆ ಹಾಗೂ ಅಂತರಂಗದಲ್ಲಿ ಇರುವ ಭಗವಂತನೊಂದಿಗೆ ಏಕತೆ ಪಡೆದಿದ್ದೆ–ಎಲ್ಲವನ್ನೂ ಪ್ರಜ್ಞಾಪೂರ್ವಕವಾಗಿ ಸಿದ್ಧಿಸಿಕೊಳ್ಳಲಾಗಿತ್ತು, ಕಾಳಜಿಪೂರ್ವಕ ಟಿಪ್ಪಣಿ ಮಾಡಿ ಇಡಲಾಗಿತ್ತು ಇತ್ಯಾದಿ.

**– ಶ್ರೀಮಾತೆ**

ಕಿರೀಟ ಜೋಶಿಯವರ ಪುಸ್ತಕದಿಂದ ಆಯ್ದದ್ದು. ಪು. 47–51

*

## ವಾರ್ತಾಪತ್ರ

### ಶ್ರೀ ಅರವಿಂದ ಸಂಕೀರ್ಣ

ಜೆ.ಪಿ. ನಗರ 1ನೇ ಹಂತ, ಬೆಂಗಳೂರು.

ದಿನಾಂಕ 1ನೇ ಜನವರಿ 2015ರ ಗುರುವಾರದಂದು ಸಂಸ್ಥಾಪಕರ ದಿನ ಹಾಗೂ ಹೊಸ ವರ್ಷ ಆಚರಿಸಲಾಯಿತು. ತತ್ಸಂಬಂಧ ಬೆಳಿಗ್ಗೆ 9 ರಿಂದ 9.30ರವರೆಗೆ ಸಾಮೂಹಿಕ ಧ್ಯಾನ ಹಾಗೂ ಸಂದೇಶ ಪತ್ರವನ್ನು ವಿತರಿಸಲಾಯಿತು. ತತ್ಸಂಬಂಧ ಶಾಲೆಯ ಅಧ್ಯಕ್ಷರಾದ ಶ್ರೀ ಅಜಿತ್ ಸಬ್ನೀಸ್‌ರವರು ಶಾಲಾ ಶಿಕ್ಷಕ–ಶಿಕ್ಷಕಿಯರನ್ನು ಉದ್ದೇಶಿಸಿ ಮಾತನಾಡಿದರು. ಈ ಕಾರ್ಯಕ್ರಮಕ್ಕೆ ಶ್ರೀ ಅರವಿಂದ ಸಂಕೀರ್ಣದ ಸಿಬ್ಬಂದಿ ವರ್ಗದವರು ಮತ್ತು ಮಿರಾಂಬಿಕಾ ಶಾಲೆಯ ಸಿಬ್ಬಂದಿ ವರ್ಗದವರು ಹಾಜರಿದ್ದರು.

ದಿನಾಂಕ 18ನೇ ಜನವರಿ 2015ರ ಭಾನುವಾರದಂದು ಡಾ.ನಾರಾಯಣರೆಡ್ಡಿ–ಯವರ ಕೃತಿ "Yoga of King Aswapathy" ಎಂಬ ಪುಸ್ತಕವನ್ನು

ಶ್ರೀ ಅರವಿಂದ ಸಂಕೀರ್ಣದ ಕಾರ್ಯನಿರ್ವಾಹಕ ಧರ್ಮದರ್ಶಿ ಹಾಗೂ ಶ್ರೀ ಅರವಿಂದೋ ಸೊಸೈಟಿ ರಾಜ್ಯ ಸಮಿತಿ, ಕರ್ನಾಟಕದ ಅಧ್ಯಕ್ಷರು ಆದ ಶ್ರೀ ಅಜಿತ್ ಸಬ್ನೀಸ್‌ರವರು ಬಿಡುಗಡೆಗೊಳಿಸಿದರು. ತತ್ಸಂಬಂಧ 11 ಗಂಟೆಯಿಂದ 12.30 ಗಂಟೆಯವರೆಗೆ "It was the hour before the Gods awake (Savitri Book One Canto One P.1)" ಎಂಬ ವಿಷಯದ ಬಗ್ಗೆ ಡಾ. ನಂದಕುಮಾರ್ ಎ.ಕೆ. ವೇಲು, ಶ್ರೀ ಅರವಿಂದೋ ಸೊಸೈಟಿ, ತಿರುಚಿ ಕೇಂದ್ರ, ಇವರು ಉಪನ್ಯಾಸ ನೀಡಿದರು. ಈ ಕಾರ್ಯಕ್ರಮಕ್ಕೆ ಅನೇಕ ಗುರು–ಬಂಧುಗಳು ಆಗಮಿಸಿದ್ದರು.

ದಿನಾಂಕ 23/1/2015ರಂದು ಮಿರಾಂಬಿಕಾ ಸ್ಕೂಲ್ ಫಾರ್ ನ್ಯೂ ಏಜ್ ಶಿಕ್ಷಣ ಸಂಸ್ಥೆಯಲ್ಲಿ "ಶ್ರೀ ಚಂದ್ರಮಣಿ ಎಂಡೋಮೆಂಟ್ ಪ್ರಶಸ್ತಿ"ಗಾಗಿ ವಿದ್ಯಾರ್ಥಿಗಳಿಗೆ ಮೌಲ್ಯಾಧಾರಿತ ಕಿರುಪ್ರಹಸನ ಸ್ಪರ್ಧೆಯು ಏರ್ಪಡಿಸಲಾಗಿತ್ತು. ಸ್ಪರ್ಧೆಯ ತೀರ್ಪುಗಾರರಾಗಿ ಶ್ರೀಮತಿ ಕಮಲಾ ಚಂದ್ರಮಣಿ ಮತ್ತು ಶ್ರೀಮತಿ ಸುಭಾಷಿಣಿ ಆಗಮಿಸಿದ್ದರು. ನಾಲ್ಕು ವಿಭಾಗಗಳ ಮಧ್ಯೆ ಸ್ಪರ್ಧೆ ಏರ್ಪಡಿಸಲಾಗಿತ್ತು. ಪ್ರಗತಿ ವಿಭಾಗದವರು ಪ್ರಥಮ ಸ್ಥಾನವನ್ನು ಗೆದ್ದುಕೊಂಡರು. ದ್ವಿತೀಯ ಸ್ಥಾನದಲ್ಲಿ ಶ್ರದ್ಧಾ ಮತ್ತು ತೃತೀಯ ಸ್ಥಾನವನ್ನು ಪೂರ್ಣ ವಿಭಾಗದವರು ತಮ್ಮದಾಗಿಸಿಕೊಂಡರು. ಪ್ರಶಸ್ತಿ ವಿಜೇತರಿಗೆ ಶ್ರೀಮತಿ ಕಮಲಾ ಚಂದ್ರಮಣಿ ಪ್ರಶಸ್ತಿ ವಿತರಿಸಿದರು. ಶಾಲಾ ಆಡಳಿತಾಧಿಕಾರಿ ಶ್ರೀಮತಿ ಪ್ರತಿಭಾ ಸಬ್ನೀಸ್ ಮತ್ತು ಪ್ರಾಂಶುಪಾಲರಾದ ಶ್ರೀಮತಿ ಶಾರದಾಂಬಾ ಉಪಸ್ಥಿತರಿದ್ದರು.

ದಿನಾಂಕ 26/1/2015ರಂದು ಮಿರಾಂಬಿಕಾ ಸ್ಕೂಲ್ ಫಾರ್ ನ್ಯೂ ಏಜ್ ಶಾಲೆಯಲ್ಲಿ 66ನೇ ಗಣರಾಜ್ಯೋತ್ಸವ ಕಾರ್ಯಕ್ರಮವನ್ನು ಆಚರಿಸಲಾಯಿತು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ಶಾಲಾ ಅಧ್ಯಕ್ಷರಾದ ಶ್ರೀ ಅಜಿತ್ ಸಬ್ನೀಸ್‌ರವರು ಧ್ವಜಾರೋಹಣ ಮಾಡಿ ವಿವಿಧತೆಯಲ್ಲಿ ಏಕತೆಯನ್ನು ಹೊಂದಿದ ಭಾರತದ ಪ್ರಜೆಗಳಾದ ನಮ್ಮ ಕರ್ತವ್ಯದ ಬಗ್ಗೆ ಎಚ್ಚರಿಸಿದರು. ಶಾಲಾ ವಿದ್ಯಾರ್ಥಿಗಳು ಗಣರಾಜ್ಯೋತ್ಸವದ ಮಹತ್ವ ಕುರಿತು ಭಾಷಣ ಮತ್ತು ದೇಶಭಕ್ತಿಗೀತೆಗಳನ್ನು ಹಾಡಿದರು. ವಂದೇ ಮಾತರಂ ಗೀತೆಯೊಂದಿಗೆ ಕಾರ್ಯಕ್ರಮ ಸಮಾಪ್ತಿಯಾಯಿತು.

## ಶ್ರೀ ಅರವಿಂದೋ ಸೊಸೈಟಿ, ಲೋಣಿ (ಬಿ.ಕೆ.) ಕೇಂದ್ರ (ಕೆ.ಸಿ. 22)

ಕೇಂದ್ರದ 6ನೆಯ ವಾರ್ಷಿಕ ಕಾರ್ಯಕ್ರಮವನ್ನು ದಿನಾಂಕ: 18.01.2015ರಂದು ಆಚರಿಸಲಾಯಿತು. ಮುಖ್ಯ ಅತಿಥಿಗಳಾಗಿ ಡಾ॥ ವ್ಹಿ.ಡಿ. ಐಹೊಳ್ಳಿ, ಪ್ರಾಧ್ಯಾಪಕರು, ಜೆ.ಎಸ್.ಎಸ್. ಶಿಕ್ಷಣ ಮಹಾವಿದ್ಯಾಲಯ ವಿಜಾಪುರ




ಹಾಗೂ ಡಾ॥ ಶ್ರೀಮತಿ ಅಕ್ಕಮಹಾದೇವಿ ಡೋಣಗಾವ, ಚಡಚಣ ಅವರು ಆಗಮಿಸಿದ್ದರು. ಡಾ॥ ಐಹೊಳ್ಳಿಯವರು ಧ್ಯಾನದ ಬಗ್ಗೆ ವಿವರವಾಗಿ ತಿಳಿಸಿ–ಕೊಟ್ಟರು. ಲೋಣಿಯಂತಹ ಪುಟ್ಟ ಗ್ರಾಮದಲ್ಲಿ ಮಹಿಳೆಯರೇ ಈ ಕೇಂದ್ರವನ್ನು ಹುಟ್ಟುಹಾಕಿ, ಸ್ವತಂತ್ರ ಕಟ್ಟಡವನ್ನು ಸುಂದರವಾಗಿ ಕಟ್ಟಿಕೊಂಡು ತಮ್ಮ ಕೇಂದ್ರದ 6ನೆಯ ವಾರ್ಷಿಕೋತ್ಸವವನ್ನು ಆಚರಿಸುತ್ತಿರುವುದು ಶ್ಲಾಘನೀಯ. ನಿಜವಾಗಿಯೂ ಇಲ್ಲಿ ಶ್ರೀಮಾತಾರವಿಂದರ ಶಕ್ತಿ ಕೆಲಸ ಮಾಡುತ್ತದೆ. ಈ ಕೇಂದ್ರ ಇನ್ನೂ ಬೆಳೆಯಲಿ ಎಂದು ಹಾರೈಸಿದರು. ಅಲ್ಲದೆ ಕೇಂದ್ರದ ಬಗ್ಗೆ ಒಂದು ಆಶು ಕವಿತೆಯನ್ನೂ ಬರೆದು ಹಾಡಿದರು.

ಡಾ॥ ಅಕ್ಕಮಹಾದೇವಿ ಡೋಣಗಾವ ಅವರು ಕಳೆದ ನವ್ಹಂಬರ (2014)ರಲ್ಲಿ ಮೊದಲಸಲ ಆಶ್ರಮಕ್ಕೆ ಹೋಗಿ "Aspiration for right attitude" ಸಂಕಿರಣದಲ್ಲಿ ಭಾಗವಹಿಸಿದರು. ತಮ್ಮ ಮೊದಲ ದರ್ಶನದ ಅನುಭವವನ್ನು ಭಾವಪೂರಿತರಾಗಿ ವಿವರಿಸಿದರು. ನಮ್ಮಲ್ಲಿ ಶ್ರೀಮಾತಾರವಿಂದರ ಕೃಪೆಯಲ್ಲಿ ನಂಬಿಕೆ, ಭರವಸೆ ಇರಬೇಕು. ನಮಗೆ ಬೇಕಾದ್ದು ನಮಗೆ ಗೊತ್ತಿಲ್ಲ. ಆದರೆ ಅವರಿಗೆ ಗೊತ್ತಿದೆ. ನಮ್ಮಲ್ಲಿ ಅಭೀಪ್ಸೆ ಇದ್ದರೆ ನಮ್ಮ ಮುಂದೆ ಹೊಸ ಕ್ಷಿತಿಜವೇ ತೆರೆದುಕೊಳ್ಳುತ್ತದೆ ಎಂದು ಹೇಳಿದರು.

ಚಡಚಣದ ಪಿ.ಯು. ಕಾಲೇಜಿನ ಪ್ರಾಚಾರ್ಯರಾದ ಡಾ॥ ಎಸ್.ಕೆ. ಕುಲಕರ್ಣಿಯವರು 'ಸಮರ್ಪಣ' ಬಗ್ಗೆ, ಶ್ರೀ ಕೆ. ರವೀಂದ್ರನಾಥ ಅವರು ಉತ್ತರ ಕರ್ನಾಟಕಕ್ಕೆ ಶ್ರೀ ಅರವಿಂದರನ್ನು ಪರಿಚಯಿಸಿದವರು ಮಧುರಚೆನ್ನರು, ಅವರ ಸಾಧನೆ ಅವಿಸ್ಮರಣೀಯ ಎಂದು ಹೇಳಿದರು. ಶ್ರೀ ಸಿದ್ಧೇಶ್ವರ ಶಿಕ್ಷಣ ಸಂಸ್ಥೆಯ ಛೇರ್ಮನ್‌ರಾದ ಶ್ರೀ ಬಿ.ಎಂ. ಕೋರೆಯವರು ತಮ್ಮ ಅಧ್ಯಕ್ಷೀಯ ಭಾಷಣದಲ್ಲಿ ಈ ಕೇಂದ್ರದ ಕಟ್ಟಡಕ್ಕೆ ಬೇಕಾಗಿರುವ ಕಾಂಪೌಂಡ್ ಗೋಡೆಯನ್ನು ಯಾವುದೇ ಪರಿಸ್ಥಿತಿಯಲ್ಲಿ ಕಟ್ಟಿಸಿಕೊಡುವುದಾಗಿ ಹೇಳಿದರು. ಸಾನ್ನಿಧ್ಯ ವಹಿಸಿದ್ದ ಶ್ರೀ ಮಹಾದೇವ ಶಾಸ್ತ್ರಿಗಳು ಚಿತ್ತವೃತ್ತಿ ನಿರೋಧವೇ ಯೋಗ. ಅದನ್ನು ಶ್ರೀ ಅರವಿಂದರು ಎಂದೋ ಸಾಧಿಸಿದ್ದರು. ಮನಸ್ಸು ಮೌನವಾಗಬೇಕು, ಅದುವೇ ಧ್ಯಾನವಾಗುವುದು ಎಂದು ಆಶೀರ್ವಚನ ನೀಡಿದರು.

ಶ್ರೀ ಶ್ರೀನಿವಾಸಕುಲಕರ್ಣಿಯವರು ಸ್ವಾಗತ ಕೋರಿದರು. ವಲಯ ಉಪಾಧ್ಯಕ್ಷರಾದ ಶ್ರೀ ಪುರುಷೋತ್ತಮ ಗಲಗಲಿಯವರು ಪ್ರಾಸ್ತಾವಿಕ ನುಡಿಗಳ–ನ್ನಾಡಿದರು. ರಾಜ್ಯ ಸಂಯೋಜಕರಾದ ಡಾ॥ ಜಗದೀಶ ಉಪಸ್ಥಿತರಿದ್ದರು. ವಿಜಾಪುರ, ಚಡಚಣ, ಹಲಸಂಗಿ, ಏಳಗಿ ಮೊದಲಾದ ಕೇಂದ್ರಗಳಿಂದ ಗುರು–ಬಂಧುಗಳು ಆಗಮಿಸಿದ್ದರು. ಕೇಂದ್ರದ ಅಭಿವೃದ್ಧಿಗಾಗಿ ಗುರು ಬಂಧು–ಭಗಿನಿಯರು 9205/–ರೂ. ಕಾಣಿಕೆಯನ್ನು ಅರ್ಪಿಸಿದರು. ಶ್ರೀ ಶ್ರೀನಿವಾಸ ಕುಲಕರ್ಣಿಯವರು ವಂದನಾರ್ಪಣೆ ಮಾಡಿದರು.



*"Keep only my soul to adore eternally*
*And meet Thee in each form*
*and soul of Thee."*

- Sri Aurobindo

RNI No. 22511/1971
No. of Pages 60 + 4 (Cov. Page)
KAR Reg No : RNP/KA/BGS/368/2015-2017
Permitted to Post 10th of Every Month. Reg. Valid till : 31-12-2017
Licensed to Post at MBC, Bengaluru GPO, Bengaluru - 560 001

ಶ್ರೀ ಅರವಿಂದ ಸಂಕೀರ್ಣದಲ್ಲಿ ನಿರ್ಮಿಸಲಾಗಿರುವ ಅತಿಥಿ ಗೃಹವು ಈಗಾಗಲೇ ತಿಳಿಸಿರುವಂತೆ ಗುರುಬಂಧುಗಳ ಉಪಯೋಗಕ್ಕಾಗಿ ತೆರೆಯಲಾಗಿದೆ. ಈ ಅತಿಥಿ ಗೃಹದಲ್ಲಿ ತಂಗಲು ಬರುವ ಗುರು-ಬಂಧುಗಳ ಅನುಕೂಲಕ್ಕಾಗಿ ಊಟ ಮತ್ತು ವಸತಿ ವ್ಯವಸ್ಥೆಯನ್ನು ಕೂಡ ಸೂಕ್ತ ದರಗಳಲ್ಲಿ ಅನುವುಗೊಳಿಸಲಾಗಿದೆ. ಶ್ರೀ ಅರವಿಂದ ಸೊಸೈಟಿ ಸದಸ್ಯರುಗಳಿಗೆ ರಿಯಾಯಿತಿಯಲ್ಲಿ ವಸತಿ ಊಟಗಳ ವ್ಯವಸ್ಥೆ ಇದೆ. ಇದಕ್ಕಾಗಿ ಸದಸ್ಯರು ತಮ್ಮ ಚಾಲ್ತಿಯಲ್ಲಿರುವ ಸದಸ್ಯತ್ವದ ಚೀಟಿಯನ್ನು ತೋರಿಸಬೇಕಾಗುತ್ತದೆ.

**ತತ್ಸಂಬಂಧ ಸಂಪರ್ಕಿಸಬೇಕಾದ ವಿಳಾಸ :**

ಆ್ಯಡ್‌ಮಿನಿಸ್ಟ್ರೇಟಿವ್ ಮ್ಯಾನೇಜರ್
ಶ್ರೀ ಅರವಿಂದ ಸಂಕೀರ್ಣ, ಶ್ರೀ ಅರವಿಂದ ಮಾರ್ಗ
ಜೆ.ಪಿ.ನಗರ ಮೊದಲನೇ ಹಂತ, ಬೆಂಗಳೂರು - 560 078
ದೂರವಾಣಿ : 080-22449882, 22459628

Ed. : Dr. K.S. Amur, M.Sc., PhD, Pub : Ajit S. Sabnis.
Ptd. by M/s Seshaasai e-forms Pvt. Ltd.,
on behalf of Sri Aurobindo Complex Trust, 'Sri Aurobindo Marg',
J.P. Nagar I Phase,Bengaluru - 560 078. Phone : 080 - 2244 9882.